
ಐನ್‌ಸ್ಟೈನ್

ಯಳನಾಡು ಅಂಜನಪ್ಪ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಆಲ್ಬರ್ಟ್ ಐನ್‌ಸ್ಟೈನ್

ಯಳನಾಡು ಆಂಜನಪ್ಪ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು - ೫೬೦ ೦೦೨

ALBART IANSTAIN - Written by Yalanadu Anjana and Published by Karnataka Sahitya Akademy, Nrupatu Road, Bangalore-560 002.

First Publication - 1994 Pages : viii+

ಹಕ್ಕುಗಳು : ಲೇಖಕರವು

ಮೊದಲನೇ ಮುದ್ರಣ : ೧೯೯೪

ವಿಶೇಷ ನೆರವು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪ್ರಧಾನ ಸಂಪಾದಕರು:
ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು:
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ:
ಸಿ. ಚಂದ್ರಶೇಖರ್

ಬೆಲೆ : ಮೂರು ರೂಪಾಯಿಗಳು

ಮುದ್ರಕರು :
ಲಾವಣ್ಯ ಮುದ್ರಣ
೧೯, ವಿದ್ಯಾಪೀಠ ಸರ್ಕಲ್,
ಬೆಂಗಳೂರು - ೫೬೦ ೦೫೦

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ..ಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃ ..ರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ..ತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ; ..ಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ..ಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ..ಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ..ವಾರ್ಥ ಶಕ್ತಿಗಳಿಗೂ ಚಲನಶೀಲ ಪರವಾದ ಚೇತನಗಳಿಗೂ ಮುಖಾಮುಖಿ ..ನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ..ರೂಪದಲ್ಲಿ ವ್ಯತ್ಯಾಸಗಳಿರಬಹುದು; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರ ..ಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ..ುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ..ುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ..ದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ..ಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ..ರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ..ಳೆಯದಾಗಬಹುದಾದರೂ, ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ ..ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ..ುರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ..ವೇಕದ ಮೂಲಕ ಎಲ್ಲ ಕಾಲದ ಚಿಂತನೆಗಳನ್ನು ತೂಗಿ ನೋಡುವ ಮೂಲಕ

ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು ವಿಜ್ಞಾನಿಗಳು, ಕವಿ - ಕಲಾವಿದರು, ಕ್ರಾಂತಿಕಾರಿಗಳು - ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡು ಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರ ಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು ಒಪ್ಪುವುದಿಲ್ಲ; ಅಮಾನವೀಯತೆಯನ್ನು ಪೋಷಿಸುವುದಿಲ್ಲ. ಆದರೆ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರುಧ್ಯಗಳಿರಬಹುದು. ಒಟ್ಟಾರೆ ಒಂದಷ್ಟು ಮರು ಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟು ಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ

ಪರಿಚಯಾತ್ಮಕವೂ, ಚಿಂತನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದು ಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯುವುದಕ್ಕೆ ಮೊದಲು ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್.ವಿಶ್ವನಾಥ್ ಅವರು; ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರುಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್.ಎನ್.ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಷ.ರಾ. ಕುಲಕರ್ಣಿಯವರಿಗೂ, ಕಾರ್ಯದರ್ಶಿಗಳಾದ ಡಾ: ಪಿ.ಎಸ್.ರಾಮಾನುಜಂ ಅವರಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು.

ಅಕ್ಟೋಬರ್ ೧೯೯೪
ಬೆಂಗಳೂರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ನವೆಂಬರ್ ೧೯೯೪ — ಯಳನಾಡು ಆಂಜನಪ್ಪ

ಆಲ್ಬರ್ಟ್ ಐನ್‌ಸ್ಟೈನ್

ಅಧ್ಯಾಯ - ೧

ಅಶ್ರುವಾದ ಅಂತಃಕರಣ

ಅಂದು ಆಗಸ್ಟ್ ೬, ೧೯೪೫. ಮಧ್ಯಾಹ್ನದ ನಿದ್ದೆ ಸ್ವಲ್ಪ ಜ್ಞಾದ್ದರಿಂದ ಇನ್ನೂ ಮಂಪರು ಹರಿದಿರಲಿಲ್ಲ. ಲಾಂಗ್ ಐಲೆಂಡಿನ ಲ್ಡ್‌ಗ್ರೂವ್ ರಸ್ತೆಯಲ್ಲಿದ್ದ ಮನೆಯ ಉಪ್ಪರಿಗೆಯ ಮೇಲಿನ ತಮ್ಮ ಠಡಿಯಿಂದ ಎದ್ದು ಹೊರಬಂದು ಆಕಾಶದ ಕಡೆ ನೋಡಿದರು. ಗಲೇ ಸೂರ್ಯ ಪಶ್ಚಿಮದಲ್ಲೆಲ್ಲ ಕೆಂಪನ್ನು ಮನಸಾ - ಇಚ್ಛೆ ಗ್ಗಾಡಿ ಮರೆಯಾಗಿ ಹೋಗಿದ್ದ. ಚಹಾ ಸೇವನೆಗಾಗಿ ಮೆಟ್ಟಿ ಳಿದು ಕೆಳಗೆ ಬಂದರು. ಆಗತಾನೆ ಕೇಳಿದ್ದ ಬಾನುಲಿ ವಾರ್ತೆಯನ್ನು ಮುಟ್ಟಿಸಲು ಕಾತುರದಿಂದ ಕೆಳಗೆ ಕಾಯುತ್ತಿದ್ದ ಕಾರ್ಯದರ್ಶಿ ಹೆಲೆನ್ ಡ್ಯೂಕಾಸ್ ತನ್ನ ಯಜಮಾನರು ಇಳಿದು ಬಂದದ್ದನ್ನು ಕಂಡ ತಕ್ಷಣ ಂತಲ್ಲಿಂದ ಎದ್ದು ಏನನ್ನೋ ಹೇಳಲು ಮುಂದಾಗಿ ಸುಮ್ಮನೆ ಂತಳು. ತನ್ನ ಕಾರ್ಯದರ್ಶಿಯ ಆತಂಕವನ್ನು ಕಂಡ ಯಜಮಾನ ಲ್ಲಿ ಕುತೂಹಲ ಉಂಟುಮಾಡಿತು. ಅದೇನು ಹೇಳು ಎನ್ನುವವರಂತೆ

ಕಾರ್ಯದರ್ಶಿಯ ಕಡೆ ನೋಡಿದರು. ಸುದ್ದಿಯನ್ನು ಇನ್ನೂ ಬಹಳಕಾಲ ಅದುಮಿಟ್ಟುಕೊಳ್ಳುವಷ್ಟು ಸಾಮರ್ಥ್ಯ ಆಕೆಯಲ್ಲಿ ಇದ್ದಂತೆ ಕಾಣಲಿಲ್ಲ. ಚಹಾ ತುಂಬಿದ ಕಪ್ ಸಾಸರನ್ನು ಯಜಮಾನರ ಕೈಗೆ ಕೊಡುತ್ತ 'ಸ್ವಲ್ಪ ಹೊತ್ತಿನ ಹಿಂದೆ ಅಮೆರಿಕಾದ ವಿಮಾನಗಳು ಜಪಾನಿನ ಹಿರೋಷಿಮಾ ನಗರದ ಮೇಲೆ ಪರಮಾಣು ಬಾಂಬನ್ನು ತಾಡಿಸಿದವು' ಎಂದಳು ಮುಗ್ಧತೆಯ ಹೆಮ್ಮೆಯಿಂದ. ಕಪ್‌ನಲ್ಲಿದ್ದ ಚಹಾ ಬಿಸಿಯಾಗಿದ್ದರಿಂದ ಊದ್ರ ಹೊರಬರುತ್ತಿತ್ತು. ಸುದ್ದಿ ಕೇಳಿದ್ದೇ ತಡ ಯಜಮಾನರ ಬುದ್ಧಿಗೆ ಕತ್ತಲು ಕವಿದಂತಾಯಿತು. ಸ್ವಲ್ಪ ಹೊತ್ತು ಹಾಗೇ ನಿಂತಲ್ಲೇ ನಿಂತರು. ಯಜಮಾನರಲ್ಲಿದ್ದ ಮಾನವಾಂತಃಕರಣ ಕರುಣೆಯ ಆಕ್ರಂದನವಾಗಿ ಮಾರ್ಪಟ್ಟು 'ಅಯ್ಯೋ. . .' ಎನ್ನುವ ಉದ್ಗಾರ ಬಾಯಿಂದ ಹೊರಟಿತು. ಕೈನಲ್ಲಿದ್ದ ಚಹಾ ತುಂಬಿದ್ದ ಕಪ್ ಸಾಸರ್ ಗಡಗಡ ನಡುಗಿ ಕೆಳಗೆ ಬಿದ್ದು ಚೂರುಚೂರಾದವು. ಸಹಸ್ರ ಸೂರ್ಯಗಳಿಗೂ ಅಧಿಕ ಪ್ರಾಜ್ವಲ್ಯದ ವಾಸ್ತವ ಘಟನೆ ಅದಾಗಿತ್ತು.

ಯಾರು ಪರಮಾಣು ಬಾಂಬಿನ ಹುಟ್ಟಿಗೆ ಮೂಲ ಕಾರಣರಾಗಿದ್ದರೋ, ಯಾರು ಪರಮಾಣು ಶಕ್ತಿಯನ್ನು ಶಾಂತಿಗಾಗಿ ಹಾಗೂ ಮಾನವ ಕಲ್ಯಾಣಕ್ಕಾಗಿ ಬಳಕೆಯಾಗಬೇಕೆಂದು ಬಯಸಿದ್ದರೋ; ಅಂತಹವರ ಉದ್ದೇಶ ಇಂದು ಚೂರು ಚೂರಾಗಿ ಸಿಡಿದು ಬೂದಿಯಾಗಿತ್ತು. ಈ ಕಾರಣಕ್ಕಾಗಿ ನೋವು ತುಂಬಿದ 'ಅಯ್ಯೋ . . . ' ಎನ್ನುವ ಉದ್ಗಾರ ಅವರ ಬಾಯಿಂದ ಹೊರಬಂದಿತ್ತು.

ವಾಚಕ ಮಹಾಶಯರೆ! ಹೀಗೆ ಉದ್ಗಾರ ತೆಗೆದು ದುಃಖಿಸಿದ ಮಹನೀಯರು ಯಾರಿರಬಹುದು? ಎನ್ನುವ ಪ್ರಶ್ನೆ ನಿಮ್ಮನ್ನು ಕಾಡುತ್ತಿರುವುದರಿಂದ ಇಷ್ಟು ಹೊತ್ತಿಗೆ ಯಾರು ಯಾರನ್ನೋ ನೀವು ಊಹಿಸಿಕೊಂಡಿರಲು ಸಾಧ್ಯವಿದೆ. ಆ ನಿಮ್ಮ ಕಷ್ಟ ತಪ್ಪಿಸಲು ನಾನೇ

ಅವರ ಹೆಸರು ಹೇಳಿಬಿಡುತ್ತೇನೆ. ಆ ವ್ಯಕ್ತಿ ಯಾರೆಂದರೆ ಅವರೇ ಆಲ್ಬರ್ಟ್ ಐನ್‌ಸ್ಟೈನ್.

ಐನ್‌ಸ್ಟೈನ್‌ರಿಗೆ ಇನ್ನೂ ನಿಲ್ಲಲು ಕಾಲುಗಳಲ್ಲಿ ತ್ರಾಣವಿಲ್ಲದೆ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಸಿದು ಕುಳಿತರು. ಕಾರ್ಯದರ್ಶಿ ಬಟನ್ನನ್ನು ಒತ್ತಿ ಸೀಲಿಂಗ್ ಫ್ಯಾನನ್ನು ಆನ್ ಮಾಡಿದಳು. ಬೀಸಿದ ಗಾಳಿಯಿಂದ ಸಾವರಿಸಿಕೊಂಡ ಐನ್‌ಸ್ಟೈನರಿಗೆ ಸ್ವಲ್ಪ ಹಾಯೆನಿಸಿತು. ತಲೆಯಮೇಲಿನ ಬಲ್ಬು ಉರಿಯುತ್ತಿತ್ತು. ನೆನಪಿನ ಸುರುಳಿ ಬಿಚ್ಚಿಕೊಂಡಿತು.

ಪುಟ್ಟ ದೇಶವಾದ ಜರ್ಮನಿ ಉಗ್ರವಾದ ರಾಷ್ಟ್ರೀಯತೆಯ ಅಮಲಿನಿಂದ ಪ್ರಪಂಚ ಸಾರ್ವಭೌಮತ್ವ ಗಳಿಸಲು ಸೇನಾಚರಣೆಗಳಿಗೆ ಶರಣು ಹೋಗಿತ್ತು. ಜರ್ಮನಿಯ ಸರ್ವ ಅಧಿಕಾರದ ಸೂತ್ರ ಹಿಡಿದಿದ್ದ ಹಿಟ್ಲರ್ ಅಧಿಕಾರಕ್ಕೆ ಬಂದು ಆಗಲೇ ಆರು ಭೀಕರ ವರ್ಷಗಳು ಕಳೆದಿದ್ದವು. ಆತ ರಕ್ತ ಪಿಪಾಸುವಾಗಿ ಪಕ್ಕದ ಪೋಲೆಂಡಿನ ಮೇಲೆ ಸೈನ್ಯವನ್ನು ನುಗ್ಗಿಸಿ ಎರಡನೇ ಮಹಾಯುದ್ಧವನ್ನು ಸಾರಿಯೇ ಬಿಟ್ಟಿದ್ದ. ಬ್ರಿಟನ್ ಹಿಟ್ಲರನ ವಿರುದ್ಧ ಯುದ್ಧ ಘೋಷಿಸಿತ್ತು. ಬ್ರಿಟನ್‌ಗೆ ಬೆಂಬಲವಾಗಿ ಅಮೆರಿಕಾ ಮುಂತಾದ ರಾಷ್ಟ್ರಗಳು ನಿಂತರೆ ಜಪಾನ್ ಜರ್ಮನಿಯನ್ನು ಬೆಂಬಲಿಸಿತ್ತು. ಪ್ರಪಂಚವಿಡೀ ಯುದ್ಧ ಕಂಪನದಿಂದ ಬಿಸಿಯಾಗಿತ್ತು. ಹಿಟ್ಲರನ ನರಮೇಧವನ್ನು ಕಂಡು, ಕೇಳಿದ ಮಾನವ ಜನಾಂಗ ಭಯದಿಂದ ತತ್ತರಿಸಿತ್ತು.

ಫ್ಯಾಸಿಸ್ಟರ ಹಾಗೂ ನಾಜಿಗಳ ದೌರ್ಜನ್ಯಕ್ಕೆ ಗುರಿಯಾಗಿ ಯಹೂದಿಗಳ ಕೊಲೆ ಮತ್ತು ಜೀವಂತ ದಹನ ಬಹಳ ಸುವ್ಯವಸ್ಥಿತವಾಗಿ ಹಾಗೂ ಅತಿ ಕ್ರೂರವಾಗಿ ನಡೆಯುತ್ತಿದ್ದಾಗ ತನ್ನಂತೆ ತಮ್ಮ ತಾಯ್ನಾಡಾದ ಜರ್ಮನಿಯನ್ನು ತೊರೆದು ಬಂದು ಅನೇಕ ಜನ ವಿಜ್ಞಾನಿಗಳು ಒಂದಲ್ಲ ಒಂದು ಕಾರಣದಿಂದ ಅಮೆರಿಕಾ ಸಂಯುಕ್ತ

ಸಂಸ್ಥಾನಗಳಲ್ಲಿ ನೆಲೆ ನಿಂತಿದ್ದರು. ಆದರೂ ಜರ್ಮನಿಯಲ್ಲಿ ಇನ್ನೂ ಉಳಿದುಕೊಂಡಿದ್ದ ವಿಜ್ಞಾನಿಗಳ ಸಾಮರ್ಥ್ಯವನ್ನು ಅಲ್ಪವೆಂದು ಪರಿಗಣಿಸುವಂತಿರಲಿಲ್ಲ. ಅವರ ಸಾಮರ್ಥ್ಯ ಪ್ರಪಂಚಕ್ಕೇ ಅರಿವಾಗುತ್ತಾ ಬಂದಿತ್ತು. ಆಟೋ ಹ್ಯಾನ್ ಹಾಗೂ ಫ್ರಿಟ್ಸ್ ಸ್ಟ್ರಾಸ್‌ಮ್ಯಾನ್ ಇವರುಗಳು ಜೊತೆಗೂಡಿ ೧೯೩೮ನೇ ಇಸವಿ ಡಿಸೆಂಬರ್‌ನಲ್ಲಿ ನಡೆಸಿದ ಪ್ರಯೋಗದಲ್ಲಿ ಯುರೇನಿಯಂ ಎನ್ನುವ ವಿಕಿರಣಶೀಲ ಮೂಲವಸ್ತುವಿನ ಕೇಂದ್ರಕಣವನ್ನು ಭೇದಿಸಿ ಯಶಸ್ವಿಯಾಗಿದ್ದರು. ಹಾಗೂ ಪರಮಾಣು ಬಾಂಬಿನ ತತ್ವವನ್ನೂ ಕಂಡುಹಿಡಿದಿದ್ದರು.

ಆಟೋ ಹ್ಯಾನ್ ಜೊತೆಗೂಡಿ ಸುಮಾರು ಮೂವತ್ತು ವರ್ಷಗಳ ಕಾಲ ಸಂಶೋಧನ ಸಹವರ್ತಿಯಾಗಿದ್ದ ಆಸ್ಟ್ರಿಯಾ ಸಂಜಾತೆ ಲೈಸ್ ಮೈಟ್ನರ್ ಎನ್ನುವ ಯಹೂದಿ ಮಹಿಳೆ ನಾಜಿಗಳ ಉಪಟಳ ತಾಳಲಾರದೆ ಸ್ವೀಡನ್ನಿನ ಸ್ಟಾಕ್ ಹೋಮ್‌ಗೆ ಓಡಿ ಹೋಗಿದ್ದಳು. ಡೆನ್ಮಾರ್ಕಿನ ಕೂಪನ್ ಹೇಗನ್ನಿನಲ್ಲಿ ನೀಲ್ಸ್‌ಬೋರ್ ಜೊತೆ ಸಂಶೋಧನ ಸಹಾಯಕರಾಗಿದ್ದ ಮೈಟ್ನರ್ ಅವರ ಸೋದರಳಿಯ ಫ್ರಿಶ್ ಕೆಲವುದಿನ ಅತ್ತೆಯ ಜೊತೆಯಲ್ಲಿ ಹಾಯಾಗಿ ಕಳೆಯಲೆಂದು ಸ್ಟಾಕ್ ಹೋಮ್‌ಗೆ ಬಂದಿದ್ದ. ೧೯೩೮ ಡಿಸೆಂಬರ್ ೨೨ರಂದು ಹ್ಯಾನ್‌ರಿಂದ ಮೈಟ್ನರ್‌ಗೆ ಹೇಗೋ ಗುಪ್ತವಾಗಿ ಒಂದು ಪತ್ರ ಬಂದು ತಲುಪಿತು. ಅದರಲ್ಲಿ ಅವರು ತಮ್ಮ ಪ್ರಯೋಗದ ಯಶಸ್ಸನ್ನು ವಿವರಿಸಿದ್ದರು. ಅತ್ತೆ ಮತ್ತು ಅಳಿಯ ಇಬ್ಬರೂ ಹ್ಯಾನ್‌ರ ಪ್ರಯೋಗದ ಯಶಸ್ಸನ್ನು ಚರ್ಚಿಸಿ ಸಂತೋಷಿಸಿದ್ದರು. ಫ್ರಿಶ್ ಕೂಪನ್ ಹೇಗನ್ನಿಗೆ ಮರಳಿ ಬಂದ ದಿನವೇ ಅಮೆರಿಕಾಕ್ಕೆ ಹೊರಟಿದ್ದ ನೀಲ್ಸ್ ಬೋರ್ ಅವರ ಗಮನಕ್ಕೆ ವಿಷಯವನ್ನು ಸ್ಥೂಲವಾಗಿ ತುರಾತುರಿಯಲ್ಲಿ ತಂದಿದ್ದ.

ಪರಮಾಣು ವಿದಳನ ಕ್ರಿಯೆ ಹಾಗೂ ಪರಮಾಣು ಬಾಂಬಿನ ತತ್ವದ ಆವಿಷ್ಕಾರ ಆಗಲೇ ಜರ್ಮನಿಯಲ್ಲಾಗಿದೆ ಎನ್ನುವ ಸುದ್ದಿ

ನೀಲ್ಸ್ ಬೋರ್ ಅವರಿಂದ ತಿಳಿದದ್ದೇ ತಡ ಅಮೆರಿಕಾದ ವಿಜ್ಞಾನಿಗಳಲ್ಲಿ ತಳಮಳ ಹಾಗೂ ಭೀತಿಯನ್ನುಂಟುಮಾಡಿತ್ತು. ಅಮೆರಿಕಾದಲ್ಲಿ ವಾಸವಾಗಿದ್ದ ಹಂಗೆರಿಯ ಸಂಜಾತ ಲಿಯೋ ಝೀಲಾರ್ಡ್, ಇಟಲಿ ಸಂಜಾತ ಎನ್ರಿಕೋ ಫರ್ಮಿ, ಯೂಜಿನ್ ವಿಗ್ನರ್ ಮುಂತಾದ ಭೌತ ವಿಜ್ಞಾನಿಗಳೂ ಇದೇ ಸಮಯದಲ್ಲಿ ಪರಮಾಣು ಬಾಂಬಿನ ತತ್ವದ ಆವಿಷ್ಕಾರದ ಕೊನೆಯ ಹಂತದಲ್ಲಿದ್ದರು. ಬರ್ಲಿನ್‌ನಲ್ಲಿ ಓದಿ ಡಾಕ್ಟರೇಟ್ ಪಡೆದಿದ್ದ ಯಹೂದಿ ಝೀಲಾರ್ಡ್ ನಾಜಿಗಳ ಕೊಲೆಗಡುಕ ಕೃತ್ಯಗಳಿಂದ ತಪ್ಪಿಸಿಕೊಂಡು ಬಂದು ಅಮೆರಿಕಾದಲ್ಲಿ ಪರಮಾಣು ವಿದಳನದ ಸರಪಳಿ ಕ್ರಿಯೆಯ ಆವಿಷ್ಕಾರವನ್ನೂ ಮಾಡಿದ್ದ. ಶಾಂತಿ ಪ್ರಿಯರಾಗಿದ್ದ ಈ ವಿಜ್ಞಾನಿಗಳ ಮನಸ್ಸಿನಲ್ಲಿ ಪರಮಾಣು ಬಾಂಬು ಮೊದಲು ಸರ್ವಾಧಿಕಾರಿ ಹಿಟ್ಲರ್ ಹಾಗೂ ಆತನ ನರಹಂತಕ ಸೈನಿಕರ ಕೈಗೆ ಸಿಕ್ಕರೆ ಇಡೀ ಮಾನವ ಕುಲದ ಜೊತೆಗೆ ಸಕಲ ಜೀವಿಗಳ ನಾಶ ಎನ್ನುವ ಆತಂಕದ ಭೀತಿ ತುಂಬಿತ್ತು.

ಪರಮಾಣು ಬಾಂಬಿನಿಂದ ಆಗುವ ಅನಾಹುತವನ್ನು ಊಹಿಸಿದ ಝೀಲಾರ್ಡ್ ಮತ್ತು ಎನ್ರಿಕೋ ಫರ್ಮಿ ಹೇಗಾದರೂ ಮಾಡಿ ಪರಮಾಣು ಬಾಂಬು ಹಿಟ್ಲರನ ಕೈ ವಶವಾಗುವುದನ್ನು ತಪ್ಪಿಸಲೇ ಬೇಕು; ನಾಳಿನ ಭೀಕರತೆಯನ್ನು ಇಂದೇ ಅಮೆರಿಕಾ ಸರ್ಕಾರದ ಗಮನಕ್ಕೆ ತರಬೇಕೆಂದು ಹಾಗೂ ಪರಮಾಣು ಬಾಂಬಿನ ನಿರ್ಮಾಣವನ್ನು ಕೈಗೆತ್ತಿಕೊಳ್ಳುವಂತೆ ಮಾಡಬೇಕೆಂದು ನಿರ್ಧರಿಸಿದರು. ಈ ವಿಷಯವನ್ನು ಅಮೆರಿಕಾ ಸರ್ಕಾರಕ್ಕೆ ತಿಳಿಸುವಂತಾ ವರ್ಚಸ್ಸು ಹಾಗೂ ತೂಕದ ವ್ಯಕ್ತಿತ್ವ ಹೊಂದಿರುವ ವ್ಯಕ್ತಿಯೊಬ್ಬರನ್ನು ಹುಡುಕಲು ಪ್ರಾರಂಭಿಸಿ; ಆಲ್ಬರ್ಟ್ ಐನ್‌ಸ್ಟೈನರೇ ಆ ಕೆಲಸಕ್ಕೆ ಸೂಕ್ತವಾದ ವ್ಯಕ್ತಿ ಎಂದು ತೀರ್ಮಾನಿಸಿ ತಮ್ಮ ಮೊರೆ ಬಿದ್ದದ್ದನ್ನು ಜ್ಞಾಪಿಸಿಕೊಂಡಾಗ ಐನ್‌ಸ್ಟೈನರಿಗೆ ತಲೆನೋವಿನ ಅನುಭವವಾಯಿತು. ಸ್ವಲ್ಪ ಹೊತ್ತು ಸುಧಾರಿಸಿಕೊಂಡು ಕುರ್ಚಿಯಿಂದ ಎದ್ದು ಮೆಲ್ಲಗೆ

ಮೆಟ್ಟಿಲು ಏರಿ ಹೋಗಿ ತಮ್ಮ ಕೋಣೆಯ ಕಪಾಟಿನಲ್ಲಿದ್ದ ಕಡತದಿಂದ ಪತ್ರ ಒಂದರ ನಕಲನ್ನು ಹೊರತೆಗೆದು ಕುರ್ಚಿಯಲ್ಲಿ ಕುಳಿತು ಓದಲೆಂದು ಬಿಚ್ಚಿದರು.

ಆಲ್ಬರ್ಟ್ ಐನ್‌ಸ್ಟೈನ್
ಓಲ್ಡ್ ಗ್ರೂವ್ ರೋಡ್
ಪೆಕೊನಿಕ್, ಲಾಂಗ್ ಐಲೆಂಡ್
ಆಗಸ್ಟ್ ೨, ೧೯೩೯.

ಎಫ್. ಡಿ. ರೂಸೆವೆಲ್ಟ್.
ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ
ಶ್ವೇತಭವನ.

ಮಹನೀಯರೆ,

ಇ. ಫರ್ಮಿ ಮತ್ತು ಎಲ್. ಝೀಲಾರ್ಡ್ ಇವರ ಸಂಶೋಧನೆಯ ಹಸ್ತ ಪ್ರತಿಯನ್ನು ನನಗೆ ಒಪ್ಪಿಸಲಾಗಿದೆ. ಇದರ ಪ್ರಕಾರ ಅತಿ ಶೀಘ್ರವಾಗಿ ಯುರೇನಿಯಂ ಧಾತುವನ್ನು ಶಕ್ತಿಯ ನೂತನ ಮತ್ತು ಪ್ರಮುಖ ಆಕರವಾಗಿ ಮಾರ್ಪಡಿಸುವುದು ಕೈಗೂಡೀತೆಂದು ನಿರೀಕ್ಷಿಸಬಹುದಾಗಿದೆ. ಈ ಸನ್ನಿವೇಶದ ಕೆಲವೊಂದು ಮುಖಗಳನ್ನು ಜಾಗರೂಕತೆಯಿಂದ ಪರಿಶೀಲಿಸುವುದು ಹಾಗೂ ಅವಶ್ಯವೆಂದು ತೋರಿದರೆ ಈ ನಿಟ್ಟಿನಲ್ಲಿ ಆಡಳಿತ ವಿಭಾಗ ಒಡನೆ ಕಾರ್ಯೋನ್ಮುಖವಾಗುವುದು ಅಗತ್ಯವೆಂದು ಅನ್ನಿಸುತ್ತದೆ. ಆದುದರಿಂದ ಮುಂದೆ ಸೂಚಿಸಿರುವ ವೃತ್ತಾಂತಗಳನ್ನೂ, ಶಿಫಾರಸ್ಸುಗಳನ್ನೂ ನಿಮ್ಮ ಗಮನಕ್ಕೆ ತರುವುದು ಅವಶ್ಯವೆಂದು ಭಾವಿಸಿದ್ದೇನೆ.

ಯುರೇನಿಯಂನ ಭಾರಿ ಒಂದು ರಾಶಿಯಲ್ಲಿ ಪರಮಾಣು ಕ್ರಿಯೆಗಳನ್ನು ಉಂಟುಮಾಡಲು ಸಾಧ್ಯವಾಗಬಹುದು ಮತ್ತು ಆ

ಕ್ರಿಯೆಗಳಿಂದ ಅಗಾಧ ಮೊತ್ತದ ಶಕ್ತಿಯೂ, ರೇಡಿಯಮ್‌ನಂತಹ ಮೂಲವಸ್ತುಗಳೂ ಉಂಟಾಗಬಹುದು ಎನ್ನುವ ಅಂಶ; ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ, ಫ್ರಾನ್ಸಿನಲ್ಲಿ ಜೂಲಿಯೋ, ಅಂತೆಯೇ ಅಮೆರಿಕಾದಲ್ಲಿ ಫರ್ಮಿ ಮತ್ತು ಝೀಲಾರ್ಡ್ ಇವರು ಮಾಡಿರುವ ಕಾರ್ಯದಿಂದ ತಿಳಿದುಬಂದಿದೆ. ಅತ್ಯಲ್ಪ ಕಾಲದಲ್ಲೇ ಇದು ಸಿದ್ಧಿಸುವುದು ಖಾತ್ರಿ.

ಈ ಹೊಸ ವಿದ್ಯಮಾನ, ಬಾಂಬುಗಳ ನಿರ್ಮಾಣಕ್ಕೆ ಕೂಡ ಕಾರಣವಾಗಬಹುದು; ಮತ್ತು ಹೊಸ ಮಾದರಿಯ ಅತಿ ಸಾಮರ್ಥ್ಯವನ್ನೊಳಗೊಂಡ ಬಾಂಬುಗಳು ಈ ರೀತಿಯಾಗಿ ನಿರ್ಮಿಸಲ್ಪಡುವುದನ್ನು - ಹೀಗೆಯೇ ಆಗುವುದೆಂದು ಖಾತ್ರಿಯಾಗಿ ಹೇಳದಿದ್ದರೂ ನಾವು ಕಲ್ಪಿಸಿಕೊಳ್ಳಬಹುದು. ದೋಣಿಯಲ್ಲಿ ಒಯ್ದು ರೇವಿನಿಂದ ಸ್ಫೋಟಿಸಬಹುದಾದ ಈ ಮಾದರಿಯ ಒಂದು ಬಾಂಬ್ ಅಸುಪಾಸಿನ ಒಂದಿಷ್ಟು ಪ್ರದೇಶವನ್ನೂ ಒಳಗೊಂಡಂತೆ ಇಡೀ ರೇವನ್ನೇ ನಾಶಗೊಳಿಸುವುದು ಸಾಧ್ಯವಿದೆ. ವಾಯು ಸಾಗಣೆಗೆ ಇಂಥ ಬಾಂಬುಗಳು ಅತಿಭಾರವೆನಿಸಬಹುದು.

ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಕೆಳದರ್ಜೆಯ ಯುರೇನಿಯಮ್ ಅದುರು ಮಿತ ಪ್ರಮಾಣದಲ್ಲಿ ಮಾತ್ರ ಲಭ್ಯವಿದೆ. ಕೆನಡದಲ್ಲಿಯೂ, ಮೊದಲಿನ ಜೆಕೊಸ್ಲೋವಾಕಿಯದಲ್ಲಿಯೂ ಒಂದಿಷ್ಟು ಒಳ್ಳೆಯ ಅದುರುಂಟು. ಬೆಲ್ಜಿಯನ್ ಕಾಂಗೋವೇ ಯುರೇನಿಯಮ್ಮಿನ ಅತಿ ಪ್ರಮುಖ ಆಕರ.

ಸಂದರ್ಭ ಹೀಗಿರುವಾಗ ಆಡಳಿತ ವಿಭಾಗಕ್ಕೂ ಅಮೆರಿಕಾದಲ್ಲಿ ಸರಪಳಿ ಕ್ರಿಯೆಯ ಮೇಲೆ ಕಾರ್ಯವೆಸಗುತ್ತಿರುವ ಭೌತವಿಜ್ಞಾನಿಗಳ ತಂಡಕ್ಕೂ ನಡುವೆ ಒಂದು ರೀತಿಯ ಶಾಶ್ವತ ಸಂಪರ್ಕ ಏರ್ಪಡಿಸುವುದರ ಬಗ್ಗೆ ನೀವು ಯೋಚಿಸಬಹುದೆಂದು

ತೋರುತ್ತದೆ. ನಿಮ್ಮ ವಿಶ್ವಾಸಕ್ಕೆ ಪಾತ್ರನಾಗಿರುವ ಒಬ್ಬ ವ್ಯಕ್ತಿಗೆ ಈ ಹೊಣೆಯನ್ನು ವಹಿಸಿ ಕೊಡುವುದು ಇದನ್ನು ಸಾಧಿಸಬಹುದಾದ ಒಂದು ಮಾರ್ಗ. ಪ್ರಾಯಶಃ ಈತ ಖಾಸಗಿ ಅಧಿಕಾರಿಯಾಗಿ ವ್ಯವಹರಿಸಬೇಕಾದೀತು. ಈತನ ಹೊಣೆ ಈ ಮುಂದಿನದನ್ನು ಒಳಗೊಂಡಿರಬಹುದು.

೧ ಸರ್ಕಾರದ ಇಲಾಖೆಗಳೊಡನೆ ಸಂಪರ್ಕವಿರಿಸಿ ಕೊಳ್ಳುವುದು, ಮುಂದಿನ ಬೆಳವಣಿಗೆಗಳನ್ನು ಕುರಿತ ಮಾಹಿತಿಯನ್ನು ಅವುಗಳಿಗೆ ಒದಗಿಸುವುದು ಮತ್ತು ಸಂಯುಕ್ತ ಸಂಸ್ಥಾನಗಳು ಯುರೇನಿಯಂ ಅದುರಿನ ಸರಬರಾಜನ್ನು ಪಡೆಯುವ ಸಮಸ್ಯೆಯನ್ನು ಕುರಿತು ನಿರ್ದಿಷ್ಟ ಲಕ್ಷ್ಯ ಹರಿಸಿ ಯುಕ್ತ ಕಾರ್ಯವೆಸಗಲು ಸರ್ಕಾರಕ್ಕೆ ಶಿಫಾರಸ್ಸುಗಳನ್ನೂ ಒಪ್ಪಿಸುವುದು.

೨ ಸದ್ಯದಲ್ಲಿ ವಿಶ್ವವಿದ್ಯಾಲಯಗಳ ಪ್ರಯೋಗಾಲಯಗಳಿಗೆ ಮೀಸಲಿಟ್ಟಿರುವ ಹಣದ ಮಿತಿಯೊಳಗೆ ನಿರ್ವಹಿಸಲಾಗುತ್ತಿರುವ ಪ್ರಾಯೋಗಿಕ ಕಾರ್ಯವನ್ನು ಅವಶ್ಯವೆನಿಸಿದರೆ ಹೆಚ್ಚಿನ ಹಣವನ್ನು ಒದಗಿಸುತ್ತ ಹಾಗೂ ಅಗತ್ಯ ಸಲಕರಣೆಗಳಿಂದ ಕೈಗಾರಿಕಾ ಪ್ರಯೋಗಾಲಯಗಳ ಸಹಕಾರವನ್ನು ಕೂಡಿಸುತ್ತಾ, ತ್ವರೆಗೊಳಿಸುವುದು. ಹೆಚ್ಚಿಗೆ ಕೊಡಬೇಕಾಗುವ ಮೊಬಲಗನ್ನು ಇಂಥ ಕಾರ್ಯಗಳಿಗೆ ನೆರವು ನೀಡಲು ಸಿದ್ಧರಾಗಿರುವ ಖಾಸಗಿ ವ್ಯಕ್ತಿಗಳನ್ನು ಈತ ಸಂದರ್ಶಿಸಿ ಪಡೆಯಬಹುದು. ಈಗ ತಾನು ವಶಪಡಿಸಿಕೊಂಡಿರುವ ಜೆಕೊಸ್ಲೋವಾಕಿಯಾದ ಗಣಿಗಳಿಂದ ಜರ್ಮನಿ ಯುರೇನಿಯಂ ವ್ಯಾಪಾರವನ್ನು ರದ್ದುಗೊಳಿಸಿದೆ ಯೆಂಬುದು ನನಗೆ ಗೊತ್ತಾಗಿದೆ. ಜರ್ಮನ್ ಅಂಡರ್ ಸೆಕ್ರಟರಿ ಆಫ್ ಸ್ಟೇಟ್ ಇವರ ಮಗ ಫಾನ್ ವೈಟ್ ಸೇಕರ್ ಬರ್ಲಿನ್ನಿನ ಕೈಸರ್ ವಿಲ್ ಹೆಲ್ಮ್ ಇನ್‌ಸ್ಟಿಟ್ಯೂಟಿಗೆ ಲಗತ್ತಾಗಿರುವುದರ ಹಾಗೂ ಯುರೇನಿಯಮ್ಮಿನ ಮೇಲೆ ಅಮೆರಿಕಾ ನಡೆಸುತ್ತಿರುವ ಕೆಲವೊಂದು

ಪ್ರಯೋಗಗಳು ಅಲ್ಲಿ ಪುನರಾವರ್ತಿಸಲಾಗುತ್ತಿರುವುದರ ಹಿನ್ನೆಲೆಯಲ್ಲಿ ಜರ್ಮನಿ ಇಷ್ಟೊಂದು ವೇಗವಾಗಿ ಕಾರ್ಯಪ್ರವೃತ್ತವಾಗಿರುವುದು ಏಕೆ? ಎನ್ನುವುದನ್ನು ಅರ್ಥೈಸಲು ಸಾಧ್ಯವಿದೆ.

ನಿಮ್ಮ ವಿಶ್ವಾಸಿ

ಎ. ಐನ್‌ಸ್ಟೈನ್

ಐನ್‌ಸ್ಟೈನ್ ಅವರು ಪತ್ರವನ್ನು ಓದಿ ಪೂರೈಸಿದನಂತರ ದೀರ್ಘವಾಗಿ ನಿಟ್ಟುಸಿರು ಬಿಟ್ಟು ಹಾಗೇ ತಾವು ಕುಳಿತಿದ್ದ ಕುರ್ಚಿಗೆ ಹಿಂದಕ್ಕೆ ಆನಿಕೊಂಡು ಮೇಲಕ್ಕೆ ತಲೆಯೆತ್ತಿ ಕೊಠಡಿಯ ಮಾಳಿಗೆಯನ್ನು ಕಣ್ಣು ಎವೆಯಿಕ್ಕದೆ ನೋಡೇ ನೋಡಿದರು. ರೂಮಿನ ನೀರವತೆಯಲ್ಲಿ ಬಲ್ಬು ಉರಿಯುತ್ತಲೇ ಇತ್ತು.

ಅಂದು ಈ ಪತ್ರಕ್ಕೆ ರುಜು ಹಾಕಿದ ತರುವಾಯ ತೀವ್ರ ಪಶ್ಚಾತ್ತಾಪದ ಆತಂಕದಿಂದ ನರಳಿದ್ದನ್ನು ನೆನಪಿಸಿಕೊಂಡು ಖಿನ್ನರಾದರು.

ಅಮೆರಿಕಾ ಸರ್ಕಾರ ಪರಮಾಣು ವಿದಳನ ಶಕ್ತಿಯನ್ನು ಯುದ್ಧದಲ್ಲಿ ಬಳಸಬಾರದೆಂದು; ಅದನ್ನು ಬಳಸಲೇಬೇಕಾಗಿ ಬಂದರೆ ಕೇವಲ ಆತ್ಮ ರಕ್ಷಣೆಯ ಗುರಾಣಿಯನ್ನಾಗಿ ಮಾತ್ರ ಬಳಸಬೇಕೇ ಹೊರತು ಶತ್ರು ನಿರ್ನಾಮ ಅಸ್ತ್ರವನ್ನಾಗಿ ಅಲ್ಲವೆಂದು ಸಾರಿಸಾರಿ ಹೇಳಿದ್ದರೂ ಈ ಸರ್ಕಾರ ತನ್ನ ಎಲ್ಲೆಯನ್ನು ಮೀರಿ ವರ್ತಿಸಿದೆ. ಈಗ ಯಾರನ್ನು ಕೇಳಲಿ. ಆಗಿರುವ ಅನಾಹುತದ ಜವಾಬ್ದಾರಿ ಹೊರಲು ಯೋಜನೆಗೆ ಒಪ್ಪಿಗೆ ನೀಡಿದ ಅಧ್ಯಕ್ಷ ಫ್ರ್ಯಾಂಕ್ಲಿನ್ ರೂಸ್‌ವೆಲ್ಟ್ ಅವರು ನಿಧನ ಹೊಂದಿ ನಾಲ್ಕು ತಿಂಗಳು ಕಳೆದಿವೆ. ಈಗ ಆಡಳಿತದ ಚುಕ್ಕಾಣಿ ಹಿಡಿದಿರುವ ಸರ್ಕಾರಕ್ಕೆ ಬಾಂಬಿನ ತಯಾರಿಕೆಯ ಹಿಂದಿದ್ದ ಭಾವನೆಗಳು ಹೇಗೆ ತಿಳಿಯಬೇಕು?

ಝೀಲಾರ್ಡ್ ಹಾಗೂ ಫರ್ಮಿಯವರ ವಿಚಾರ ಮೇಲು ನೋಟಕ್ಕೆ ಸರಿಯೆಂದು ಕಂಡಿದ್ದರಿಂದ ಅಧ್ಯಕ್ಷ ರೊಸ್‌ವೆಲ್ಟ್ ಅವರಿಗೆ ಪತ್ರ ಬರೆಯಲು ಒಪ್ಪಿಕೊಂಡೆ. ಸ್ವಲ್ಪ ತಡೆದು ತೀರ್ಮಾನ ತೆಗೆದುಕೊಂಡಿದ್ದರೆ ಇಂದಿನ ಅನಾಹುತವನ್ನು ತಪ್ಪಿಸಬಹುದಿತ್ತು. ಲಕ್ಷಾಂತರ ಜೀವಿಗಳ ಜೀವವನ್ನಾದರೂ ಉಳಿಸಬಹುದಿತ್ತು. ಒಂದು ಜೀವಿಯ ಹುಟ್ಟಿಗೆ ಯಾವುದೇ ವಿಧದಿಂದಲೂ ಶಕ್ತನಲ್ಲದ ನಾನು ಲಕ್ಷಾಂತರ ಜೀವಿಗಳ ಹತ್ಯೆ ಮಾಡಲು ನನಗೆ ಯಾವ ನೈತಿಕ ಅಧಿಕಾರವಿದೆ? ಆದರೆ ತನ್ನ ಆ ದುಡುಕಿನ ನಿರ್ಧಾರಕ್ಕೆ ಕಾರಣವಾದರೂ ಏನಿರಬಹುದು? ಹಿಟ್ಲರನ ಸಾಮ್ರಾಜ್ಯಶಾಹಿ ಧೋರಣೆಯೇ? ಅಥವಾ ತಾನು ಮತ್ತು ಝೀಲಾರ್ಡ್ ಇಬ್ಬರೂ ಯಹೂದಿಗಳಾದ್ದರಿಂದ; ಎಲ್ಲ ಯಹೂದಿಗಳ ಮೇಲೆ ನಾಜಿಗಳು ನಡೆಸಿದ ದೌರ್ಜನ್ಯಕ್ಕೆ ಅಪ್ರಜ್ಞಾಪೂರಕ ದುಡುಕಿನ ಪ್ರತೀಕಾರವಾಗಿ ಬಂದ ಪ್ರತಿಕ್ರಿಯೆ ಇದಾಗಿರಬಹುದೆ? ಎನ್ನುವ ಯಾವು ಯಾವುವೋ ಪ್ರಶ್ನೆಗಳು ಐನ್‌ಸ್ಟೈನರ ತಲೆಯನ್ನು ಕೊರೆಯುತ್ತಿದ್ದವು.

ಜನಾಂಗೀಯ ಸೇಡಿನ ಪ್ರತೀಕಾರವಾಗಿ ತಾನು ಬಾಂಬಿನ ನಿರ್ಮಾಣಕ್ಕೆ ಸಹಿಮಾಡಿಲ್ಲ. ಹಾಗೇನಾದರೂ ಒಂದು ವೇಳೆ ಅದೇ ಭಾವನೆಯಿಂದ ಸಹಿ ಮಾಡಿದ್ದರೆ, ಸಹಿ ಮಾಡಿದ ದಿನದಿಂದ ಬಾಂಬ್ ಯೋಜನೆಗೆ ಸಂಬಂಧಿಸಿದ ಸಮಿತಿ ಸಭೆಗಳಿಗೆ ಸರ್ಕಾರದಿಂದ ಆಹ್ವಾನ ಬಂದಿದ್ದರೂ ಆ ಅವಕಾಶಗಳನ್ನು ನಿರಾಕರಿಸಬೇಕಾಯಿತು. ಬಾಂಬ್ ನಿರ್ಮಾಣ ಯೋಜನೆಗೆ ಸಂಪೂರ್ಣ ಅಸಹಕಾರ ನೀಡಲಾಯಿತು. ಹೀಗಿರುವಾಗ ಜನಾಂಗೀಯ ಸೇಡಿಗೆ ಪ್ರತೀಕಾರ ಎನ್ನುವ ಯೋಚನೆಯಲ್ಲಿ ಹುರುಳಿಲ್ಲ. ಅದೇನಾದರೂ ಇದ್ದರೆ ಹಿಟ್ಲರನ ಸಾಮ್ರಾಜ್ಯಶಾಹಿ ಧೋರಣೆಗೆ ತಡೆಯೊಡ್ಡುವ ಒಂದೇ ಒಂದು ಕಾರಣದಿಂದ ಮಾತ್ರ ಎನ್ನುವ ಯಾವು ಯಾವುವೋ ಯೋಚನೆಗಳಲ್ಲಿ

ರಾತ್ರಿ ಹನ್ನೆರಡು ದಾಟಿತ್ತು. ರಾತ್ರಿಯ ಊಟ ಮಾಡದೆ ಹಾಗೇ ಎದ್ದು ಹೋಗಿ ಹಾಸಿಗೆಯಲ್ಲಿ ಮಗ್ಗುಲಾದರು.

ಅಂದು ಆಗಸ್ಟ್ ೭, ೧೯೪೫, ಬೆಳಗ್ಗೆ ಸುಮಾರು ೭ ಗಂಟೆ ಸಮಯ. ಸೂರ್ಯ ಮೂಡಣದಲ್ಲಿ ಕೆಂಪಗೆ ಮೇಲೇರುತ್ತಿದ್ದ. ಮೂಡಣವೆಲ್ಲ ಕೆಂಪಗೆ ಬಣ್ಣ ಬಳಿದುಕೊಂಡಿತ್ತು. ಓಲ್ಡ್ ಗ್ರೂವ್ ರಸ್ತೆ ಅವನ ಬರುವಿಕೆಗಾಗಿ ಹಾಸಿಕೊಂಡಿತ್ತು. ಇಷ್ಟು ಹೊತ್ತಿಗೇ ಬಂದು ರಸ್ತೆ ಪಕ್ಕದ ಸಾಲು ಮರಗಳಲ್ಲಿ ಕುಳಿತ್ತಿದ್ದ ಹದ್ದುಗಳು ತಮ್ಮ ಕೊಕ್ಕುಗಳನ್ನು ಕೊಂಬೆಗಳಿಗೆ ತೀಡಿಕೊಳ್ಳುತ್ತಿದ್ದವು. ಕೌಂಟರ್‌ನಲ್ಲಿ ಹಣ ಹಾಕಿ ನ್ಯೂಸ್ ಪೇಪರನ್ನು ಎತ್ತಿಕೊಂಡ ಕಾರ್ಯದರ್ಶಿ ನೇರವಾಗಿ ಐನ್‌ಸ್ಟೈನರ ರೂಮಿಗೆ ತಂದು ಟೇಬಲ್ಲಿನ ಮೇಲಿಟ್ಟು ಹೋದಳು. ಪೇಪರ್‌ನ ಸಪ್ಪಳ ಕೇಳಿದ್ದೇ ತಡ ಐನ್‌ಸ್ಟೈನ್ ಅವರು ಹಾಸಿಗೆಯಿಂದೆದ್ದು ಕಣ್ಣಿಗೆ ಕನ್ನಡಕ ಏರಿಸಿಕೊಂಡು ನ್ಯೂಸ್‌ಪೇಪರನ ಮೊದಲ ಪುಟದ ಮೇಲೆ ಕಣ್ಣಾಡಿಸಿದರು. ಪುಟದ ತುಂಬಾ ಬರೀ ಪರಮಾಣು ಬಾಂಬು ಹಾಗೂ ಜಪಾನಿನ ಸುದ್ದಿಗಳು! ಯುರೇನಿಯಂ ೨೩೫ರ ಪರಮಾಣು ಬಾಂಬು ಹೀರೊಷಿಮ ನಗರದ ಮಧ್ಯದಲ್ಲಿ ಸಿಡಿದಿತ್ತು. ನಾಗರೀಕ ಜೀವನಕ್ಕೆ ಅಪಾಯ ಉಂಟಾಗದಂತೆ ಬಾಂಬನ್ನು ಸಿಡಿಸಬೇಕೆಂದು ವಿಜ್ಞಾನಿಗಳು ಮಾಡಿಕೊಂಡಿದ್ದ ಪ್ರಾರ್ಥನೆ ವ್ಯರ್ಥವಾಗಿತ್ತು. ಸುಮಾರು ೧೪ ಲಕ್ಷ ಚದರ ಗಜಗಳಷ್ಟು ವಿಸ್ತೀರ್ಣದಲ್ಲಿದ್ದ ಮನೆಗಳೆಲ್ಲ ಕರಗಿ ಹೆಪ್ಪುಗಟ್ಟಿದ್ದವು. ಲಕ್ಷಗಟ್ಟಲೆ ಜೀವಿಗಳು ತಮ್ಮ ಜೀವ ಕಳೆದುಕೊಂಡು ಕರಕಲಾಗಿದ್ದವು. ಮಕ್ಕಳು ಮರಿಗಳನ್ನು ಕಳೆದುಕೊಂಡ ವೃದ್ಧರು, ತಂದೆ ತಾಯಿಗಳನ್ನು ಕಳೆದುಕೊಂಡ ಕಂದಮ್ಮಗಳು, ಬಂಧು ಬಳಗವನ್ನು ಕಳೆದುಕೊಂಡವರು, ಅಂಗವಿಕಲತೆಗೆ ಒಳಗಾದವರು, ಬುದ್ಧಿ ಭ್ರಮಣೆ ಹೊಂದಿದವರು· ಹೀಗೆ ಬದುಕೀ ಜೀವಚ್ಛವವಾದ ಲಕ್ಷಗಟ್ಟಲೆ ಜೀವಿಗಳ ಆರ್ತನಾದವನ್ನು ಧ್ವನಿಸುತ್ತಿತ್ತು ಆ ಪತ್ರಿಕೆ. ವಿವರಗಳನ್ನು

ಓದುತ್ತಾ, ಓದುತ್ತಾ ಐನ್‌ಸ್ಟೈನರ ಕಣ್ಣುಗಳು ಹನಿಗೂಡಿ ಮಂಜಾದವು. ಅಂತಃಕರಣಕಣ್ಣಂಚಿನಲ್ಲಿ ಅಶ್ರುವಾಗಿರೂಪುಗೊಂಡು ಹನಿಹನಿಯಾಗಿ ಕೆನ್ನೆಯ ಮೇಲಿಂದ ಇಳಿದು ವಾರ್ತಾ ಪತ್ರಿಕೆಯ ಮೇಲೆ ಬಿದ್ದವು.

ಪರಮಾಣು ಬಾಂಬಿನ ಸಿಡಿತದಿಂದ ಉಂಟಾದ ವಿಕಿರಣ ಮೋಡಗಳು ದೇಶದ ಮೇಲೆಲ್ಲ ಹರಡಿ ಉಂಟಾದ ಕರಿನೆರಳ ಕಗ್ಗತ್ತಲಿನಲ್ಲಿ ಜಪಾನೀಯರು ನರಳುತ್ತಿರುವಾಗಲೇ ಆಗಸ್ಟ್ ೯, ೧೯೪೫ ರಂದು ಮರಳಿ ಅಮೆರಿಕಾದ ಸೈನಿಕರು ಮತ್ತೊಂದು ಪಟ್ಟಣವಾದ ನಾಗಸಾಕಿಯ ಮೇಲೆ ನಿಷ್ಕರುಣೆಯಿಂದ ಪ್ಲುಟೋನಿಯಂ ಬಾಂಬನ್ನು ಸಿಡಿಸಿ ತಮ್ಮ ಅಮಾನವೀಯತೆಯನ್ನು ಪ್ರದರ್ಶಿಸಿದ್ದರು. ಈ ಎಲ್ಲ ಅನಾಹತಗಳಿಂದ ಸೋತು ಸುಣ್ಣವಾಗಿದ್ದ ಜಪಾನ್ ಆಗಸ್ಟ್ ೧೪, ೧೯೪೫ ರಂದು ಬೇಷರತ್ತಾಗಿ ಶರಣು ಯಾಚಿಸಿತು. ಇಷ್ಟರಲ್ಲಾಗಲೇ ಜರ್ಮನಿ ಶರಣಾಗತಿ ಹೊಂದಿತ್ತು.

ಗುರಾಣಿಯಂತೆ ಉಪಯೋಗಿಸುವ ಉದ್ದೇಶದಿಂದ ಅಮೆರಿಕಾದಲ್ಲಿ ತಯಾರಿಸಿದ ಬಾಂಬು ಜೀವಿಗಳಿಗೇ ಪ್ರಾಣಾಂತಕ ಭರ್ಜಿಯನ್ನಾಗಿ ಮಾಡಿದವರಿಗಿಂತ ಇದೇ ಸಂದರ್ಭದಲ್ಲಿ ಬಾಂಬಿನ ತಯಾರಿಕೆಯ ತತ್ವವನ್ನು ಜರ್ಮನಿಯಲ್ಲಿ ಕಂಡುಹಿಡಿದಿದ್ದರೂ ಅದರ ಸುಳಿವನ್ನು ಹಿಟ್ಲರನಿಗೆ ಕೊಡದೆ ಮಾನವೀಯತೆಯನ್ನು ಗೌರವಿಸಿದ ಜರ್ಮನಿಯ ವಿಜ್ಞಾನಿಗಳಾದ ಆಟೊಹ್ಯಾನ್ ಹಾಗೂ ಫ್ರಿಟ್ಸ್ ಸ್ಟ್ರಾಸ್‌ಮ್ಯಾನ್‌ರ ಬಗ್ಗೆ ಐನ್‌ಸ್ಟೈನರ ಅಭಿಮಾನ ಹೆಚ್ಚಿತು.

➢

ಅಧ್ಯಾಯ -೨

ಹೂವು ಅರಳದ ತೋಟ

ಜರ್ಮನಿಯ ಮ್ಯೂನಿಕ್ ನಗರದ ಒಂದು ಬೀದಿ. ಅಷ್ಟೇನೂ ಹೆಸರುವಾಸಿಯಾದ ಬೀದಿ ಅದಾಗಿರಲಿಲ್ಲ. ಕ್ಯಾಥೋಲಿಕ್‌ರೇ ಹೆಚ್ಚಾಗಿ ಆ ಬೀದಿಯಲ್ಲಿ ವಾಸಿಸುತ್ತಿದ್ದರು. ಯಹೂದಿಗಳದು ಅಲ್ಲೊಂದು ಇಲ್ಲೊಂದು ಮನೆ. ಆ ಬೀದಿಗೆ ಹೊಂದಿಕೊಂಡು ಕ್ಯಾಥೋಲಿಕ್‌ರು ನಡೆಸುತ್ತಿದ್ದ ಇಟ್ ಜಿ ಮ್ನಾಷಿಯಂ ಶಾಲೆ. ಚಿಕ್ಕ ಚಿಕ್ಕ ಕೊಠಡಿಗಳು. ತರಗತಿಯಲ್ಲಿದ್ದ ಮಕ್ಕಳ ಸಂಖ್ಯೆಗೆ ಹೋಲಿಸಿದರೆ ಕೊಠಡಿ ಏನೇನೂ ಸಾಲದು. ಪ್ರತಿ ಕೊಠಡಿಗೆ ಹೆಚ್ಚೆಂದರೆ ಎರಡು ಕಿಟಕಿಗಳು. ಅವೂ ಎತ್ತರದಲ್ಲಿದ್ದರಿಂದ ಗಾಳಿ ಬೆಳಕು ಸರಾಗವಾಗಿ ಒಳಬರಲು ಸಾಧ್ಯವಿರಲಿಲ್ಲ. ಶಾಲೆಯ ಶಿಸ್ತು ಪಾಲನೆಗಾಗಿ ಎಲ್ಲ ಉಪಾಧ್ಯಾಯನಿಯರೂ ಕೈನಲ್ಲಿ ಬೆತ್ತ ಹಿಡಿದೇ ಇರುತ್ತಿದ್ದರಿಂದ ಮಕ್ಕಳಲ್ಲಿ ಭೀತಿ! ತಾವು ಸವಿದ ರುಚಿಗಳನ್ನು, ಕಂಡ ವಿಸ್ಮಯಗಳನ್ನು, ಅನುಭವಿಸಿದ ಅನುಭವಗಳನ್ನು ಸಹಪಾಠಿಗಳೊಂದಿಗೆ

ಹೇಳಿಕೊಳ್ಳುವಂತಿಲ್ಲ, ಚರ್ಚಿಸುವಂತಿಲ್ಲ, ನಗುವಂತಿಲ್ಲ. ಯಾರಾದರೂ ಬಾಯಿ ಬಿಚ್ಚಿದರೆ ಬೆತ್ತದ ಪೆಟ್ಟು ತಿನ್ನಬೇಕಾಗಿತ್ತು. ಇಲ್ಲ ದಂಡ ತೆರಬೇಕಾಗಿತ್ತು. ಒಂದು ರೀತಿಯ ಉಸಿರು ಕಟ್ಟಿಸುವ ವಾತಾವರಣ. ಮಕ್ಕಳಿಗೆ ಶಾಲೆ ದಂಡನೆ ಕೊಡುವ ಸೆರಮನೆಯಂತಿತ್ತು. ಅದು ಹೂ ಅರಳಿಸುವ ತೋಟವಾಗಿರಲಿಲ್ಲ.

ಒಂದು ದಿನ ಆಗಲೇ ಶಾಲೆಯ ಗಂಟೆ ಬಾರಿಸಿತ್ತು. ಉಪಾಧ್ಯಾಯನಿ ಇನ್ನೂ ತರಗತಿಗೆ ಬಂದಿರಲಿಲ್ಲ. ವಿದ್ಯಾರ್ಥಿಗಳ ಗದ್ದಲ ತರಗತಿಯ ಕೊಠಡಿಯನ್ನೆಲ್ಲ ತುಂಬಿತ್ತು. ಸಂದರ್ಭ ಸಿಕ್ಕಿದ್ದರಿಂದ ಮಕ್ಕಳ ಅದುಮಿಟ್ಟ ಭಾವನೆಗಳು ಸಂದುಸಿಕ್ಕ ಬುಗ್ಗೆಯಂತೆ ಚಿಮ್ಮಿ ಹರಿದಿತ್ತು. ಉಪಾಧ್ಯಾಯಿನಿ ತರಗತಿಯ ಕೊಠಡಿ ಪ್ರವೇಶಿಸಿದ್ದೇ ತಡ ಮಕ್ಕಳೆಲ್ಲ ತಮ್ಮ ಮಾತು ನಿಲ್ಲಿಸಿ 'ಗುಡ್ ಮಾರ್ನಿಂಗ್ ಮಿಸ್' ಎನ್ನುತ್ತ ಎದ್ದು ನಿಂತರು. ಮೇಡಂ ತಮ್ಮ ಕುರ್ಚಿಯ ಹತ್ತಿರ ಬಂದು ಮಕ್ಕಳ ಕಡೆ ತಿರುಗಿದರು. ಕೊನೆಯ ಬೆಂಚಿನಲ್ಲಿ ಕುಳಿತು, ಯಾವುದೋ ಯೋಚನೆಯಲ್ಲಿ ತನ್ನದೇ ಆದ ಲೋಕ ಒಂದರಲ್ಲಿ ಇದ್ದಂತೆ ಕಂಡ ಸುಮಾರು ಹತ್ತು ವರ್ಷ ವಯಸ್ಸಿನ ಹುಡುಗನೊಬ್ಬ, ಉಳಿದ ಹುಡುಗರಂತೆ ಎದ್ದು ನಿಂತಿರಲಿಲ್ಲ. ಮೇಡಂ ಆ ಹುಡುಗನ ಗಮನ ಸೆಳೆದಾಗ ಏಳಬೇಕೋ ಬೇಡವೋ ಎನ್ನುವಂತೆ ಎದ್ದು ನಿಂತ. ಆ ಹುಡುಗನ ಅನ್ಯಮನಸ್ಕತೆ ಹಾಗೂ ಅನಾಸಕ್ತಿ ಪ್ರತಿದಿನ ಇದ್ದದ್ದೇ ಆಗಿತ್ತು. ಮೇಡಂ ಒಂದಿಷ್ಟು ಬೈದು ನಂತರ ಆ ದಿನದ ಗ್ರೀಕ್ ಭಾಷೆಯ ಪಾಠದ ವಿಷಯಕ್ಕೆ ಬಂದರು.

ಒಂದಿನ ದಿನ, ತರಗತಿಯಲ್ಲಿ ಕೊಟ್ಟಿದ್ದ ಪ್ರಶ್ನೆಗಳಿಗೆಲ್ಲ ಉತ್ತರ ಬಾಯಿಗೆ ಬರುತ್ತಾ? ಎಂದು ಮೇಡಂ ಪ್ರಶ್ನಿಸಿ ವಿದ್ಯಾರ್ಥಿಗಳ ಕಡೆ ನೋಡಿದ್ದೇ ತಡ: ಆ ಹುಡಗನೊಬ್ಬನನ್ನು ಬಿಟ್ಟು, ಉಳಿದ ಎಲ್ಲ ವಿದ್ಯಾರ್ಥಿಗಳೂ ಗೊತ್ತು ಎನ್ನುವಂತೆ ಕೈ ಎತ್ತಿದರು.

ಉಪಾಧ್ಯಾಯನಿಯ ಸಿಟ್ಟು ಮತ್ತೂ ಹೆಚ್ಚಿತು, ಆ ಹುಡುಗನನ್ನು ನಿಲ್ಲಿಸಿ ಕಾರಣ ಕೇಳಿದ್ದಕ್ಕೆ 'ಈ ಸೂಲಲ್ಲಿ, ಅಲ್ಲ ಸ್ಕೂಲಿನಲ್ಲಿ, ಮಾಡೋ ಪಾಠ, ಏನೂ ಅಥ್ರ, ಅಲ್ಲ ಏನೂ ಅರ್ಥ ಆಗಲ್ಲ' ಎಂದ ತಡವರಿಸಿ, ತಡವರಿಸಿ. ಆಗ ಮಿಕ್ಕ ಹುಡುಗರೆಲ್ಲ ಗೊಳ್ ಎಂದು ನಕ್ಕರು. ಆ ಹುಡುಗ ತರಗತಿಯಲ್ಲಿ ಮಾತನಾಡುತ್ತಿದ್ದದ್ದೇ ಕಡಿಮೆ. ಯಾವಗಲಾದರೊಮ್ಮೆ ಮಾತನಾಡಿದರೆ ಹೀಗೆ ಸಹಪಾಠಿಗಳ ನಗು ಮತ್ತು ಗೇಲಿ.

ಆ ಹುಡುಗನಿಗೆ ಸರಾಗವಾಗಿ ಮಾತನಾಡಲು ಬರದೇ ಇದ್ದದ್ದು ಉಳಿದವರ ನಗುವಿಗೆ ಒಂದು ಕಾರಣವಾದರೆ ಸ್ವಲ್ಪವೂ ಯುಕ್ತಿಯಿಲ್ಲದೆ ನೇರವಾಗಿ ಸತ್ಯ ಹೇಳಿದ್ದು ಮತ್ತೊಂದು ಕಾರಣವಾಗಿತ್ತು. ಉಪಾಧ್ಯಾಯಿನಿಯಿಂದ ಒಂದೆರೆಡು ಲಾತ ಬೀಳುವಾಗಲೂ ಆ ಹುಡುಗ ತನ್ನದೇ ಯಾವುದೋ ಲೋಕದಲ್ಲಿದ್ದ.

ಶಾಲೆ ಮುಗಿದ ನಂತರ ಒಂಟಿಯಾಗಿ ಮನೆಗೆ ಹೋಗುವಾಗ 'ಹಲೋ! ಬೀಡರ್ ಮಯರ್'! ಅಂದರೆ' ಓ! ಏನಯ್ಯಾ, ಸತ್ಯಹರಿಶ್ಚಂದ್ರ'! ಎಂದು ಮುಂತಾಗಿ ಹುಡುಗರು ಮೂದಲಿಸುತ್ತಿದ್ದರು.

ಸಹಪಾಠಿಗಳ ಇಂಥಾ ಮೂದಲಿಕೆಗೆ ಗುರಿಯಾದ ಹುಡುಗ ಯಾರೆಂದರೆ ಅವನೇ ಆಲ್ಬರ್ಟ್ ಐನ್‌ಸ್ಟೈನ್.

ಹದಿನೆಂಟುನೂರು ಎಪ್ಪತ್ತೊಂಬತ್ತರ ಮಾರ್ಚ್ ಹದಿನಾಲ್ಕ ರಂದು ಜರ್ಮನಿಯ ಉರ್ಟ್ಟಂಬರ್ಗ್ ಪ್ರಾಂತ್ಯದ ಉಲ್ಮ್ ಎಂಬ ಪಟ್ಟಣದಲ್ಲಿ ಆಲ್ಬರ್ಟ್ ಐನ್‌ಸ್ಟೈನನ ಜನನ. ತಂದೆ ಹರ್ಮಾನ್ ಐನ್‌ಸ್ಟೈನ್, ತಾಯಿ ಪೌಲಿನ್‌ಕಾಖ್, ಯಹೂದಿ ಮತಾನು ಯಾಯಿಗಳು.

ಆಲ್ಬರ್ಟ್ ಐನ್‌ಸ್ಟೈನನ ಪೂರ್ವಿಕರು ಸಣ್ಣಸಣ್ಣ ಅಂಗಡಿಗಳನ್ನಿಟ್ಟುಕೊಂಡು ವ್ಯಾಪಾರ ಮಾಡುವುದನ್ನೇ ಪ್ರಧಾನ ವೃತ್ತಿಯಾನ್ನಾಗಿಸಿಕೊಂಡು ಜೀವನ ನಡೆಸುತ್ತಿದ್ದರು. ಕೆಲವರು ಕುಶ ಕರ್ಮಿಗಳೂ ಆಗಿದ್ದರು. ಇವರು ತಮ್ಮ ಮತಗ್ರಂಥಗಳ ಜೊತೆ ಜರ್ಮನಿಯ ಪ್ರಸಿದ್ಧ ಕವಿಗಳಾದ ಶಿಲ್ಲರ್, ಹೈನೆ, ಲೆಸ್ಸಿಂಗ್ ಬರ್ತ್‌ಹೋರ್ಡ್, ಔರ್‌ಬಾಕ್, ಗಯಟೆ ಮುಂತಾದವರ ಕೃತಿಗಳನು ಓದುತ್ತಿದ್ದರು. ಮೆಜಾರ್ಟ್ ಮತ್ತು ಬೆಥೋವಿನ್ ಇವ ಅಚ್ಚು-ಮೆಚ್ಚಿನ ಕಲಾಕಾರರಾಗಿದ್ದರು. ಗ್ರಾಮೀಣ ಹಾಗೂ ನಾಗರೀ ಸಂಸ್ಕೃತಿಗಳಿಂದ ಪ್ರಭಾವಿತರಾಗಿದ್ದ ಈ ಜನ ಸ್ವಾತಂತ್ರ್ಯಪ್ರಿಯತ ಸಹನಶೀಲತೆ ಹಾಗೂ ವಿಶಾಲ ಮನೋಭಾವ ಗುಣಗಳನ ಹೊಂದಿದ್ದರು. ಆದರೆ ಯಾರೂ ಬೌದ್ಧಿಕ ಸಾಧನೆ ಗೈದವರಲ್ಲ.

ಆಲ್ಬರ್ಟ್ ಐನ್‌ಸ್ಟೈನ್‌ನ ತಂದೆ ಹರ್ಮ್ಯಾನ್ ಐನ್‌ಸ್ಟೈ ವಿದ್ಯುದ್ರಸಾಯನಿಕ ಕಾರ್ಖಾನೆ ನಡೆಸುತ್ತಿದ್ದ. ಹೇಳಿಕೊಳ್ಳುವಂ ಉದ್ದಿಮೆದಾರನಾಗಿರಲಿಲ್ಲ ಆತ. ರಜದ ದಿನಗಳಲ್ಲಿ ಸಂಸಾ ಸಮೇತವಾಗಿ ಮ್ಯೂನೀಕ್ ನಗರದ ಆಜು - ಬಾಜಿನ ಸುಂದ ಸ್ಥಳಗಳಿಗೆ ಹೋಗಿಬರುವುದು, ಬೆಟ್ಟ-ಗುಡ ಕಾಡು-ಮೇಡುಗಳಲ್ಲಿ ಅಲೆಯುವುದು ಮಾಡುತ್ತಿದ್ದ. ಯಹೂ ಮತಾಚರಣೆಯಲ್ಲಿ ಅಷ್ಟೇನೂ ಆಸಕ್ತಿ ಇರಲಿಲ್ಲ.

ತಾಯಿ ಪೌಲೀನ್‌ಕಾಖ್‌ಗೆ ಸಂಗೀತದಲ್ಲಿ ಬಲು ಆಸ ಪಿಯೊನೋ ನುಡಿಸಿಕೊಂಡು ಹಾಡುವುದೆಂದರೆ ಎಲ್ಲಿಲ್ಲದ ಆನಂ ಜರ್ಮನ್ ಸಂಗೀತದ ಜೊತೆಗೆ ಹಾಸ್ಯ ಪ್ರಿಯಳೂ ಆಗಿದ್ದಳು. ತ ಸಂಸಾರದ ಚೌಕಟ್ಟಿನೊಳಗೆ ಉತ್ತಮ ಗೃಹಿಣಿ ಎನಿಸಿದ್ದಳು. ಮು ಆಲ್ಬರ್ಟ್‌ನಿಗೆ ಸಂಗೀತದಲ್ಲಿ ಆಸಕ್ತಿ ಹುಟ್ಟಿ ಪಿಟೀ ನುಡಿಸುವುದನ್ನು ಕಲಿಯುವುದರಲ್ಲಿ ತಾಯಿಯ ಸಂಗೀತ ಅಭಿರುಚಿ ಭಾವವೇ ಪ್ರಮುಖ ಎನ್ನಬಹುದು.

ಚಿಕ್ಕಪ್ಪ ಜೇಕಬ್ ಐನ್‌ಸ್ಟೈನ್. ವೃತ್ತಿಯಲ್ಲಿ ಇಂಜಿನಿಯರ್. ಅಣ್ಣನ ಕಾರ್ಖಾನೆಯ ತಾಂತ್ರಿಕ ಮೇಲ್ವಿಚಾರಕ. ಆಲ್ಬರ್ಟ್‌ನಿಗೆ ಗಣಿತದಲ್ಲಿ ಆಸಕ್ತಿ ಹುಟ್ಟಲು ಈತನೇ ಕಾರಣ. ಆಲ್ಬರ್ಟ್‌ಗೆ ಒಬ್ಬಳೇ ತಂಗಿ ಮಾಜ. ಈ ಮಕ್ಕಳ ಮೇಲೆ ಅವರು ಹುಟ್ಟಿದ ಊರಾದ ಉಲ್ಮ್ ಯಾವ ಪರಿಣಾಮವೂ ಬೀರಲಿಲ್ಲ. ಕಾರಣವಿಷ್ಟೇ; ಆಲ್ಬರ್ಟ್ ಹುಟ್ಟಿದ ವರ್ಷದೊಳಗೇ ತಂದೆ ಮ್ಯೂನಿಕ್ ನಗರಕ್ಕೆ ಹೋಗಿ ನೆಲೆಸಿದ್ದ.

* * *

ಆಲ್ಬರ್ಟ್ ಐನ್‌ಸ್ಟೈನ್‌ನನಿಗೆ ಮೂರು ವರ್ಷ ವಯಸ್ಸು ಆಗುವವರೆಗೆ ಆಡಲು ಮಾತೇ ಬಂದಿರಲಿಲ್ಲ. ಪದರೂಪದ ವಾಕ್ಯಗಳನ್ನು ಆಡುವಷ್ಟು ಮಾತು ಬಂದಾಗಲೂ ಮೌನವೇ ಹೆಚ್ಚಾಗಿರುತ್ತಿತ್ತು. ಎಲ್ಲಿ ತಮ್ಮ ಮಗ ಮಂಕನಾಗುವನೋ ಎನ್ನುವ ಆತಂಕ ತಂದೆ-ತಾಯಿಗಳದು.

ಆಲ್ಬರ್ಟ್‌ನಿಗೆ ಐದು ವರ್ಷ ವಯಸ್ಸಾಗಿದ್ದಾಗ ತಂದೆ ತಂದುಕೊಟ್ಟ ದಿಕ್ಸೂಚಿ ಹುಡುಗನಲ್ಲಿ ಕುತೂಹಲ ಮತ್ತು ಆಶ್ಚರ್ಯ ಉಂಟುಮಾಡಿತು. ಅದು ಸದಾ ಉತ್ತರ ದಕ್ಷಿಣ ನೇರದಲ್ಲಿ ನಿಲ್ಲುತ್ತಿದ್ದದ್ದು ಹುಡಗನ ಕುತೂಹಲಕ್ಕೆ ಕಾರಣವಾಗಿತ್ತು.

ಆಲ್ಬರ್ಟ್ ಉಳಿದ ಮಕ್ಕಳ ಜೊತೆಗೆ ಹೆಚ್ಚಾಗಿ ಆಟ ಪಾಠಗಳಲ್ಲಿ ಬೆರೆಯುತ್ತಿರಲಿಲ್ಲ. ಮೈಮುರಿದು ವ್ಯಾಯಾಮ ಮಾಡುವುದು, ಅವನಿಗೆ ಹಿಡಿಸುತ್ತಿರಲಿಲ್ಲ. ಸದಾ ಒಂಟಿಯಾಗಿ ಕುಳಿತಿರುವುದು ಅವನ ಅಭ್ಯಾಸವಾಗಿತ್ತು. ಆ ಹುಡುಗನ ಆರೈಕೆ ಮಾಡುತ್ತಿದ್ದ ದಾದಿ ಆಗಾಗ ಬೇಸತ್ತು. 'ಮುದಿಕರಡಿ' ಎಂದು ಮೂದಲಿಸುತ್ತಿದ್ದಳು.

ಈತ ಲುಇಟ್ ಜಿಮ್ನಾಷಿಯಂನ ವಿದ್ಯಾರ್ಥಿಯಾಗಿದ್ದಾಗ ಶಾಲೆಯ ಅಭ್ಯಾಸದಲ್ಲಿ ನಿರಾಸಕ್ತಿ ಇದ್ದರೂ ಜನಸಾಮಾನ್ಯರಿಗಾಗಿ ಆರನ್ ಬರ್ನ್‌ಸ್ಟೀನ್ ಬರೆದಿದ್ದ 'ಪ್ರಕೃತಿ ವಿಜ್ಞಾನ' ಹಾಗೂ ಬುಖ್ನರ್

ಬರೆದಿದ್ದ 'ಬಲ ಮತ್ತು ದ್ರವ್ಯ' ಎನ್ನುವ ಪುಸ್ತಕಗಳನ್ನು ಓದಿದ್ದ. ಪುಸ್ತಕಗಳು ಹುಡುಗನ ಮನಸ್ಸಿನಮೇಲೆ ಗಾಢವಾದ ಪರಿಣಾ ಬೀರಿದ್ದವು. ತನ್ನ ಹನ್ನೆರಡನೇ ವಯಸ್ಸಿನಲ್ಲಿ ಓದಿದ ರೇಖಾಗಣಿ ಪುಸ್ತಕದಲ್ಲಿ ಅವನು ಹೇಳಿಕೆ ಮತ್ತು ಪುರಾವೆ, ರೇಖಾಚಿತ್ರಗಳು ಮತ ವಾದ ಇವುಗಳ ನಡುವೆ ಇದ್ದ ಸಂಬಂಧ ಹಾಗೂ ಅಡ್ಡಾದಿಡ್ಡಿಯಾ ಕಾಣುವ ಜಗತ್ತಿನ ಹಿಂದಿರುವ ಬೌದ್ಧಿಕ ಹಾಗೂ ಮಾನಸಿಕ ಕ್ರಮ ಮತ ಸೌಂದರ್ಯಗಳನ್ನು ಕಾಣಲು ಪ್ರಯತ್ನಿಸಿದ್ದನು.

ಆಲ್ಬರ್ಟ್‌ನಿಗೆ ಹದಿನೈದು ವರ್ಷ ವಯಸ್ಸಾಗಿದ್ದಾ ಉದ್ಯೋಗದಲ್ಲಿ ಉಂಟಾದ ಮುಗ್ಗಟ್ಟಿನಿಂದ ತಂದೆ ತಾಯಿ ತಂ ಹಾಗೂ ಚಿಕ್ಕಪ್ಪ ಇಟಲಿಯ ಮಿಲಾನ್ ನಗರಕ್ಕೆ ವಲಸೆ ಹೋದರ ಆಲ್ಬರ್ಟ್ ಮ್ಯೂನಿಕ್‌ನಲ್ಲೇ ಉಳಿದು ಅಭ್ಯಾಸ ಮುಂದುವರೆಸಿ ಶಾಲೆಯ ಉಸಿರು ಕಟ್ಟಿಸುವ ವಾತಾವರಣ ಅವನನ್ ಅಸಹನೀಯನನ್ನಾಗಿಸಿತು. ಗಣಿತದಲ್ಲಿ ಚೆನ್ನಾಗಿದ್ದರೂ ಭಾಷೆ ಮತ್ ವ್ಯಾಕರಣಗಳ ಅಭ್ಯಾಸ ಅವನಲ್ಲಿ ನಿರಾಸಕ್ತಿ ಹಾಗೂ ಅಸ ಉಂಟುಮಾಡಿದ್ದವು. ಶಾಲಾ ವಾತಾವರಣ ಹಾಳು ಮಾಡಬಾರದೆಂ ಶಿಕ್ಷಕರು ಆಲ್ಬರ್ಟ್‌ನನ್ನು ಕೇಳಿಕೊಂಡರು. ಅವರ ಅಭಿಪ್ರಾಯವ ಪರೀಕ್ಷೆಗೆ ಆರು ತಿಂಗಳು ಮೊದಲೇ ಮ್ಯೂನಿಕ್ ಬಿಟ್ಟು ಮಿಲಾ ಸೇರಿದ.

ಇಟಲಿ ಕಲೆಗಳ ತೌರೂರು. ಸಂಗೀತದ ಚಿಲುಮೆ. ಅಲ್ಲಿ ಜನರ ಸರಳ ಹಾಗೂ ಸ್ವಚ್ಛಂದ ಬದುಕು ಆಲ್ಬರ್ಟ್‌ನನ್ನು ಆಕರ್ಷಿಸಿ ಆದರೆ ಈ ಆಕರ್ಷಣೆ ಬಹಳ ಕಾಲ ಅನುಭವಿಸಲು ಆಲ್ಬರ್ಟ್‌ನಿ ಸಾಧ್ಯವಾಗಲಿಲ್ಲ. ತಂದೆಯ ಉದ್ಯೋಗದಲ್ಲಿ ಮತ್ತೆ ತೊಡಕುಂಟಾ ಮನೆಯ ಆರ್ಥಿಕ ಪರಿಸ್ಥಿತಿ ಕೆಟ್ಟಿತು. ಈ ಕಾರಣಕ್ಕಾಗಿ ಆಲ್ಬರ್ಟ ವೃತ್ತಿವಿದ್ಯೆ ಕಲಿಯುವುದು ಅನಿವಾರ್ಯವಾಯಿತು. ಯುರೋಪಿನಲ್ಲಿ ಪ್ರಸಿದ್ಧವಾಗಿದ್ದ ಜ್ಯೂರಿಕ್‌ನ ತಾಂತ್ರಿಕ ಶಾ

ಸೇರಲು ಪ್ರವೇಶ ಪರೀಕ್ಷೆ ಬರೆದ. ಆದರೆ ಆ ಪರೀಕ್ಷೆಯಲ್ಲಿ ಅನುತ್ತೀರ್ಣನಾದ. ಗಣಿತ ಹಾಗೂ ಭೌತವಿಜ್ಞಾನ ವಿಷಯಗಳಲ್ಲಿ ಉತ್ತೀರ್ಣನಾಗಿದ್ದರೂ ಜೀವ ವಿಜ್ಞಾನದಲ್ಲಿ ಅನುತ್ತೀರ್ಣನಾಗಿದ್ದ. ಆದುದರಿಂದ ಆರೌ ಎಂಬ ಪಟ್ಟಣದಲ್ಲಿದ್ದ ಲಷ್ಕರಿ ಶಾಲೆಯಲ್ಲಿ ಒಂದು ವರ್ಷದ ಡಿಪ್ಲಮೊ ಪಡೆದು ನಂತರ ಜ್ಯೂರಿಕ್‌ನ ತಾಂತ್ರಿಕ ಶಾಲೆಗೆ ಪ್ರವೇಶ ಪಡೆದ. ಆದರೆ ಈ ಮಧ್ಯೆ ಅವನು ಇಂಜಿನಿಯರ್ ಆಗುವ ಬಯಕೆ ಬಿಟ್ಟು ಭೌತವಿಜ್ಞಾನ ಕಲಿಯುವ ನಿರ್ಧಾರ ಕೈಗೊಂಡಿದ್ದ. ಹೀಗೆ ತನ್ನ ನಿರ್ಧಾರಗಳನ್ನು ಆಗಾಗ ಬದಲಿಸಿಕೊಳ್ಳುವ ಪ್ರವೃತ್ತಿ ಅವನಿಗೆ ಅಂಟಿಕೊಂಡೇ ಬಂದಿತ್ತು. ಅಲ್ಲಿ ಸ್ವತಂತ್ರವಾಗಿ ಅಭ್ಯಾಸಮಾಡಲು ಎಲ್ಲ ಅನುಕೂಲಗಳೂ ಇದ್ದದ್ದರಿಂದ ಮಾಕ್ಸ್‌ವೆಲ್, ಹರ್ಟ್ಸ್, ಬೋಲ್ಟ್ಸ್‌ಮನ್, ಕಿರ್‌ಹಾಫ್ ಮುಂತಾದವರ ಸೈದ್ಧಾಂತಿಕ ಭೌತ ವಿಜ್ಞಾನದ ಕೃತಿಗಳನ್ನು ಓದಿ ಭೌತವಿಜ್ಞಾನವನ್ನು ಗಣಿತದ ಲೆಕ್ಕಾಚಾರದ ಮೂಲಕ ನಿರ್ಮಿಸುವುದನ್ನು ಕಲಿತ.

ಬಾಳದೋಣಿಯಲ್ಲಿ

ಆಲ್ಬರ್ಟ್ ಐನ್‌ಸ್ಟೈನ್ ತನ್ನ ಜೀವಿತದ ಮೊದಲ ಪದವಿಯನ್ನು ೧೯೦೦ರಲ್ಲಿ ಜ್ಯೂರಿಕ್‌ನ ತಾಂತ್ರಿಕ ಶಾಲೆಯಿಂದ ಪಡೆದ. ತಾಂತ್ರಿಕ ಶಾಲೆಯ ಪ್ರಾಧ್ಯಾಪಕರು ಒಳ್ಳೆಯ ಮೆಚ್ಚುಗೆ ಪತ್ರ ಬರೆದುಕೊಟ್ಟರು. ಆದರೆ ಅದೇ ಶಾಲೆಯಲ್ಲಿ ಉದ್ಯೋಗಕ್ಕೆ ಮಾತ್ರ ಅವಕಾಶವಾಗಲಿಲ್ಲ. ಯುವಕ ಆಲ್ಬರ್ಟ್ ಒಂದು ವರ್ಷಕಾಲ ಉದ್ಯೋಗಕ್ಕಾಗಿ ಜ್ಯೂರಿಕ್‌ನ ಬೀದಿ ಬೀದಿ ಅಲೆದು ಸುಣ್ಣವಾಗಿ ಸ್ವಿಟ್ಜರ್‌ಲೆಂಡಿಗೆ ತೆರಳಿ ಆ ದೇಶದ ಪೌರತ್ವ ಪಡೆದ. ಆದರೂ ನಿರುದ್ಯೋಗ ಬೆಂಬಿಡದ ಭೂತವಾಗಿ ಕಾಡುತ್ತಿತ್ತು. ಜ್ಯೂರಿಕ್‌ನ ತಾಂತ್ರಿಕ ಶಾಲೆಯಲ್ಲಿ ಸಹಪಾಠಿಯಾಗಿದ್ದ ಮಾರ್ಸೆಲ್ ಗ್ರಾಸ್‌ಮನ್ ಐನ್‌ಸ್ಟೈನ್‌ನ ಬದುಕಿನ ಕತ್ತಲೆಯಲ್ಲಿ ಬೆಳಕಿನೊಂದು ಕಿರಣವಾಗಿ ಕಂಡ. ಗೆಳೆಯನ ಕಷ್ಟವನ್ನು ಕಂಡ

ಗ್ರಾಸ್‌ಮನ್‌ನ್ನನಿಗೆ ಕರುಳು ಚುರುಕ್ ಎನ್ನಿಸಿತು. ಬರ್ನ್ ನಗರದ
ಏಕಸ್ವ (Patent) ಕಛೇರಿಯ ನಿರ್ದೇಶಕ ಹಾಲರ್ ಅವರಿಗೆ ಮಾ
ಗ್ರಾಸ್‌ಮಾನ್ ಶಿಫಾರಸು ಮಾಡಿ ಐನ್‌ಸ್ಟೀನ್‌ಗೆ ಏಕಸ್ವ ಪರಿ
ಕೆಲಸ ಕೊಡಿಸಿದ. ಪದವಿ ಪಡೆದ ಎರಡು ವರ್ಷಗಳ ನಂತರ ಕೊ
ಆಲ್ಬರ್ಟ್‌ನ ಬದುಕಿಗೊಂದು ಮಾರ್ಗವಾಯಿತು. ವರ್ಷಕ್ಕೆ ಪ
ಸಾವಿರ ಫ್ರಾಂಕ್‌ಗಳ ವೇತನದ ಹುದ್ದೆ ಆದಾಗಿದ್ದರಿಂದ ನೆ
ಹಾಗೂ ಬಿಡುವಿನ ಜೊತೆಗೆ ವಯಸ್ಸಿಗನುಗುಣವಾಗಿ ಬಂದ ಬ
ಆಕರ್ಷಣೆಯ ಸಂಗಾತಿಗಾಗಿ ಬದುಕು ಹಂಬಲಿಸಿತು.

ಆಲ್ಬರ್ಟ್‌ನ ನೆನಪಿನ ಬೆಳ್ಳಿ ಪರದೆಯಮೇಲೆ
ಮಾಯವಾದ ಹರಿಣಿಗಳೆಷ್ಟೊ? "ಬಣ್ಣ ಬಣ್ಣದ ಚಿಟ್ಟೆಗಳ
ಇವುಗಳಲ್ಲಿ ಬದುಕನ್ನು ಗಂಭೀರವಾಗಿ ಪರಿ
ಅರ್ಥಪೂರ್ಣವಾಗಿಸಿಕೊಳ್ಳಲು ಪ್ರಯತ್ನಿಸಿದ ಸಂಗಾತಿಯ
ಮೂಡಿಸಲು ಆತನಿಗೆ ಪ್ರಯಾಸವೇ ಆಯಿತು.

ಜ್ಯೂರಿಕ್ ತಾಂತ್ರಿಕ ಶಾಲೆಯಲ್ಲಿ ತನ್ನ ಸಹಪಾಠಿಯ
ಹಂಗೇರಿ ದೇಶದ ಮಿಲೇವ ಮಾರಿಕ್‌ಳ ನೆನಪು ಅವನ ಹೃ
ವೀಣೆಯ ತಂತಿಯನ್ನು ಮೀಟಿತ್ತು. ತನಗಿಂತ ವಯಸ್ಸಿನಲ್ಲಿ
ವರ್ಷ ಹಿರಿಯಳಾಗಿದ್ದರೂ ಭೌತ ವಿಜ್ಞಾನದಲ್ಲಿ ಆಕೆಗಿದ್ದ
ಅವನನ್ನು ಆಕರ್ಷಿಸಿತ್ತು. ಅವನ ಮೈನಲ್ಲಿ ಅನುರಾಗ ಹರಿ
ಮಾರಿಕ್‌ಳು ನಿಧಾನವಾಗಿ ಅವನ ಹೃದಯವನ್ನು ಆವರಿ
ಆಲ್ಬರ್ಟ್ ಮಾರಿಕ್‌ಳನ್ನು ಅನೇಕಸಾರಿ ಭೇಟಿಯಾದ. ಹ
ಪುಸ್ತಕಗಳಲ್ಲಿ ಕಲ್ಪನೆಯ ಕವಿತೆಗಳನ್ನು ಪರಸ್ಪರ ಬರೆದುಕೊ
ಈರ್ವರೂ ೧೯೦೩ರಲ್ಲಿ ವೈವಾಹಿಕ ಬಂಧನಕ್ಕೆ ಒಳಗಾದರು.

ಮಿಲೋವ ಮಾರಿಕ್‌ಳ ತನ್ನ ಸುತ್ತಲಿನ ಜನರೆ
ಬೆರೆಯದ ಒಂಟಿತನದ ನಡವಳಿಕೆ ಭೌತ ವಿಜ್ಞಾನದ ಸ

ಪ್ರೂರಕವಾಗುವುದರ ಬದಲು ಸಮಸ್ಯೆಯಾಗತೊಡಗಿತು. ಸುಖವಾದ ವೈವಾಹಿಕ ಜೀವನಕ್ಕೆ ಅಗತ್ಯವಾಗಿ ಇರಬೇಕಾದ ಅರಿವು ಮತ್ತು ಹೊಂದಾಣಿಕೆ, ಎರಡೂ ಆಕೆಯಲ್ಲಿ ಇರಲಿಲ್ಲವಾದ್ದರಿಂದ ಬದುಕು ಎತ್ತು ಏರಿಗೆ ಏಳೀತು, ಕ್ವಾಣ ಕೆರೆಗೇಳೀತು' ಅಂದ ಹಾಗಾಯಿತು. ಈ ಮಧ್ಯೆ ಒಂದರ ಹಿಂದೆ ಒಂದರಂತೆ ಎರಡು ಗಂಡು ಮಕ್ಕಳೂ ಹುಟ್ಟಿದರು. ಐನ್‌ಸ್ಟೈನ್ ಆ ಮಕ್ಕಳೊಂದಿಗೆ ಬೆರತು ಅವರನ್ನು ಆಟವಾಡಿಸುತ್ತಾ ಹಾಗೂ ಆ ಮಕ್ಕಳ ಮನಸ್ಸನ್ನು ತಿದ್ದುವುದರಲ್ಲಿ ತೊಡಗಿ ಹೆಂಡತಿಯೊಂದಿಗಿನ ತನ್ನ ಅತೃಪ್ತಿ ಹಾಗೂ ವೈಮನಸ್ಸನ್ನು ಮರೆಯುತ್ತಲಿದ್ದ.

ಸ್ಫೂರ್ತಿಯ ಚಿಲುಮೆಯಾಗಬೇಕಿದ್ದ ಮಡದಿ ತೊಡರು ಹೊರಡಾದಾಗಲೂ ಐನ್‌ಸ್ಟೈನ್ ೧೯೦೫ ರಿಂದ ೧೯೦೭ರ ವರೆಗೆ ಭೌತವಿಜ್ಞಾನದ ಬಗ್ಗೆ ಪ್ರಕಟಿಸಿದ ತನ್ನ ಲೇಖನಗಳಿಂದ ಪ್ರಪಂಚದಾದ್ಯಂತ ವಿಜ್ಞಾನಿಗಳ ಗಮನ ಸೆಳೆದದ್ದರ ಪರಿಣಾಮವಾಗಿ ೧೯೦೯ರಲ್ಲಿ ಜ್ಯೂರಿಕ್ ವಿಶ್ವವಿದ್ಯಾನಿಲಯದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿ, ಎರಡು ವರ್ಷಗಳ ನಂತರ ಪ್ರಾಗ್ ನಗರದಲ್ಲಿರುವ ಜರ್ಮನ್ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್ ಆಗಿ ದುಡಿದರು.

ಬರ್ಲಿನ್ ನಗರದಲ್ಲಿರುವ ಕೈಸರ್ ವಿಲ್ ಹೆಲ್ಮ್ ಸಂಸ್ಥೆಯ ಡೈರೆಕ್ಟರಾಗಿ ಹಾಗೂ ವಿಜ್ಞಾನ ಅಕಾಡೆಮಿಯ ಸದಸ್ಯರಾಗಿ ೧೯೧೪ರಲ್ಲಿ ನೇಮಕಗೊಂಡ ಐನ್‌ಸ್ಟೈನ್‌ರಿಗೆ ವಿಶೇಷ ಸವಲತ್ತನ್ನೂ ನೀಡಲಾಗಿತ್ತು. ಅದೆಂದರೆ ಅವರಿಗೆ ಬೇಕೆನಿಸಿದಾಗ ಮಾತ್ರ ವಿದ್ಯಾರ್ಥಿಗಳಿಗೆ ಪಾಠ ಹೇಳಬಹುದಿತ್ತು. ಇಂಥಾ ಅವಕಾಶದಿಂದ ದೊರೆಯುವ ಕಾಲವನ್ನು ತಮ್ಮ ಸಂಶೋಧನೆಗಳಿಗೆ ವಿನಿಯೋಗಿಸಲು ಅವಕಾಶವಾಯಿತಲ್ಲ ಎಂದು ಹೇಳಿ ಹಿಗ್ಗಿದರು.

ಒಂದು ದಿನ ಮಧ್ಯಾಹ್ನ. ಸೂರ್ಯ ನೆತ್ತಿಯ ಮೇ
ಉರಿಯುತ್ತಿದ್ದ. ಐನ್‌ಸ್ಟೈನ್ ತಮ್ಮ ಓದುವ ಕೋಣೆಯಿಂದ ಮಡ
ಮಾರಿಕ್‌ಳನ್ನು ಕೂಗಿದರು. ಆಕೆಯಿಂದ ಯಾವ ಉತ್ತರವೂ ಬರಲಿ
ಮತ್ತೊಮ್ಮೆ ಗಟ್ಟಿಯಾಗಿ ಕೂಗಿದರು. ಆಗಲೂ ಉತ್ತರವಿಲ್ಲ.
ಹಾಲ್‌ನಲ್ಲಿ ಕುಳಿತು ವೃತ್ತ ಪತ್ರಿಕೆ ಓದುತ್ತಿದ್ದಳು. ಮಕ್ಕಳು ಹೊ
ಹೋಗಿದ್ದರು. ಐನ್‌ಸ್ಟೈನ್‌ರೇ ಎದ್ದುಬಂದು ಹೆಂಡತಿ ಕುಳಿತಿ
ಎದುರಿನ ಛೇರಿನಲ್ಲಿ ಕುಳಿತು; ತನಗೆ ಬರ್ಲಿನ್‌ನಲ್ಲಿ ಸಿಕ್ಕಿರುವ ಅವಕಾ
ವಿಷಯವನ್ನು ತಿಳಿಸಿ, ಅಲ್ಲಿಗೆ ಹೊರಡಲು ಕೇಳಿಕೊಂಡರು.
ಒಂದಿಷ್ಟೂ ಯೋಚಿಸದೆ 'ತಾನು ಹಾಗೂ ತನ್ನ ಮಕ್ಕಳು ಯಾ
ಅಲ್ಲಿಗೆ ಬರುವುದಿಲ್ಲ. ಬೇಕಿದ್ದರೆ ನೀವೇ ಹೋಗಿ' ಎಂದಳು ಕ
ಮುರಿದಂತೆ. ಬರ್ಲಿನ್‌ನ ಆಕರ್ಷಣೆ ಬಲವಾಗಿ ಕಾಡುತ್ತಿದ್ದರಿ
ಐನ್‌ಸ್ಟೈನ್ ತನ್ನ ಹೆಂಡತಿ ಮಕ್ಕಳನ್ನು ತ್ಯಜಿಸಿ ಅಲ್ಲಿಗೆ ಹೋದ
ಮಿಲೇವ ಮಾರಿಕ್ ಹಾಗೂ ಐನ್‌ಸ್ಟೈನ್‌ರ ವಿವಾಹ ಗ್ರಂ
ಮುರಿದುಬಿತ್ತು. ಮಿಲೇವ ಸ್ವಿಟ್ಸರ್‌ಲೆಂಡಿನಲ್ಲೇ ಉಳಿದಳು.

ಅಲ್ಬರ್ಟ್ ಐನ್‌ಸ್ಟೀನ್ ಬರ್ಲಿನ್ ತಲುಪಿ ತನ್ನ ಸೋ
ಮಾವನ ಮನೆಯಲ್ಲಿ ಉಳಿದರು. ಸೋದರಮಾವನ ಮಗಳು ಎ
ತನ್ನ ಗಂಡನಿಂದ ವಿವಾಹ ವಿಚ್ಛೇದನ ಪಡೆದುಕೊಂಡು ಬಂ
ತಂದೆಯ ಮನೆಯಲ್ಲಿದ್ದಳು. ಆಕೆಗೂ ಎರಡು ಮಕ್ಕಳಿದ್ದ
ಅಷ್ಟೇನೂ ಓದಿಲ್ಲದ ಎಲ್ಸ ಐನ್‌ಸ್ಟೈನ್‌ರ ಬೇಕು-ಬೇಡಗಳನ್ನು ಅರಿ
ಅವರಿಗೆ ನೆರವಾಗುತ್ತಿದ್ದಳು. ಆಕೆಯ ಪ್ರೀತಿ ತುಂಬಿದ ಆದರ ಆ
ಐನ್‌ಸ್ಟೈನ್‌ರ ಮನಸ್ಸು ಬಂಧಿಯಾಗಿ; ಇಬ್ಬರ ಮಧ್ಯೆ ಅನು
ಉಂಟಾಗಿ, ಅವರು ಆಕೆಯನ್ನು ವಿವಾಹವಾದರು. ಹೆಂಡತಿ ಎ
ಗಂಡನ ಇಚ್ಛೆಯರಿತು ನಡೆವ ಸತಿಯಾದ್ದರಿಂದ; ಸಂಸಾರದ
ಬಹಳವಾಗಿ ನೊಂದಿದ್ದ ಅಲ್ಬರ್ಟ್‌ರ ಬದುಕಿನಲ್ಲಿ ಮತ್ತೊ
ಆಶಾಕಿರಣ ಹರಿದಂತಾಗಿ ಹೊಸ ಹುರುಪು ಮೂಡಿದಂತಾಯಿತು.

ಯಹೂದಿಗಳನ್ನು ಕಂಡರೆ ಜರ್ಮನ್‌ರಿಗೆ ಎಲ್ಲಿಲ್ಲದ ಸಿಟ್ಟು ಮತ್ತು ದ್ವೇಷ. ಅಸಂಘಟಿತರಾಗಿದ್ದ ಯಹೂದಿಗಳಿಗೆ ಜರ್ಮನಿಯ ಎಲ್ಲ ರಂಗಗಳಲ್ಲಿ ವಂಚನೆ ನಡೆಯುತ್ತಿತ್ತು. ಇದರ ವಿರುದ್ಧ ಪ್ರತಿಭಟಿಸಲು ಹಾಗೂ ತಮ್ಮ ಹಕ್ಕುಗಳನ್ನು ಪಡೆಯಲು ಚೈಮ್‌ವೀಸ್‌ಮನ್‌ರ ನಾಯಕತ್ವದಲ್ಲಿ ಜಿಯೋನಿಸ್ಟ್ ಚಳುವಳಿ ಪ್ರಾರಂಭವಾಗಿತ್ತು. ಐನ್‌ಸ್ಟೈನ್‌ರು ಪ್ರಾಗ್ ನಗರದಲ್ಲಿ ಪ್ರೊಫೆಸರ್ ಆಗಿದ್ದಾಗ ಯಹೂದಿಗಳ ಮೇಲಿನ ಜರ್ಮನರ ದಬ್ಬಾಳಿಕೆ ಸ್ಪಷ್ಟವಾಗಿ ಅರ್ಥವಾಯಿತು. ಅವರು ಯಹೂದಿ ಧರ್ಮಾಚರಣೆಯನ್ನು ತ್ಯಜಿಸಿ ಬಹಳ ವರ್ಷಗಳೇ ಕಳೆದಿದ್ದವು. ಮತೀಯ ಸಂಪ್ರದಾಯಗಳಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ. ಒಂದು ದೇಶಕ್ಕಾಗಲಿ, ಒಂದು ಜನಾಂಗದ ಗುಂಪಿಗಾಗಲಿ ಸೇರಿದವರಾಗಿರಲಿಲ್ಲ. ಹೀಗಿದ್ದರೂ ಶೋಷಣೆಯ ವಿರುದ್ಧ ಬಂಡಾಯ ಸಾರುವುದಕ್ಕಾಗಿ ಜಿಯೋನಿಸ್ಟ್ ಚಳುವಳಿಯಲ್ಲಿ ಭಾಗವಹಿಸಲು ೧೯೨೧ರಲ್ಲಿ ನಿರ್ಧರಿಸಿ ಚಳುವಳಿಯ ನಾಯಕ ಚೈಮ್‌ವೀಸ್‌ಮನ್ ಅವರ ಸಂಗಾತಿಗಳಾದರು. ಯುರೋಪಿನಲ್ಲಿ ಅವಕಾಶಗಳಿಂದ ವಂಚಿತರಾದ ಎಲ್ಲ ಬುದ್ಧಿವಂತ ಯಹೂದಿಗಳಿಗಾಗಜ ರೂಸಲೇಮ್‌ನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಕನಸನ್ನೂ ಕಂಡರು. ಜನಾಂಗದ ಸಂಘಟನೆಗಾಗಿ ಚೈಮ್‌ವೀಸ್‌ಮನ್‌ರ ಜೊತೆಗೂಡಿ ಅಮೆರಿಕ, ಇಂಗ್ಲೆಂಡ್, ಪ್ರಾನ್ಸ್, ಜಪಾನ್, ಪ್ಯಾಲೆಸ್ಟೈನ್ ಮುಂತಾದ ದೇಶಗಳಿಗೂ ಹೋಗಿ ಬಂದರು.

ಹಿಟ್ಲರ್ ೧೯೩೩ರಲ್ಲಿ ಅಧಿಕಾರಕ್ಕೆ ಬರುವಷ್ಟರಲ್ಲಿ ನಾಜಿಗಳ ದಬ್ಬಾಳಿಕೆಯಿಂದ ತಪ್ಪಿಸಿಕೊಂಡುಬಂದು ಬೆಲ್ಜಿಯಮ್‌ನ ಸಮುದ್ರ ತೀರದ ಒಂದು ಹಳ್ಳಿಯಲ್ಲಿ ವಾಸ್ತವ್ಯ ಹೂಡಿದ್ದ ನಿರಾಶ್ರಿತ ವಿಜ್ಞಾನಿಗಳ ಗುಂಪಿನಲ್ಲಿ ಐನ್‌ಸ್ಟೈನ್‌ರ ಸಂಸಾರವೂ ಸೇರಿತ್ತು. ನಾಜಿಗಳು ಅಲ್ಲಿಗೂ

ನುಗ್ಗಿ ಬಂದು ಐನ್‌ಸ್ಟೈನ್‌ರನ್ನು ಕೊಲೆಮಾಡಬಹುದೆಂಬ ಸುದ್ದಿ ಹಬ್ಬಿದ
ತಕ್ಷಣ ಅವರು ತಮ್ಮ ಸಂಸಾರದೊಂದಿಗೆ ಅಮೆರಿಕಾದತ್ತ ಪ್ರಯಾಣ
ಬೆಳೆಸಿದರು. ಬರ್ಲಿನ್‌ನ ಕೈಸರ್ ವಿಲ್‌ಹೆಲ್ಮ್ ಸಂಸ್ಥೆಯಲ್ಲಿದ್ದಂತಹ
ಕೆಲಸವೇ ಅಮೆರಿಕಾದ ಪ್ರಿನ್ಸ್‌ಟನ್ನಿನಲ್ಲಿ ಐನ್‌ಸ್ಟೈನರಿಗೆ ದೊರಕಿತು.
ಅವರ ಬಾಳದೋಣಿ ಬೀಳುತೇಳುತ ದೂರ ತೀರವ ಸೇರಿತು.

ಅಧ್ಯಾಯ- ೩

ಕೀರ್ತಿ ಶಿಖರಗಳು

ಕಲ್ಪನೆಗೆ ಮಣಿದ ಸತ್ಯ

ವಿಜ್ಞಾನಿಯೊಬ್ಬ ತಾನು ಅನುಭವಿಸಿದ ಅನುಭವವನ್ನು ಪ್ರಯೋಗಕ್ಕೆ ಒಳಪಡಿಸಿ, ವಿಮರ್ಶಿಸಿ ತಾಳೆನೋಡಿ ಪಡೆದ ಸತ್ಯ ಎಲ್ಲ ಸ್ಥಳಗಳಲ್ಲಿ ಹಾಗೂ ಎಲ್ಲ ಕಾಲಗಳಲ್ಲಿ ಒಂದು ಪರಿಮಿತಿಯ ಅರ್ಥದಲ್ಲಿ ಸ್ಥಿರ ಎಂದು ಕಂಡುಬಂದಮೇಲೆ ಆ ಸತ್ಯ ಸರ್ವಮಾನ್ಯವಾಗುವುದು ರೂಢಿ. ಸತ್ಯವನ್ನು ಬಗ್ಗಿಸುವುದು ಒಂದು ಪ್ರಯಾಸದ ಕೆಲಸ. ಬಹುಪಾಲು ವಿಜ್ಞಾನಿಗಳು ತಮ್ಮ ಜೀವನವನ್ನು ಕೊರಡಿನಂತೆ ತೇದಾಗಲೂ ಸತ್ಯ ದಕ್ಕದೆ ಸೋತಿದ್ದಾರೆ. ಎಲ್ಲೋ ಕೆಲವು ವಿಜ್ಞಾನಿಗಳಿಗೆ ಕೊನೆಯ ಹಂತದಲ್ಲಿ ಸತ್ಯದ ಅರಿವಾಗಿರುವುದು. ಆದರೆ ಆಲ್ಬರ್ಟ್ ಐನ್‌ಸ್ಟೈನ್‌ರ ವಿಷಯವೇ ಬೇರೆ. ಇಂಥಾ ಅದೃಷ್ಟವಂತ ವಿಜ್ಞಾನಿ ಪ್ರಪಂಚದಲ್ಲಿ ಮತ್ತಾರೂ ಹುಟ್ಟಿರಲಾರರು. ಬರೀ ಕಲ್ಪನೆಗೇ ಸತ್ಯ ಮಣಿದು ಅವರ ಕೀರ್ತಿ ಪತಾಕೆಯನ್ನು ಎತ್ತಿ

ಹಿಡಿಯಿತು. ಜ್ಞಾನದ ಬಹುಪಾಲು ಪ್ರಕಾರಗಳಿಗೂ ಅವರ ಅ
ಸತ್ಯವಾದ ಸಾಪೇಕ್ಷತಾ ಸಿದ್ಧಾಂತ ಆಧಾರವಾಗಿ ಜೀವಿತ ಅವಧಿಯ
ದಂತಕತೆಯಾದದ್ದು ಸೋಜಿಗವೇಸರಿ.

ಆಲ್ಬರ್ಟ್ ಐನ್‌ಸ್ಟೈನ್‌ರು ೧೯೦೫ರಲ್ಲಿ 'ಅನಲನ್
ಫಿಸಿಕ್' ಎನ್ನುವ ವಿಜ್ಞಾನ ಪತ್ರಿಕೆಯಲ್ಲಿ ಪ್ರಕಟಿಸಿದ ಮ
ಲೇಖನಗಳಲ್ಲಿ ಸಾಪೇಕ್ಷತಾ ಸಿದ್ಧಾಂತವೂ ಒಂದು.

ಒಂದುಕ್ಕೊಂದು ಸಾಪೇಕ್ಷವಾಗಿ ಚಲಿಸುವ ಚೌಕಟ್ಟನಲ್ಲಿ
ವೀಕ್ಷಕರು ವಿವರಿಸುವ, ಭೌತ ಘಟನೆಗಳ ನಡುವಿನ ಸಂಬಂಧ
ತಿಳಿಸುವ ಭೌತ ವಿಜ್ಞಾನದ ಒಂದು ಶಾಖೆ ಸಾಪೇಕ್ಷತಾ ಸಿದ್ಧ
ಯಾದೃಚ್ಛಿಕ ಸಾಪೇಕ್ಷ ಚಲನೆಗೆ ಸಂಬಂಧಪಟ್ಟದ್ದು ಸಾ
ಸಾಪೇಕ್ಷತಾ ಸಿದ್ಧಾಂತವಾದರೆ; ಇಬ್ಬರು ವೀಕ್ಷಕರು ಬ
ಸರಳರೇಖೆಯ ನೇರದಲ್ಲಿ ಸಾಪೇಕ್ಷವಾಗಿ ಒಂದು ಸ್ಥಿರವೇಗ
ಚಲಿಸುವಾಗಿನ ಪರಿಸ್ಥಿತಿಯನ್ನು ತಿಳಿಸುವುದು ವಿಶಿಷ್ಟ ಸಾಪೇ
ಸಿದ್ಧಾಂತ.

ವಿಮಾನ ಒಂದೇ ವೇಗದಲ್ಲಿ ಚಲಿಸುತ್ತಿದ್ದರೆ ಒಳಗಿ
ಪ್ರಯಾಣಿಕನಿಗೆ ತಾನು ಚಲಿಸುತ್ತಿದ್ದೇನೆ ಎನ್ನುವ ಅ
ಆಗುವುದಿಲ್ಲ. ಕಿಟಕಿಯಿಂದ ಹೊರಗೆ ನೋಡಿದಾಗ ಮಾತ್ರ ಅ
ತಾನು ಚಲಿಸುತ್ತಿದ್ದೇನೆ ಎನ್ನುವ ಅರಿವಾಗುವುದು. ರೈ
ಪ್ರಯಾಣಮಾಡುವಾಗ ಇಂಥಾದ್ದೇ ಅನುಭವ ನಮಗಾಗು
ಪಕ್ಕದ ಹಳಿಯ ಮೇಲಿನ ರೈಲು ಚಲಿಸಲು ಪ್ರಾರಂಭಿಸಿದರೆ
ಕುಳಿತಿರುವ ರೈಲೇ ಚಲಿಸಿದಂತೆ ಅನುಭವವಾಗುತ್ತದೆ.

ಒಂದು ಕಾಯದ ಚಲನೆ ಅಥವ ನಿಶ್ಚಲತೆಯನ್ನು ತಿ
ಮತ್ತೊಂದು ಕಾಯದ ಸಂಬಂಧ ಬೇಕಾಗುತ್ತದೆ. ನಿರ
ಚಲನೆಯನ್ನು ಅದೂ ಆಕಾಶದಲ್ಲಿ ಗ್ರಹಿಸುವುದಕ್ಕೆ ಆಗುವುದಿಲ್ಲ.

ಚಲನೆಗೆ ಸಂಬಂಧಪಟ್ಟಂತೆ. ಆದರೆ ಇದೇ ಸಿದ್ಧಾಂತ ದ್ರವ್ಯ - ಶಕ್ತಿ ಸಂಬಂಧವನ್ನೂ ವಿವರಿಸುತ್ತದೆ ಎನ್ನುವುದನ್ನು ಐನ್‌ಸ್ಟೈನ್ ತೋರಿಸಿಕೊಟ್ಟರು.

ಒಂದು ವಸ್ತು ವಿಕಿರಣ ರೂಪದಲ್ಲಿ ಕಳೆದುಕೊಳ್ಳುವ ಶಕ್ತಿ ಹಾಗೂ ಅದರ ದ್ರವ್ಯಾಂಶದಲ್ಲಿ ಆಗುವ ಕಡಿತ ಹಾಗೂ ಇವುಗಳಿಗಿರುವ ಸಂಬಂಧವನ್ನು $E = mc^2$ ಎನ್ನುವ ಸೂತ್ರದಿಂದ ವಿವರಿಸಿದರು. ಆಗ ಯಾರೂ ಇದನ್ನು ಗಂಭೀರವಾಗಿ ಗಮನಿಸಲಿಲ್ಲ. ಪ್ರಾಯೋಗಿಕವಾಗಿ ಇದನ್ನು ಸಮರ್ಥಿಸುವುದು ಅಷ್ಟು ಸುಲಭವಾದ ಕೆಲಸ ಆಗಿಲ್ಲದಿದ್ದುದು ಮುಖ್ಯ ಕಾರಣವಾಗಿತ್ತು. ಪ್ರಾಯೋಗಿಕ ಸಮರ್ಥನೆ ದೊರೆಯಲು ಇಪ್ಪತ್ತೈದು ವರ್ಷಗಳೇ ಬೇಕಾದವು. ಆಲ್ಬರ್ಟ್ ಐನ್‌ಸ್ಟೈನ್‌ರ ಈ ದ್ರವ್ಯ ಶಕ್ತಿ ಸಂಬಂಧವೇ ಪರಮಾಣು ಬಾಂಬಿನ ಹುಟ್ಟಿಗೆ ಕಾರಣವಾದದ್ದು. ದ್ರವ್ಯವನ್ನು ಹಿಂಡಿ ಶಕ್ತಿ ಪಡೆಯಲು ಮಾನವ ತೊಡಗಿದ್ದು.

ಒಂದು ಗ್ರಾಂ ದ್ರವ್ಯದಲ್ಲಿ ಅಡಕವಾಗಿರುವ ಶಕ್ತಿಯನ್ನು ಹತ್ತು ಲಕ್ಷ ಜನರು ತಮ್ಮ ಒಂದು ದಿನದ ಗೃಹಕೃತ್ಯಗಳಿಗೆ ಬಳಕೆಮಾಡಿಕೊಳ್ಳಬಹುದೆಂದರೆ ಊಹಿಸಿಕೊಳ್ಳಿ ದ್ರವ್ಯದ ಶಕ್ತಿಯ ಸಂಬಂಧವನ್ನು!

ಸೂರ್ಯನಲ್ಲಿ ಶಕ್ತಿ ಬಿಡುಗಡೆಯಾಗುವುದೂ ದ್ರವ್ಯದ ಪರಿವರ್ತನೆಯಿಂದ. ಜಲಜನಕ ಪರಮಾಣು ಹೀಲಿಯಂ ಆಗಿ ಪರಿವರ್ತನೆ ಹೊಂದುವುದರಿಂದ ಶಕ್ತಿ ಬಿಡುಗಡೆಯಾಗುತ್ತದೆ. ದ್ರವ್ಯಾಂಶ ಪ್ರತಿ ಸೆಕೆಂಡಿಗೆ ೪ - ೫ $\times$ ೧೦^{೬} ಟನ್ನಿನಷ್ಟು ಕಡಿಮೆಯಾಗುತ್ತಿದೆ ಎನ್ನುವುದನ್ನು ವಿವರಿಸಲೂ ಐನ್‌ಸ್ಟೈನ್‌ರ ಸಿದ್ಧಾಂತ ಮೂಲಕಾರಣವಾಯಿತು.

ಚಲನೆಯಲ್ಲಿರುವ ಒಂದು ಚೆಂಡು ಅದರ ನಿಶ್ಚಲ ಸ್ಥಿತಿಯ ದ್ರವ್ಯಾಂಶಕ್ಕಿಂತ ಹೆಚ್ಚು ದ್ರವ್ಯಾಂಶ ಹೊಂದಿರುತ್ತದೆ. ವಿದ್ಯುತ್ ದೀಪ... ಕಾದ ಫಿಲಮೆಂಟು ಅದು ಕಾಯಿಸದಿದ್ದಾಗ ಹೊಂದಿರು... ದ್ರವ್ಯಾಂಶಕ್ಕಿಂತ ಹೆಚ್ಚಿರುತ್ತದೆ ಎನ್ನುವ ಈ ಎಲ್ಲ ವಿಚಾರಗಳಿ... ಐನ್‌ಸ್ಟೈನ್‌ರ ಸಾಪೇಕ್ಷ ಸಿದ್ಧಾಂತ ವಿವರಣೆ ನೀಡುತ್ತದೆ.

ಸಾಪೇಕ್ಷತಾ ಸಿದ್ಧಾಂತವು ಉದ್ಭವಿಸುವ ಮುನ್ನ ಭೌ... ವಿಜ್ಞಾನವು 'ಶಕ್ತಿಯ ನಿತ್ಯತ್ವ ನಿಯಮ' ಹಾಗೂ 'ದ್ರವ್ಯಾಂಶದ ನಿತ್ಯ... ನಿಯಮ' ಎನ್ನುವ ಎರಡು ಮೂಲಭೂತ ನಿಯಮಗಳನ... ಮಾನ್ಯಮಾಡಿತ್ತು. ಸಂಪೂರ್ಣವಾಗಿ ಒಂದರಿಂದ ಮತ್ತೊಂದ... ಸ್ವತಂತ್ರವಾಗಿದೆ ಎನ್ನುವ ನಂಬಿಕೆಯಿತ್ತು. ಸಾಪೇಕ್ಷತಾ ಸಿದ್ಧಾಂತದಿಂದಾಗಿ ಇವೆರಡೂ ಒಂದಾಗಿ 'ದ್ರವ್ಯಾಂಶ ಶಕ್ತಿಯ ನಿತ್ಯ... ನಿಯಮ' ಉಂಟಾಗಲು ಕಾರಣವಾಯಿತು.

* * *

ಪ್ರಪಂಚದ ಭೌತವಿಜ್ಞಾನಕ್ಕೆ ಈ ಶತಮಾನದ ಮಹಾನ... ಕೊಡುಗೆಗಳೆಂದರೆ ಸಾಪೇಕ್ಷತಾವಾದ ಹಾಗೂ ಕ್ವಾಂಟಮ್‌ವಾದ... ಕಲ್ಪನೆಗಳು. ಆಧುನಿಕ ಭೌತಶಾಸ್ತ್ರದ ಮಹಾನ್ ಕ್ರಾಂತಿಗೆ ಈ ಎರಡು ಕಲ್ಪನೆಗಳು ತಳಪಾಯವಾದವು. ಇಂತಹ ಕ್ರಾಂತಿಕಾರಕ ಕಲ್ಪನೆಗ... ಒಂದಿರುವ ಸತ್ವವೇ ಆಲ್ಬರ್ಟ್ ಐನ್‌ಸ್ಟೈನ್.

ಸಾಪೇಕ್ಷತಾವಾದ ಸ್ವಲ್ಪ ಹೆಚ್ಚೂ ಕಡಿಮೆ ಸಂಪೂರ್ಣವಾ... ಐನ್‌ಸ್ಟೈನ್‌ರ ಕೊಡುಗೆ ಎಂದರೂ ತಪ್ಪಾಗಲಾರದು. ಆದ... ಕ್ವಾಂಟಮ್‌ವಾದದ ಜನಕ ಮ್ಯಾಕ್ಸ್‌ಪ್ಲ್ಯಾಂಕ್ ಆದರೂ ಬೆಳೆಸಿದವ... ಅನೇಕ ಮಂದಿ. ಅವರಲ್ಲಿ ಐನ್‌ಸ್ಟೈನ್‌ರೂ ಒಬ್ಬರು. ಐನ್‌ಸ್ಟೈನ್... ೧೯೨೧ರಲ್ಲಿ ನೊಬೆಲ್ ಬಹುಮಾನ ತಂದುಕೊಟ್ಟ ದ್ಯುತಿವಿದ್ಯು... ಪರಿಣಾಮವನ್ನು ಕುರಿತ ಅವರ ಸಂಶೋಧನೆ ಕ್ವಾಂಟಮ್‌ವಾದ... ಭದ್ರವಾದ ತಳಹದಿಯನ್ನು ಒದಗಿಸಿದ್ದು ಸೂರ್ಯನಷ್ಟೇ ಸತ್ಯ.

ಸತು, ಬೆಳ್ಳಿ, ಪ್ಲಾಟಿನಂ ಮುಂತಾದ ಯಾವುದಾದರೂ ಒಂದು ಲೋಹದ ತಗಡಿನ ಮೇಲೆ ಊದಾಬಣ್ಣದ ತೀವ್ರವಾದ ಬೆಳಕು ಬಿದ್ದಾಗ ವಿದ್ಯುತ್ ಕಣಗಳಾದ ಎಲೆಕ್ಟ್ರಾನುಗಳು ತಗಡಿನಿಂದ ಹೊರಕ್ಕೆ ಹಾರಿ ಹರಿಯುತ್ತವೆ. ಇದನ್ನು ದ್ಯುತಿ ವಿದ್ಯುತ್ ಪರಿಣಾಮ ಎನ್ನುತ್ತಾರೆ.

ಹೆನ್ರಿಕ್ ಹರ್ಟ್ಜ್ ಎನ್ನುವ ವಿಜ್ಞಾನಿ ೧೮೮೭ರಲ್ಲಿ ವಿದ್ಯುತ್ ಅಯಸ್ಕಾಂತೀಯ ಅಲೆಗಳ ಇರುವಿಕೆಯನ್ನು ತೋರಿಸಲು ಪ್ರಯೋಗ ನಡೆಸುತ್ತಿರುವಾಗ ದ್ಯುತಿ ವಿದ್ಯುತ್ ಗೋಚರಿಸಿತು.

ತಗಡಿನಿಂದ ಹೊರಹರಿಯುವ ವಿದ್ಯುತ್ ಕಣಗಳು ಬೇರೇನೂ ಆಗಿರದೆ ಅವು ಎಲೆಕ್ಟ್ರಾನ್‌ಗಳು ಎನ್ನುವುದನ್ನು ಲೆನಾರ್ಡ್ ಮತ್ತು ಥಾಂಸನ್ ಎನ್ನುವ ವಿಜ್ಞಾನಿಗಳು ೧೮೯೯ರಲ್ಲಿ ಕಂಡುಹಿಡಿದರು. ಅದೇ ವೇಳೆಗೆ ಮ್ಯಾಕ್ಸ್‌ವೆಲ್ ಅವರ ವಿದ್ಯುತ್‌ಕಾಂತೀಯ ಸಿದ್ಧಾಂತ ಪ್ರಕಟವಾಗಿತ್ತು. ಈ ಸಿದ್ಧಾಂತದ ಪ್ರಕಾರ ಬೆಳಕು ವಿದ್ಯುತ್‌ಕಾಂತೀಯ ಅಲೆಗಳು ಎನ್ನುವುದಾಗಿತ್ತು. ಈ ಅರಿವು ಎಲ್ಲ ಕಡೆಗೂ ವ್ಯಾಪಿಸಿತ್ತು. ಇದಕ್ಕೆ ಬೆಳಕಿನ ಹರಡುವಿಕೆ (Dispersion), ವಕ್ರೀಭವನ (Refraction), ಧೃವೀಕರಣ (Polarisation) ಮುಂತಾದ ಗುಣಗಳು ಎಡೆಮಾಡಿಕೊಟ್ಟವು.

ಬೆಳಕು ವಿದ್ಯುತ್ಕಾಂತೀಯ ಅಲೆಗಳಾದರೆ ಅದು ಹೊತ್ತು ತರುವ ಶಕ್ತಿ ಅದರ ಪ್ರಖರತೆಗೆ (Intensity) ಅನುಗುಣವಾಗಿರುತ್ತದೆ. ಅಂದರೆ ಪ್ರಖರತೆ ಹೆಚ್ಚಿದ್ದರೆ ಅದು ಹೊತ್ತುತರುವ ಶಕ್ತಿಯೂ ಹೆಚ್ಚಿರುತ್ತದೆ. ಪ್ರಖರತೆ ಕಡಿಮೆಯಾದರೆ ಹೊತ್ತು ತರುವ ಶಕ್ತಿಯೂ ಕಡಿಮೆ ಇರುತ್ತದೆ ಎನ್ನುವುದು ಮ್ಯಾಕ್ಸ್‌ವೆಲ್‌ರ ವಾದ.

ಆದರೆ ಲೆನಾರ್ಡ್ ಅವರು ೧೯೦೨ರಲ್ಲಿ ನಡೆಸಿ
ಪ್ರಯೋಗಗಳು ಮ್ಯಾಕ್ಸ್‌ವೆಲ್‌ರ ವಾದಕ್ಕೆ ವ್ಯತಿರಿಕ್ತವಾದ ಫಲಗಳನ
ನೀಡಿದವು. ತಗಡಿನಿಂದ ಬಿಡುಗಡೆಯಾದ ಎಲೆಕ್ಟ್ರಾನುಗಳ ಸಂಖ್ಯೆ ಪತ
ಬೆಳಕಿನ ಪ್ರಖರತೆಗೆ ಅನುಗುಣವಾಗಿದ್ದರೂ; ಬೆಳಕಿನ ತರಂಗಾಂತ
ಹೆಚ್ಚಾಗಿದ್ದರೆ ಅವುಗಳ ಚಲನಶಕ್ತಿ ಕಡಿಮೆಯಾಗಿಯೂ, ಬೆಳಕಿ
ತರಂಗಾಂತರ ಕಡಿಮೆ ಇದ್ದರೆ ಅವುಗಳ ಚಲನಶಕ್ತಿ ಹೆಚ್ಚಾಗಿಯ
ಇರುವುದು ಕಂಡುಬಂದಿತು.

ಜರ್ಮನಿಯ ವಿಜ್ಞಾನಿ ಮ್ಯಾಕ್ಸ್‌ಪ್ಲಾಂಕ್ ೧೯೦೦ರ ಸುಮಾರಿ
ಒಂದು ಸಿದ್ಧಾಂತವನ್ನು ಮಂಡಿಸಿ; ವಿದ್ಯುತ್ಕಾಂತೀಯ ವಿಕಿರಣವು ಶ
ಕಟ್ಟುಗಳಿಂದ (Energy pockets) ಕೂಡಿದೆ. ಈ ಶಕ್ತಿ ಕಟ್ಟುಗಳನ
ಬೆಳಕಿನ ಕ್ವಾಂಟಮ್‌ಗಳು (Light Quantoms) ಅಥ
ಫೋಟಾನ್‌ಗಳು (Photons) ಎಂದು ಕರೆಯುತ್ತಾರೆ. ಫೋಟಾ
ಎನ್ನುವುದು ಶಕ್ತಿಯ ಒಂದು ಪೂರ್ಣ ಕಟ್ಟು. ಅದರಲ್ಲಿ ಭಾ
ಎನ್ನುವುದಿರುವುದಿಲ್ಲ. ಒಂದು ಲೋಹದ ಮೇಲೆ ತೀವ್ರತರವಾ
ಬೆಳಕು ಹರಿದಾಗ ಫೋಟಾನ್‌ಗಳು ಹೀರಲ್ಪಡುತ್ತವೆ ಅಥವ
ಉತ್ಸರ್ಜಿತವಾಗುತ್ತವೆ ಇಲ್ಲವೆ ಆ ಲೋಹದಲ್ಲಿ ಹಾಯ
ಹೋಗುತ್ತವೆ ಎನ್ನುವುದು ಈ ಸಿದ್ಧಾಂತದ ತಿರುಳು. ಆದರೆ ವಿಕಿರ
ಪ್ರಸಾರದ ಬಗ್ಗೆ ಪ್ಲಾಂಕ್ ಏನನ್ನೂ ಹೇಳಿರಲಿಲ್ಲ.

ಆಲ್ಬರ್ಟ್ ಐನ್‌ಸ್ಟೈನ್ ಅವರು ವಿಸರ್ಜನೆ ಮತ
ಹೀರಿಕೆಗಳಲ್ಲಿ; ಶಕ್ತಿಕಟ್ಟುಗಳ ರೂಪದಲ್ಲಿ ವಿಕಿರಣ ಪ್ರಸಾರವಾಗುತ್ತ
ಎಂದು ಪ್ರತಿಪಾದಿಸಿದ್ದರು.

ಲೋಹದಲ್ಲಿ ಕೆಲ ಸ್ವತಂತ್ರ ಎಲೆಕ್ಟ್ರಾನ್‌ಗಳು (Fr
Electrons) ಇರುತ್ತವೆ. ಸಾಮಾನ್ಯವಾಗಿ ಎಲೆಕ್ಟ್ರಾನುಗ
ಪರಮಾಣುವಿನಲ್ಲಿ ಬಂಧಿತವಾಗಿರುತ್ತವೆ. ಒಂದು ವೇಳೆ ಬಂಧನ

ದುರ್ಬಲವಾಗಿದ್ದರೆ, ಎಲೆಕ್ಟ್ರಾನುಗಳು ಒಂದು ಪರಮಾಣುವಿನಿಂದ ಇನ್ನೊಂದಕ್ಕೆ ಸುಲಭವಾಗಿ ಚಲಿಸಬಲ್ಲವು. ಲೋಹಗಳಲ್ಲಿ ಇಂತಹ ಸ್ವತಂತ್ರ ಎಲೆಕ್ಟ್ರಾನುಗಳಿದ್ದು ಅವು ಸುಲಭವಾಗಿ ಚಲಿಸುತ್ತವೆ. ಆದರೆ ಅವು ಲೋಹದಿಂದ ತಪ್ಪಿಸಿಕೊಂಡು ಹೋಗುವಷ್ಟು ಸ್ವತಂತ್ರವಾಗಿರುವುದಿಲ್ಲ. ಲೋಹ ಮತ್ತು ಎಲೆಕ್ಟ್ರಾನುಗಳ ಮಧ್ಯೆ ಒಂದಿಷ್ಟು ಪ್ರಮಾಣದ ಬಂಧಕ ಶಕ್ತಿ ಇರುತ್ತದೆ. ಅದರಲ್ಲಿ ಕೆಲವು ಫೋಟಾನ್‌ಗಳು ಎಲೆಕ್ಟ್ರಾನ್‌ಗಳೊಡನೆ ವರ್ತಿಸುತ್ತವೆ. ಫೋಟಾನ್ ಎಲೆಕ್ಟ್ರಾನ್‌ಗೆ ಢಿಕ್ಕಿ ಹೊಡೆದಾಗ ಎಲೆಕ್ಟ್ರಾನ್ ಫೊಟಾನ್‌ನನ್ನು ಹೀರಿಕೊಳ್ಳುತ್ತದೆ. ಆದುದರಿಂದ ಎಲೆಕ್ಟ್ರಾನಿನ ಶಕ್ತಿ ಹೆಚ್ಚಾಗುತ್ತದೆ. ಎಲೆಕ್ಟ್ರಾನ್ ಲೋಹದೊಡನೆ ಬಂಧಿತವಾದ ಶಕ್ತಿಗಿಂತ ಹೆಚ್ಚಿನ ಶಕ್ತಿಯನ್ನು ಪಡೆದರೆ ಅದು ಲೋಹದಿಂದ ತಪ್ಪಿಸಿಕೊಳ್ಳಬಹುದು. ಹೀಗೆ ದ್ಯುತಿ ಎಲೆಕ್ಟ್ರಾನ್ ವಿಸರ್ಜಿಸಲ್ಪಡುತ್ತದೆ. ದ್ಯುತಿ ಎಲೆಕ್ಟ್ರಾನ್ ವಿಸರ್ಜನೆ ಹೊಂದುವಾಗ ಅದು ಸ್ವಲ್ಪ ಪ್ರಮಾಣದ ಕೆಲಸ ಮಾಡಬೇಕಾಗುತ್ತದೆ. ಅದಕ್ಕಾಗಿ ಒಂದಿಷ್ಟು ಶಕ್ತಿಯ ವ್ಯಯವಾಗುತ್ತದೆ. ಒಂದು ವೇಳೆ ಫೋಟಾನ್‌ನ ಶಕ್ತಿಯು ಎಲೆಕ್ಟ್ರಾನ್‌ನ ಬಂಧಕ ಶಕ್ತಿಗಿಂತ ಕಡಿಮೆಯಿದ್ದರೆ ಎಲೆಕ್ಟ್ರಾನ್ ಫೋಟಾನ್‌ನ್ನು ಹೀರಿಕೊಂಡು ಅದು ಲೋಹದಲ್ಲಿಯೇ ಉಳಿಯುತ್ತದೆ ಎಂದು ಐನ್‌ಸ್ಟೈನ್‌ರು ಪ್ರತಿಪಾದಿಸಿದರು.

ಐನ್‌ಸ್ಟೈನ್‌ರಿಗೆ ಕ್ವಾಂಟಮ್ ಪರಿಕಲ್ಪನೆಯಲ್ಲಿ ಸ್ಥಿರವಾದ ವಿಶ್ವಾಸವಿರಲಿಲ್ಲ. ಆದುದರಿಂದ ಅವರು ಒದಗಿಸಿದ ಈ ವಿವರಣೆ ಕೇವಲ ತಾತ್ಕಾಲಿಕ ಎಂದು ನಂಬಿದ್ದರು. ಆದರೆ ಆನಂತರ ಬೆಳಕಿನ ಅಲೆ - ಕಣ ಉಭಯತ್ವ ಗುಣವನ್ನು ದ್ಯುತಿ ವಿದ್ಯುತ್ ಪರಿಣಾಮ ಎತ್ತಿ ಹಿಡಿಯಿತು.

* * *

'ಅಣು ಆಯಾಮಗಳ ಒಂದು ಹೊಸ ನಿರ್ಧಾರ' ಎನ್ನು ಬ್ರೌನಿಯನ್ ಚಲನೆಗೆ ಸಂಬಂಧಿಸಿದ ಪ್ರಬಂಧಕ್ಕೆ ಆಲ್ಬ ಐನ್‌ಸ್ಟೈನ್‌ರಿಗೆ ಜ್ಯೂರಿಕ್ ವಿಶ್ವವಿದ್ಯಾನಿಲಯದಿಂದ ೧೯೦೫ರ ಡಾಕ್ಟರೇಟ್ ಪದವಿ ದೊರಕಿತು.

ಸ್ಕಾಟ್‌ಲೆಂಡಿನ ಬ್ರೌನ್ ಎನ್ನುವ ಸಸ್ಯ ವಿಜ್ಞಾನಿ ಒ ನೀರಿನಲ್ಲಿ ಕದಡಿದ ಪುಷ್ಪಪರಾಗ ರೇಣುಗಳು ಅಡ್ಡಾದಿಡ್ಡಿಯ ಹರಿದಾಡುವುದನ್ನು ಕಂಡು; ಆ ವಿಸ್ಮಯವನ್ನು ವಿಜ್ಞಾನಿಗಳ ಗಮ ತಂದ. ದ್ರಾವಣದ ಕಣಗಳ ಚಲನೆಯನ್ನು ಬ್ರೌನಿಯನ್ ಚಲನೆ ಎಂ ಕರೆದ.

ಸ್ವೆಡ್‌ಬರ್ಗ್ ಎನ್ನುವ ವಿಜ್ಞಾನಿ ಕಣಗಳ ಚಲನೆಯ ವಿವರವಾಗಿ ಅಭ್ಯಾಸ ಮಾಡಿ; ಪರಾಗರೇಣುಗಳು ಹರಿದಾಡುವುದ ಕಣಗಳ ಬ್ರೌನಿಯನ್ ಚಲನೆಗೆ ನೀರಿನ ಅಣುಗಳು ಅವುಗ ಡಿಕ್ಕಿಹೊಡೆಯುವುದೇ ಕಾರಣ ಎಂದು ತಿಳಿಸಿದ. ಬೋಲ್ಟ್ಜ್‌ಮ ಮತ್ತು ಮ್ಯಾಕ್ಸ್‌ವೆಲ್ ಪ್ರತಿಪಾದಿಸಿದ್ದ ಕಣಚಲನ ಸಿದ್ಧಾಂತವ ಸ್ವೆಡ್‌ಬರ್ಗ್ ತನ್ನ ತೀರ್ಮಾನಕ್ಕೆ ಬಳಸಿಕೊಂಡಿದ್ದರೂ ಸೂ ರೂಪದ ಯಾವ ಸಮೀಕರಣವನ್ನೂ ಆತ ಸೂಚಿಸಲಿಲ್ಲ.

ಸ್ವೆಡ್‌ಬರ್ಗ್‌ನ ವಿವರಣೆಗೆ ಐನ್‌ಸ್ಟೈನರು ಗಣಿತೀ ಸಮೀಕರಣ ನೀಡಿದರು. ದ್ರಾವಣದ ಉಷ್ಣತೆ ಹೆಚ್ಚಿದಂತೆ ಅದರಲ್ಲಿ ಅಣುಗಳ ಚಲನಶಕ್ತಿ ಹೆಚ್ಚುತ್ತದೆ. ಆದರೆ ಎಲ್ಲ ಅಣುಗಳ ಚಲನ ಒಂದೇ ಆಗಿರದೆ ಅದು ಒಂದು ಹಂಚಿಕೆಯನ್ನು ಹೊಂದಿರುತ್ತದೆ ಎಂ ವಿವರಿಸಿದರು. ಅವರು ಸೂಚಿಸಿದ ಸೂತ್ರ ಅಣುಗಳ ಗ ಲೆಖ್ಖಹಾಕಲು ಸುಲಭವಾಯಿತು.

'ಬೆಳಕಿನ ಕಿರಣ ಗುರುತ್ವಾಕರ್ಷಣ ಕ್ಷೇತ್ರದಲ್ಲಿ ಬಾಗುತ್ತ ಎನ್ನುವ ಹೇಳಿಕೆ ವಿಜ್ಞಾನಕ್ಕೆ ಇವರ ಮತ್ತೊಂದು ಕೊಡುಗೆ.

ಣಾಮವನ್ನು ಐನ್‌ಸ್ಟೈನ್‌ರು ೧೯೧೧ರಲ್ಲಿ ಸೂಚಿಸಿದ್ದರೂ ಅದು ಪೂರ್ಣಕವಾದ ಲೆಕ್ಕಾಚಾರವನ್ನು ಅನುಸರಿಸಿರದಿದ್ದ ಪ್ರಯುಕ್ತ ೀಕರಣಗೊಳ್ಳಲು ೧೯೧೯ನೇ ಮಾರ್ಚ್ ೨೯ರಂದು ಏರ್ಪಟ್ಟ ೯ ಸೂರ್ಯಗ್ರಹಣದವರೆಗೂ ವಿಜ್ಞಾನಿಗಳು ಬೇಕಾಯಿತು. ಬ್ರಿಟನ್‌ನ ವಿಜ್ಞಾನಿಗಳ ಎರಡು ತಂಡಗಳಲ್ಲಿ ದು ತಂಡ ಉತ್ತರ ಬ್ರೆಜಿಲ್‌ನಲ್ಲಿ ಮತ್ತೊಂದು ತಂಡ ಆಫ್ರಿಕಾದ ಮ ಕರಾವಳಿ ಸಮೀಪವಿರುವ ಪ್ರಿನ್ಸಿಪಿ ದ್ವೀಪದಲ್ಲಿ ಬಿಡಾರ ಹೂಡಿ ಪೂರ್ಣ ಸೂರ್ಯಗ್ರಹಣ ಸಂದರ್ಭದಲ್ಲಿ ಪ್ರಯೋಗಗಳನ್ನು ಸಿದರು. ಪ್ರಿನ್ಸಿಪಿ ದ್ವೀಪದಲ್ಲಿದ್ದ ವಿಜ್ಞಾನಿ ಎಡ್ಡಿಂಗ್‌ಟನ್ ಅವರು ನ ಛಾಯಾಚಿತ್ರಗಳು ಐನ್‌ಸ್ಟೈನ್‌ರ ಹೇಳಿಕೆಯನ್ನು ರ್ಥಿಸಿದ್ದವು.

ಉಷ್ಣವು ವ್ಯತ್ಯಾಸ ಹೊಂದಿದಂತೆ ವಸ್ತುಗಳ ಗ್ರಾಹ್ಯೋಷ್ಣವೂ ್ಯಾಸ ಹೊಂದುತ್ತದೆ ಎನ್ನುವುದನ್ನು ಐನ್‌ಸ್ಟೈನ್‌ರು ೧೯೦೭ರಲ್ಲಿ ಂಕ್ ಅವರ ಕ್ವಾಂಟಂ ಪರಿಕಲ್ಪನೆಯ ಆಧಾರದ ಮೇಲೆ ಭವಿಷ್ಯ ಿದರು. ಇವರ ಭವಿಷ್ಯ ನುಡಿಯನ್ನು ಅನಂತರ ವಾಲ್ತರ್‌ನರ್ನ್‌ಸ್ಟ್ ರು ಪ್ರಯೋಗಗಳ ಮೂಲಕ ಸಿದ್ಧಪಡಿಸಿದರು.

ದ್ರವ್ಯ ಮತ್ತು ವಿಕಿರಣಗಳ ನಡುವಿನ ಪ್ರಕ್ರಿಯೆ ಬಗ್ಗೆ ್‌ಸ್ಟೈನ್‌ರು ಮಂಡಿಸಿದ ತರ್ಕ ಮತ್ತು ವಿವರಣೆ ಮುಂದೆ ಲೇಸರ್ ನ್ಯಮಕ್ಕೆ ಸೈದ್ಧಾಂತಿಕ ನೆಲೆ ಒದಗಿಸಿತು.

ಭೂಮಿಗೆ ಎಲ್ಲಾ ವಸ್ತುಗಳನ್ನೂ ತನ್ನತ್ತ ಆಕರ್ಷಿಸುವ ವೊಂದಿದೆ. ಇದನ್ನು ಭೂಮಿಯ ಗುರುತ್ವಾಕರ್ಷಣ ಬಲವೆಂದು ಯುತ್ತಾರೆ. ಒಂದು ನಿಶ್ಚಲ ಸ್ಥಿತಿಯಲ್ಲಿರುವ ವಸ್ತು ಚಲನೆಗೆ ವುದನ್ನು ಅಥವ ಚಲನೆಯಲ್ಲಿರುವ ವಸ್ತು ನಿಶ್ಚಲ ಸ್ಥಿತಿಗೆ ವುದನ್ನು ವಿರೋಧಿಸುವ ಬಲವೊಂದಿದೆ. ಅದನ್ನೇ ಜಡತ್ವ ಎಂದು

ಕರೆಯುವುದು. ಆಲ್ಬರ್ಟ್ ಐನ್‌ಸ್ಟೈನ್‌ರು ಗುರುತ್ವಾಕರ್ಷಣೆ ಹಾಗು ಜಡತ್ವಗಳು ಬೇರೆ ಬೇರೆಯಲ್ಲವೆಂದು ತೋರಿಸಿಕೊಟ್ಟರು. ಇದ ಸಾಮಾನ್ಯ ಸಾಪೇಕ್ಷ ಸಿದ್ಧಾಂತ ಎಂದು ಪ್ರಖ್ಯಾತವಾಯಿತು.

ಪ್ರಪಂಚದ ವಿಜ್ಞಾನ ಕ್ಷೇತ್ರಕ್ಕೆ ಐನ್‌ಸ್ಟೈನ್‌ರ ಕೊಡುಗೆಗಳ ಒಂದೇ ಎರಡೇ? ಅವರ ಬಾಯಿಂದ ಬರುತ್ತಿದ್ದ ಪ್ರತಿಯೊಂದ ಮಾತೂ ಮತ್ತೊಂದು ಆವಿಷ್ಕಾರಕ್ಕೆ ಸೂಚಿ ಎನ್ನುವಷ್ಟರ ಮಟ್ಟ ಜನಜನಿತವಾಗಿ ಕೀರ್ತಿ ಶಿಖರವೇರಿ ನಿಂತಿದ್ದರು.

ಸಮಾನತೆ ಸತ್ವದ ಮಾನವೀಯತೆ

ವ್ಯಕ್ತಿಯೊಬ್ಬ ಮತ್ತೊಬ್ಬನ ವ್ಯಕ್ತಿತ್ವದ ಬಗ್ಗೆ ವ್ಯಕ್ತಪಡಿಸು ಅಭಿಪ್ರಾಯ; ಅದು ಅವನ ವ್ಯಕ್ತಿತ್ವವನ್ನೇ ಅಪ್ರಜ್ಞಾಪೂರಕವಾ ವ್ಯಕ್ತಪಡಿಸಿದಂತಾಗುತ್ತದೆ. ಈ ಅಭಿಪ್ರಾಯ ಆಲ್ಬರ್ಟ್ ಐನ್‌ಸ್ಟೈನ್ ವಿಷಯದಲ್ಲಿಯೂ ಅಷ್ಟೇ ಸತ್ಯವಾಗಿ ಕಾಣುತ್ತದೆ.

ಅಲ್ಬರ್ಟ್ ಐನ್‌ಸ್ಟೈನ್‌ರು ೧೯೩೯ ಅಕ್ಟೋಬರ್ ೨ ರಂ ಮಹಾತ್ಮಾಗಾಂಧಿಯವರನ್ನು ಕುರಿತು "ಈತ ತನ್ನ ಜನತೆ ನಾಯಕ. ಯಾವುದೇ ಬಾಹ್ಯ ಬಲದ ಬೆಂಬಲವಿರದಾತ; ರಾಜಕಾರಣಿಯ ಯಶಸ್ಸು ಚಮತ್ಕಾರವನ್ನಾಗಲಿ, ತಾಂತ್ರಿ ಕೌಶಲಗಳಲ್ಲಿ ಗಳಿಸಿದ ಪ್ರಾವೀಣ್ಯವನ್ನಾಗಲೀ ಅವಲಂಬಿಸಿ ಬದಲು, ಮನವೊಲಿಸಬಲ್ಲ ಸ್ವಂತವ್ಯಕ್ತಿತ್ವದ ಸಾಮರ್ಥ್ಯವನ್ನು ಮಾ ಅವಲಂಬಿಸಿದೆ; ಬಲಪ್ರಯೋಗವನ್ನು ಸದಾ ತಿರಸ್ಕರಿಸಿದ ಯಶ ಹೋರಾಟಗಾರ; ವಿವೇಕ ವಿನೀತಗಳಿಂದ ಕೂಡಿದ ವ್ಯಕ್ತಿ; ಧೃ ನಿರ್ಧಾರ ಮತ್ತು ಅಚಲ ಸ್ಥೈರ್ಯದಿಂದ ಸಜ್ಜುಗೊಂಡು ಸಕ ತ್ರಾಣವನ್ನೂ ತನ್ನ ಜನರ ಉದ್ಧಾರ ಹಾಗೂ ಸ್ಥಿತಿಗತಿ ಸುಧಾರಣೆಗಾಗಿ ಅರ್ಪಿಸಿದಾತ; ಯುರೋಪಿನ ಅಮಾನ

ರ್ಯವನ್ನು ಸರಳ ವ್ಯಕ್ತಿಯ ಗಾಂಭೀರ್ಯದಿಂದ ಎದುರಿಸಿ ಎಲ್ಲ ಸಂದರ್ಭಗಳಲ್ಲಿಯೂ ಶ್ರೇಷ್ಠತೆಯಿಂದ ಕಂಗೊಳಿಸಿದಾತ.

ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ''. ಎಂದು ಪ್ರಾಯ ವ್ಯಕ್ತಪಡಿಸಿದ್ದಾರೆ.

ಆಲ್ಬರ್ಟ್ ಐನ್‌ಸ್ಟೀನ್‌ರು ವಿಜ್ಞಾನದಲ್ಲಿನ ತಮ್ಮ ಷ್ಕಾರಗಳಿಂದ ತಮ್ಮ ವಿಚಾರಗಳಿಂದ ಹಾಗೂ ತಮ್ಮ ವಳಿಕೆಗಳಿಂದ ಪ್ರಪಂಚದಲ್ಲಿ ಪ್ರಖ್ಯಾತಿಯ ಉತ್ತುಂಗದಲ್ಲಿದ್ದರೂ ಧೀಜೀವರಲ್ಲಿನ ಒಳ್ಳೆಯತನವನ್ನು ಎತ್ತಿಹಿಡಿದು ಅಭಿಪ್ರಾಯ ಪಡಿಸಿದ್ದು ಅವರಲ್ಲಿನ ಮಾನವ ಪ್ರೀತಿ ಮತ್ತು ಸಮಾನತೆ. ಾನತೆಯನ್ನು ಒಪ್ಪದ ಮಾನವೀಯತೆ ಬರೀ ಡಂಬಾಚಾರದ್ದು ಮ ತಿಳಿಯಬೇಕಾಗುತ್ತದೆ.

ಸಮಾನತೆಯ ಮೂಲಕ ಮಾನವೀಯತೆಯನ್ನು ಒಪ್ಪಿದ್ದ ್‌ಸ್ಟೈನ್‌ರಿಗೆ ಇದ್ದ ಸಮಾಜವಾದದ ಕಲ್ಪನೆಯಾದರೂ ಎಂಥಾದ್ದು ್ನವುದನ್ನು ೧೯೪೯ ರ ಮೇನಲ್ಲಿ ಪ್ರಕಟವಾದ ಮಂತ್ಲಿ ರಿವ್ಯೂನ ನಮ ಸಂಚಿಕೆಗೆ ಅವರು ಬರೆದ 'ಏಕೆ ಸಮಾಜವಾದ?' ಎನ್ನುವ ಖನ ಪ್ರತಿಬಿಂಬಿಸುತ್ತದೆ.

ಸಮಾಜದ ಪೀಡೆಗಳಾದ 'ಶೋಷಣೆ' ಹಾಗೂ ಾತ್ಕಾರ'ಗಳ ವಿರುದ್ಧ ಪ್ರತಿಭಟಿಸಿದ್ದರಿಂದ ಅಮೆರಿಕನ್ನರು ್‌ಸ್ಟೈನ್‌ರನ್ನು ಕಮ್ಯುನಿಸ್ಟರು ಎಂದು ಕರೆದರು. ಸ್ವಯಂ ನವತಾವಾದಿಯಾಗಿರುವ ಯಾವನೇ ಒಬ್ಬ ವ್ಯಕ್ತಿ ಕಮ್ಯೂನಿಸಂ ದ್ಧಾಂತಕ್ಕೆ ಅಥವ ಸಮಾಜವಾದಕ್ಕೆ ಹತ್ತಿರವಾಗಿರಲು ಸಾಧ್ಯವಿದೆ. ಗಿರುವಾಗ ತನ್ನ ಸ್ವಾರ್ಥವನ್ನು ಕಳೆದುಕೊಂಡು ಸರ್ವರ

ಏಳಿಗೆಯನ್ನು ಬಯಸಿದ ಐನ್‌ಸ್ಟೈನ್‌ರನ್ನು ಕಮ್ಯುನಿಸ್ಟರು ಎಂ
ಪರಿಗಣಿಸಿದರೆ ತಪ್ಪೇನು ಆಗಲಾರದು.

ಆಲ್ಬರ್ಟ್ ಐನ್‌ಸ್ಟೈನ್‌ರು ಬರೆದ 'ಏಕೆ ಸಮಾಜವಾದ
ಎನ್ನುವ ಲೇಖನದಲ್ಲಿ "ಆರ್ಥಿಕ ಮತ್ತು ಸಾಮಾಜಿಕ ವಿವಾದಾಂಶ
ತಜ್ಞನಲ್ಲದವನಿಗೆ ಸಮಾಜವಾದದ ವಿಷಯದಲ್ಲಿ ತ
ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸರಿಯಾದ ಕ್ರಮವೆ? ಅನೆ
ಕಾರಣಗಳಿಗಾಗಿ ನಾನು ಇದು ಸರಿಯಾದುದು ಎಂದು ನಂಬುತ್ತೇನೆ.

ಈ ಪ್ರಶ್ನೆಯನ್ನು ಮೊದಲಿಗೆ ವೈಜ್ಞಾನಿಕ ತಿಳಿವಳಿಕೆ
ದೃಷ್ಟಿಯಿಂದ ವಿವೇಚಿಸೋಣ. ಖಗೋಳ-ವಿಜ್ಞಾ
ಮತ್ತು ಅರ್ಥಶಾಸ್ತ್ರ ಇವುಗಳ ನಡುವೆ ಸ್ವಾಭಾವಿಕ ಕ್ರಮಾನುಸರ
ವ್ಯತ್ಯಾಸಗಳು ಇಲ್ಲದೆ ಇರುವಂತೆ ಕಾಣಬಹುದು. ಎರಡು
ಕ್ಷೇತ್ರಗಳಲ್ಲಿ ದುಡಿವವರು ಒಂದು ಪರಿವ್ಯಕ್ತಿತ ಘಟನೆಗಳ ನಡುವಿ
ಸಂಬಂಧಗಳನ್ನು, ಎಷ್ಟು ಸಾಧ್ಯವೊ ಅಷ್ಟು ಸ್ಪಷ್ಟವಾಗಿ ತಿಳಿದುಕೊಳ್ಳ
ಅನುಕೂಲವಾಗುವಂತೆ ಸಾಮಾನ್ಯ ಒಪ್ಪಿಗೆ ಪಡೆಯು
ನಿಯಮಗಳನ್ನು ಶೋಧಿಸಲು ಪ್ರಯತ್ನಪಡುತ್ತಾರೆ. ಆದ
ವಾಸ್ತವವಾಗಿ ಅಂಥಾ ಕ್ರಮಾನುಸರಣಾ ವ್ಯತ್ಯಾಸಗಳು ಇದ್ದೇ ಇ
ಅರ್ಥಶಾಸ್ತ್ರ ಹಾಗೂ ವಿಜ್ಞಾನ ಕ್ಷೇತ್ರಗಳಲ್ಲಿ ಸಾಮಾನ್ಯ ನಿಯಮ
ಸಂಶೋಧನೆ, ಬೇರೆಬೇರೆಯಾಗಿ ಬೆಲೆಕಟ್ಟಲು ಸಾಧ್ಯವಾಗದಂಥ ಅನೆ
ಅಂಶಗಳಿಂದ ಅವಲೋಕಿತ ಆರ್ಥಿಕ ಘಟನೆಗಳು ಪದೇಪ
ಪ್ರಭಾವಿತವಾಗುವುದರಿಂದ ಕಷ್ಟವಾಗಿದೆ. ಇದರ ಜೊತೆಗೆ ನಾಗರಿ
ಯುಗದ ಆರಂಭದಿಂದಲೂ ಸಂಚಯವಾಗಿರುವ ಅನುಭವ, ಚೆನ್ನಾ
ತಿಳಿದಿರುವಂತೆ, ಆರ್ಥಿಕ ಸ್ವಭಾವವಿಲ್ಲದ ಕಾರಣಗಳಿಂ
ಪ್ರಭಾವಿತವಾಗಿದೆ ಮತ್ತು ಮಿತಿಗೊಳಪಟ್ಟಿದೆ. ಉದಾಹರಣೆ
ಚರಿತ್ರೆಯಲ್ಲಿ ಕಂಡುಬರುವ ಅನೇಕ ಪ್ರಬಲ ರಾಷ್ಟ್ರಗಳ ಅಸ್ತಿತ್ವ
ಜನಾಂಗಳು ಸಾಧಿಸಿದ ಆಕ್ರಮಣಗಳೇ ಕಾರಣವಾಗಿದ್ದವು. ಗೆದ್ದ ವ

ನ್ಯಾಯ ಸಮ್ಮತವಾಗಿ ಹಾಗೂ ಆರ್ಥಿಕವಾಗಿ, ಸೋತವರ ದೇಶದಲ್ಲಿ ವಿಶೇಷ ಸವಲತ್ತುಗಳನ್ನು ಪಡೆದು ನೆಲೆಗೊಂಡರು. ಅವರು ಭೂ ಒಡೆತನದ ಸ್ವಾಮ್ಯತ್ವವನ್ನು ಹೊಂದಿ ಅವರ ವರ್ಗದಿಂದಲೇ ಆಯ್ದ ಪುರೋಹಿತರನ್ನು ನಿಯಮಿಸಿದರು. ಪುರೋಹಿತರು ವಿದ್ಯಾಸಂಸ್ಥೆಗಳ ಮೇಲೆ ಹತೋಟಿ ಇಟ್ಟುಕೊಂಡಿದ್ದರಿಂದ, ಸಮಾಜದ ವರ್ಗವಿಭಜನೆಯನ್ನು ಶಾಶ್ವತ ವ್ಯವಸ್ಥೆಯಾಗಿ ಬೆಳೆಸಿದರು ಮತ್ತು ಜನರು, ಅವರಿಗೆ ಅರಿವಿಲ್ಲದಂತೆಯೆ ಸಾಮಾಜಿಕ ನಡುವಳಿಕೆಯಲ್ಲಿ ಅನುಸರಿಸುವಂಥ ಮೌಲ್ಯಗಳನ್ನು ಸೃಷ್ಟಿಸಿದರು.

ಹಾಗೆ ಹೇಳಬೇಕೆಂದರೆ, ಐತಿಹಾಸಿಕ ಸಂಪ್ರದಾಯ ನಿನ್ನೆಯದೆ; ನಿಜವಾಗಿಯೂ ನಾವು ಎಲ್ಲಿಯೂ ಥಾರ್‌ಸ್ಟೀನ್ ವೆಬ್ಲನ್ ಹೆಸರಿಸಿದ ಮಾನವನ ಬೆಳವಣಿಗೆಯ "ದರೋಡೆ ಅವಸ್ಥೆಯನ್ನು (Predatory Phase) ಮೀರಿ ಮುಂದೆ ಹೋಗಿಯೇ ಇಲ್ಲ. ಅವಲೋಕನೆಗೆ ಸಿಕ್ಕುವ ಆರ್ಥಿಕ ವಾಸ್ತವಾಂಶಗಳು ಆ ಅವಸ್ಥೆಗೆ ಸೇರಿದವು ಮತ್ತು ಅವುಗಳಿಂದ ನಾವು ವ್ಯುತ್ಪತ್ತಿ ಮಾಡುವ ನಿಯಮಗಳು ಬೇರೆ ಅವಸ್ಥೆಗೆ ಅನ್ವಯವಾಗದಂಥವು ಸಮಾಜವಾದದ ನಿಜವಾದ ಗುರಿ ನಿಖರವಾಗಿ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ದರೋಡೆ ಅವಸ್ಥೆಯನ್ನು ಮೀರಿ ಮಾನವನ ಬೆಳವಣಿಗೆಯನ್ನು ಮುಂದುವರಿಸುವುದೆ ಆಗಿರುವುದರಿಂದ ಆರ್ಥಿಕ ವಿಜ್ಞಾನ ಈಗಿರುವ ಸ್ಥಿತಿಯಲ್ಲಿ ಸಮಾಜವಾದದ ಅಡಿಪಾಯದ ಮೇಲೆ ನಿರ್ಮಾಣವಾಗಬೇಕಾದ ಮುಂದಿನ ಸಮಾಜದ ಮೇಲೆ ಯಾವುದೇ ಬೆಳಕನ್ನು ಚೆಲ್ಲಲಾರದು. ಎರಡನೆಯದು, ಸಮಾಜವಾದದ ಗುರಿ ಸಾಮಾಜಿಕ - ನೈತಿಕ ಬೆಲೆಯ ಕಡೆ ಇದೆ. ಆದರೆ ವಿಜ್ಞಾನ ಗುರಿಗಳನ್ನು ಸೃಷ್ಟಿಸುವುದಿಲ್ಲ ಮತ್ತು ಅವುಗಳನ್ನು ಮನುಷ್ಯರಲ್ಲಿ ತುಂಬುವುದೂ ಇಲ್ಲ; ವಿಜ್ಞಾನ ಹೆಚ್ಚೆಂದರೆ, ಕೆಲವು ಗುರಿಗಳನ್ನು ಮುಟ್ಟಲು ಉಪಯುಕ್ತವಾದ ಸಾಧನಗಳನ್ನು ಒದಗಿಸುತ್ತದೆ. ಗುರಿಗಳನ್ನು ಗ್ರಹಿಸುವವರು ಉದಾತ್ತ

ನೈತಿಕ ಆದರ್ಶಗಳುಳ್ಳ ಮಹಾನ್‌ವ್ಯಕ್ತಿಗಳು. ಈ ಗುರಿಗಳು ಮೃತಜಾತವಾಗಿರದೆ ಚೈತನ್ಯಪೂರ್ಣವೂ ಕಸುವುಳ್ಳವೂ ಆಗಿದ್ದರೆ ಅರೆಪ್ರಜ್ಞೆಯಿಂದ ಸಾಮಾಜಿಕ ವಿಕಾಸವನ್ನು ಸಾಧಿಸುವ ಬಹುಜನರಿಗೆ ಸ್ವೀಕೃತವಾಗುತ್ತವೆ. ಈ ಕಾರಣಗಳಿಂದ ಮಾನವನ ಸಮಸ್ಯೆಗಳನ್ನು ಕುರಿತಾದ ಪ್ರಶ್ನೆಗಳಿರುವಾಗ ನಾವು ವಿಜ್ಞಾನ ಮತ್ತು ವೈಜ್ಞಾನಿಕ ವಿಧಾನಗಳಿಗೆ ಅತಿಯಾದ ಬೆಲೆಕೊಡದಂತೆ ಜಾಗರೂಕರಾಗಿರಲೇಬೇಕು; ಸಾಮಾಜಿಕ ವ್ಯವಸ್ಥೆಯನ್ನು ಬಾಧಿಸುವ ಪ್ರಶ್ನೆಗಳನ್ನು ಕುರಿತಾಗಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ತಜ್ಞರಿಗೆ ಮಾತ್ರ ಹಕ್ಕಿದೆ ಎಂದು ನಾವು ಊಹಿಸಿಕೊಳ್ಳಬಾರದು.

ಮಾನವ ಸಮಾಜ ಒಂದು ಬಿಕ್ಕಟ್ಟಿನ ಸಮಯದ ಮೂಲಕ ಹಾಯುತ್ತಿದೆ ಎಂದೂ, ಅದರ ಸ್ಥಿರತೆ ತೀವ್ರವಾಗಿ ಛಿದ್ರಗೊಂಡಿದೆ ಎಂದೂ ಅಸಂಖ್ಯಾತ ಧ್ವನಿಗಳು ಕೆಲಕಾಲದಿಂದ ಪ್ರತಿಪಾದಿಸುತ್ತಿವೆ. ವ್ಯಕ್ತಿಗಳು ಅವರ ಗುಂಪುಗಳ ವಿಚಾರವಾಗಿ ಅವು ಚಿಕ್ಕವಿರಲಿ ಅಥವ ದೊಡ್ಡವಿರಲಿ, ಅನಾದರ ತೋರಿಸುವುದು ಅದಕ್ಕಿಂತ ಮುಂದೆ ಹೋಗಿ ಅವುಗಳಿಗೆ ಪ್ರತಿಕೂಲವಾಗಿ ವರ್ತಿಸುವುದು ಇಂಥ ಪರಿಸ್ಥಿತಿಯ ಲಕ್ಷಣ. ನಾನು ಹೇಳುವುದು ಏನೆಂಬುದನ್ನು ಸರಿಯಾಗಿ ತಿಳಿಸಲು ನನ್ನ ವೈಯಕ್ತಿಕ ಅನುಭವವನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ಒಳ್ಳೆಯ ಬುದ್ಧಿವಂತ ಹಾಗೂ ಸದಭಿಪ್ರಾಯವುಳ್ಳ ಒಬ್ಬ ಮನುಷ್ಯನೊಂದಿಗೆ ಇನ್ನೊಂದು ಯುದ್ಧದ ಭೀತಿಯನ್ನು ಕುರಿತು ನಾನು ಇತ್ತೀಚೆಗೆ ಚರ್ಚಿಸಿದೆ. ಇನ್ನೊಂದು ಯುದ್ಧ ನಡೆದರೆ ಅದು ಮಾನವ ಕುಲದ ಅಸ್ತಿತ್ವಕ್ಕೆ ಮಾರಕವೆನಿಸುತ್ತದೆ ಎಂಬುದು ನನ್ನ ಅಭಿಪ್ರಾಯ. ಆದುದರಿಂದ ಅತಿ ರಾಷ್ಟ್ರೀಯ ಸಂಸ್ಥೆಯೊಂದು ಅಂಥ ವಿಪತ್ತಿನಿಂದ ಜಗತ್ತನ್ನು ಪಾರುಮಾಡಬಲ್ಲುದು ಎಂದು ಹೇಳಿದೆ. ಆಗ ಆ ವ್ಯಕ್ತಿ ತುಂಬ ಶಾಂತಚಿತ್ತನಾಗಿಯೆ, "ನೀವು ಮಾನವ ಸಂತತಿ ಅಳಿಸಿಹೋಗುವುದಕ್ಕೆ

ಇಷ್ಟೇಕೆ ವಿರೋಧವಾಗಿದ್ದೀರಿ?'' ಎಂದು ಕೇಳಿದ. ನನಗೆ ಚೆನ್ನಾಗಿ ಗೊತ್ತು, ಕೇವಲ ಒಂದು ಶತಮಾನದ ಹಿಂದೆ ಯಾರೂ ಕೂಡ ಇಷ್ಟು ಹಗುರವಾದ ಇಂಥ ಮಾತನಾಡುತ್ತಿರಲಿಲ್ಲ. ಆಂತರಿಕ ಸಮತೋಲನವನ್ನು ಪಡೆಯಲು ವ್ಯರ್ಥವಾಗಿ ಶ್ರಮಿಸಿ, ಜಯದ ವಿಶ್ವಾಸವನ್ನು ಕಳೆದುಕೊಂಡಿರುವ ಮನುಷ್ಯ ಆಡುವಂಥಾ ಮಾತಿದು; ಇಂದಿನ ದಿನಗಳಲ್ಲಿ ಅನೇಕಮಂದಿ ಅನುಭವಿಸುತ್ತಿರುವ ನೋವಿನ ಒಂಟಿತನ ಹಾಗೂ ಬೇರ್ಪಡಿಕೆಯ ಭಾವ ಇದು. ಇದಕ್ಕೆ ಏನು ಕಾರಣ? ಇದರಿಂದ ಪಾರಾಗುವ ದಾರಿ ಇದೆಯೆ? ಇಂಥ ಪ್ರಶ್ನೆಗಳನ್ನು ಕೇಳುವುದು ಸುಲಭ. ಆದರೆ ಅವುಗಳಿಗೆ ಸ್ವಲ್ಪವಾದರೂ ಭರವಸೆಯಿಂದ ಉತ್ತರ ಹೇಳುವುದು ಕಷ್ಟ. ನಮ್ಮ ಭಾವನೆಗಳು ಮತ್ತು ಹೋರಾಟಗಳು ಪದೇ ಪದೇ ಒಂದಕ್ಕೊಂದು ವಿರೋಧವಾಗಿರುತ್ತವೆ, ಮಸುಕಾಗಿರುತ್ತವೆ. ಅವುಗಳನ್ನು ಸುಲಭ ಮತ್ತು ಸರಳಸೂತ್ರಗಳಲ್ಲಿ ಅಭಿವ್ಯಕ್ತಿಸುವುದಕ್ಕೆ ಆಗುವುದಿಲ್ಲ. ಈ ಅರಿವು ನನಗಿದ್ದರೂ ನನ್ನ ಕೈಲಿ ಎಷ್ಟು ಸಾಧ್ಯವೊ ಅಷ್ಟು ಪ್ರಯತ್ನಪಡುತ್ತೇನೆ.

ತನ್ನ ವ್ಯಕ್ತಿಗತ ಅಭಿಲಾಷೆಗಳನ್ನು ತೃಪ್ತಿಪಡಿಸಲು ಮತ್ತು ಅವನ ಅಂತರ್ಗತ ಶಕ್ತಿಗಳನ್ನು ಬೆಳೆಸಿಕೊಳ್ಳಲು ಮನುಷ್ಯ ತನ್ನ ವೈಯುಕ್ತಿಕ ಮತ್ತು ಅವನಿಗೆ ತೀರ ಹತ್ತಿರವಾದವರ ಅಸ್ತಿತ್ವವನ್ನು ಉಳಿಸಲು ಪ್ರಯತ್ನಿಸುತ್ತಾನೆ. ಸಾಂಘಿಕ ವ್ಯಕ್ತಿಯಾಗಿ ಅವನು ತನ್ನ ಅನುಚರರ ಪ್ರೇಮವನ್ನೂ, ಮಾನ್ಯತೆಯನ್ನು ಗಳಿಸಲು ಶ್ರಮಿಸುತ್ತಾನೆ, ಅವರ ಕಷ್ಟ ಸುಖದಲ್ಲಿ ಭಾಗಿಯಾಗಿ ಜೀವನಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನ ಪಡುತ್ತಾನೆ. ವೈವಿಧ್ಯಮಯ ಹಾಗೂ ಪರಸ್ಪರ ವಿರೋಧವಾಗಿರುವ ಹೋರಾಟಗಳೇ ಮನುಷ್ಯನ ವಿಶೇಷ ಸ್ವಭಾವಕ್ಕೆ ಕಾರಣ. ಇವುಗಳ ವಿಶಿಷ್ಟ ಸಂಯೋಗವೆ ಎಷ್ಟರಮಟ್ಟಿಗೆ ಒಬ್ಬ ವ್ಯಕ್ತಿ ತನ್ನ ಅಂತರಿಕ ಸಮತೋಲನವನ್ನು ಸಾಧಿಸುತ್ತಾನೆ ಮತ್ತು ಸಮಾಜದ

ಬೆಳವಣಿಗೆಗೆ ಕಾರಣನಾಗುತ್ತಾನೆ ಎಂಬುದನ್ನು ನಿರ್ಧರಿಸುವುದು. ಈ ಎರಡು ಪ್ರವೃತ್ತಿಗಳ ಸಾಪೇಕ್ಷ ಸಾಮರ್ಥ್ಯ ಮುಖ್ಯವಾಗಿ ಅನುವಂಶೀಯತೆಯಿಂದ ನಿರ್ಧಾರವಾಗಬಹುದು. ಆದರೆ ಅಂತಿಮವಾಗಿ ಪ್ರಕಟವಾಗುವ ವ್ಯಕ್ತಿತ್ವ ಮನುಷ್ಯ ಬೆಳೆಯುವಾಗ ಅವನ ಸುತ್ತ ಇದ್ದ ಪರಿಸರದಿಂದ ರೂಪುಗೊಳ್ಳುತ್ತದೆ; ಅವನು ಬೆಳೆಯುವ ಸಮಾಜದ ರಚನೆ, ಆ ಸಮಾಜ ಹಮ್ಮಿಕೊಂಡು ಬಂದಿರುವ ಸಂಪ್ರದಾಯ ಮತ್ತು ಅದು ಕೆಲವು ಬಗೆಯ ನಡವಳಿಕೆಗಳನ್ನು ಬೆಲೆ ಕಟ್ಟುವ ರೀತಿ, ಇವೆಲ್ಲ ವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತದೆ. ಒಬ್ಬ ಮನುಷ್ಯನಿಗೆ "ಸಮಾಜ" ಎಂಬ ಅಮೂರ್ತ ಪರಿಕಲ್ಪನೆಯಿಂದ ಒದಗುವ ಅರ್ಥ ಅವನ ಸಮಕಾಲೀನರು ಮತ್ತು ಹಿಂದಿನ ಎಲ್ಲ ತಲೆಮಾರಿನವರೊಂದಿಗೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಸಂಬಂಧಗಳ ತಿಳಿವು ಆಗಿರುತ್ತದೆ. ವ್ಯಕ್ತಿ ಸ್ವತಂತ್ರವಾಗಿ ಯೋಚಿಸಬಲ್ಲ, ಅನುಭವಿಸಬಲ್ಲ ಹಾಗೂ ಹೋರಾಡಬಲ್ಲ. ಆದರೆ ಅವನು ಭೌತಿಕ ಬೌದ್ಧಿಕ ಹಾಗೂ ಭಾವನಾತ್ಮಕ ಬದುಕಿನಲ್ಲಿ ಸಮಾಜದ ಮೇಲೆ ಅಷ್ಟೊಂದು ಅವಲಂಬಿಸಿರುವುದರಿಂದ ಅವನನ್ನು ಸಮಾಜದ ಚೌಕಟ್ಟಿನಿಂದ ಹೊರಗೆ ನಿಲ್ಲಿಸಲು, ಅರ್ಥಮಾಡಿಕೊಳ್ಳಲು ಆಗುವುದ ಇಲ್ಲ. ಮನುಷ್ಯನಿಗೆ ಆಹಾರ, ಬಟ್ಟೆ, ಮನೆ, ಕೆಲಸಮಾಡಲ ಉಪಕರಣ , ಭಾಷೆ, ಆಲೋಚನಾಕ್ರಮಗಳು, ಹೀಗೆ ಎಲ್ಲವನ್ನೂ ಒದಗಿಸುವುದು ಸಮಾಜ : ಅವನ ಬದುಕು ಸಾಧ್ಯವಾಗುವಂ ಮಾಡಿರುವುದು, ಈ ಚಿಕ್ಕಪದ "ಸಮಾಜ" ಎಂಬುದರ ಹಿಂ ಅಡಗಿರುವುದು ಇಂದಿನ ಮತ್ತು ಹಿಂದಿನ ಅಸಂಖ್ಯಾತ ಜನರ ದುಡಿಮೆ ಮತ್ತು ಸಾಧನೆ.

ವ್ಯಕ್ತಿಯು ಸಮಾಜವನ್ನು ಅವಲಂಬಿಸಿರುವುದರಿಂದ, ಒಂದ ನೈಸರ್ಗಿಕ ವಸ್ತುಸ್ಥಿತಿ ಸಮಾಜದೊಂದಿಗಿನ ಅವನ ಸಂಬಂಧವನ್ನು ಅಳಿಸಿಹಾಕುವುದು, ಇರುವೆಗಳ ಹಾಗೂ ಜೇನು ನೊಣಗ

ಚಾರದಲ್ಲಿ ಹೇಗೆ ಸಾಧ್ಯವಿಲ್ಲವೊ ಹಾಗೆಯೇ ಸಾಧ್ಯವಿಲ್ಲ. ಇರುವೆಗಳು ಮತ್ತು ಜೇನುನೊಣಗಳ ಜೀವನ ಪ್ರಕ್ರಿಯೆ ಅತಿ ಸೂಕ್ಷ್ಮ ವರಗಳವರೆಗೆ ಅನುವಂಶಿಕ ಪ್ರವೃತ್ತಿಯಿಂದ ಯಂತ್ರಿತಗೊಳ್ಳುತ್ತದೆ. ಆದರೆ ಸಾಮಾಜಿಕ ಮಾದರಿ ಹಾಗೂ ಮನುಷ್ಯರ ನಡುವಿನ ಸಂಬಂಧಗಳು ವ್ಯತ್ಯಾಸವಾಗುವಂಥವು ಮತ್ತು ದಲಾವಣೆಗೆ ಗುರಿಯಾಗುವಂಥವು. ಸ್ಮರಣಶಕ್ತಿ, ಹೊಸ ಂಯೋಗಗಳನ್ನು ರೂಢಿಸುವ ಸಾಮರ್ಥ್ಯ, ವಾಚಿಕ ಂಪರ್ಕಸಾಧನಶಕ್ತಿ ಇವು ಜೈವಿಕ ಅವಶ್ಯಕತೆಯಿಂದಲೆ ತ್ತಾಯಿಸಲ್ಪಡದಂಥ ಬೆಳವಣಿಗೆಗೆ ಕಾರಣವಾಗಿವೆ. ಅಂಥ ಬೆಳವಣಿಗೆಗಳು ಸಂಪ್ರದಾಯ, ಸಂಘಸಂಸ್ಥೆಗಳು, ಸಾಹಿತ್ಯ ಮತ್ತು ಲೆಗಳಲ್ಲಿ ಪ್ರಕಟವಾಗುತ್ತವೆ. ಇದು ಮನುಷ್ಯ, ಒಂದು ರೀತಿಯಲ್ಲಿ ವನ ನಡತೆಯಿಂದ ಬದುಕನ್ನು ಪ್ರಭಾವಿಸಬಹುದು ಎಂಬುದನ್ನು ಳಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಬುದ್ಧಿಪೂರ್ವಕವಾದ ಆಲೋಚನೆ ಮತ್ತು ಅಪೇಕ್ಷೆ ಒಂದು ಪಾತ್ರ ನಿರ್ವಹಿಸಬಹುದು.

ಹುಟ್ಟಿದಾಗ ಮನುಷ್ಯ ಅನುವಂಶೀಯತೆಯಿಂದ,ಮನುಷ್ಯ ಜಾತಿಯ ಸ್ವಾಭಾವಿಕ ಒತ್ತಡಗಳೊಂದಿಗೆ, ಒಂದು ಜೈವಿಕ ಮನಃಪ್ರಕೃತಿಯನ್ನು ಪಡೆಯುತ್ತಾನೆ ; ಇದನ್ನು ನಾವು ಬದಲಿಸಲಾಗದುದೂ ಹಾಗೂ ಸ್ಥಾಯಿಯಾದುದು ಎಂದು ಳಿಯಬಹುದು. ಇದರ ಜೊತೆಗೆ ಅವನು ತನ್ನ ಜೀವಿತಕಾಲದಲ್ಲಿ, ಸಮಾಜದಿಂದ ಸಂಪರ್ಕಸಾಧನದ ಮೂಲಕ ಹಾಗೂ ಅನೇಕ ಪ್ರಭಾವಗಳ ಮೂಲಕ, ಒಂದು ಸಾಂಸ್ಕೃತಿಕ ಮನಃಪ್ರಕೃತಿಯನ್ನು ಪಡೆಯುತ್ತಾನೆ. ಈ ಸಾಂಸ್ಕೃತಿಕ ಮನಃಪ್ರಕೃತಿ ಕಾಲಕಳೆದಂತೆ, ಬದಲಾವಣೆ ಹೊಂದುವಂಥದು ಮತ್ತು ಬಹಳಮಟ್ಟಿಗೆ ವ್ಯಕ್ತಿ ಮತ್ತು ಸಮಾಜದ ನಡುವಿನ ಸಂಬಂಧವನ್ನು ನಿರ್ಧರಿಸುತ್ತದೆ. ಆಧುನಿಕ ಮಾನವವಿಜ್ಞಾನ, ಪುರಾತನ ಸಂಸ್ಕೃತಿಗಳ ತುಲನಾತ್ಮಕ

ಸಂಶೋಧನೆಯಿಂದ, ಮನುಷ್ಯನ ನಡತೆ ಅವನು ಇರುವ ಸಮಾಜ
ಪ್ರಭಾವಿ ಸಂಘಸಂಸ್ಥೆಗಳನ್ನು ಮತ್ತು ಚಾಲ್ತಿಯಲ್ಲಿರುವ ಸಾಮಾ
ಮಾದರಿಗಳನ್ನೂ ಅನುಸರಿಸಿ ಬಹಳಷ್ಟು ವ್ಯತ್ಯಾಸ ಆಗಬಹು
ಎಂಬುದನ್ನು ನಮಗೆ ಬೋಧಿಸಿದೆ. ಮನುಷ್ಯನ ಸ್ಥಿತಿಯ
ಸುಧಾರಿಸಲು ಹೋರಾಡುತ್ತಿರುವವರು ತಮ್ಮ ಆಸೆಗೆ ಒ
ನೆಲೆಯನ್ನು ಕಾಣುವುದು ಇಲ್ಲಿಯೆ. ಮನುಷ್ಯರು ಅವರ ಜೈ
ಪ್ರಕೃತಿಯಿಂದ ಒಬ್ಬರನ್ನೊಬ್ಬರು ನಾಶಪಡಿಸಲು ಶಾಪಗ್ರಸ್ಥರೇ
ಆಗಿಲ್ಲ; ಅವರು ತಾವೆ ತಮ್ಮ ಮೇಲೆ ಹೇರಿಕೊಂಡ ಕ್ರೂರ ವಿಧಿ
ಕೃಪೆಯಲ್ಲಿ ಬದುಕಬೇಕಾದುದೇನು ಇಲ್ಲ.

ಮನುಷ್ಯನ ಬದುಕನ್ನು ಎಷ್ಟು ಸಾಧ್ಯವೊ ಅ
ಸಫಲಗೊಳಿಸಲು ನಾವು ಸಮಾಜದ ರಚನೆಯನ್ನು ಮತ್ತು ಅ
ಸಾಂಸ್ಕೃತಿಕ ನಿಲುವನ್ನು ಹೇಗೆ ಬದಲಾಯಿಸಬೇಕು ಎಂದು
ಹಾಕಿಕೊಂಡರೆ ಕೆಲವು ಬದಲಾಯಿಸಲು ಆಗದಂಥ ಸ್ಥಿತಿಗಳು
ಎಂಬುದನ್ನು ಸದಾಕಾಲ ತಿಳಿದಿರಬೇಕು. ಹಿಂದೆ ಪ್ರಸ್ತಾಪಿಸಿದ
ಮನುಷ್ಯನ ಜೈವಿಕ ಪ್ರಕೃತಿ, ಕಾರ್ಯತಃ ಎಲ್ಲ ಉದ್ದೇಶಕ
ಬದಲಾವಣೆಗೆ ಒಗ್ಗುವಂಥದಲ್ಲ. ಇದೂ ಅಲ್ಲದೆ ಕಳೆದ ಕೆ
ಶತಮಾನಗಳ ತಾಂತ್ರಿಕ ಜ್ಞಾನ ಮತ್ತು ಜನಾಂಗ ಸ್ಥಿತಿ
ಬೆಳವಣಿಗೆಗಳು ಅಳಿಸಲಾಗದಂಥ ಕೆಲವು ವಸ್ತುಸ್ಥಿತಿಗಳನ್ನು ಸೃಷ್ಟಿ
ಸಾಪೇಕ್ಷವಾಗಿ ಹೆಚ್ಚು ಜನಸಾಂಧ್ರತೆಯುಳ್ಳ ದೇಶಗಳಲ್ಲಿ, ಬಿ
ಮುಂದುವರೆಯುವ ಅವುಗಳ ಅಸ್ತಿತ್ವಕ್ಕಾಗಿ, ಬೇಕಾಗುವ ವಸ್ತು
ಉತ್ಪಾದನೆಗೆ ಪರಮಾವಧಿ ದುಡಿಮೆ, ವಿಭಜನೆ ಮತ್ತು
ಕೇಂದ್ರೀಕೃತವಾದ ಉತ್ಪಾದನಾ ವ್ಯವಸ್ಥೆ ಇರುವುದು ನಿರಪಾಧಿಕ
ಅವಶ್ಯಕ. ಹಿಂದಕ್ಕೆ ನೋಡಿದರೆ, ಒಬ್ಬ ವ್ಯಕ್ತಿ ಅಥವ ಚಿಕ್ಕ ಗುಂಪು
ಸ್ವಯಂಪರಿಪೂರ್ಣವಾಗಿ ಬದುಕಲು ಅನುಕೂಲವಾಗಿ
ಮನೋಹರವಾದ ಗ್ರಾಮೀಣ ಬದುಕನ್ನು ಕಾಣುವ, ಆ

ಹೋಗಿದೆ. ಈಗಾಗಲೇ ಪ್ರಪಂಚದ ಜನರೆಲ್ಲ ಉತ್ಪಾದನೆ ಮತ್ತು ಬಳಕೆಯಿಂದಾಗಿ ಒಂದು ಗ್ರಹದ ಜನಾಂಗವಾಗಿದ್ದಾರೆ ಎಂದು ಹೇಳುವುದು ಸ್ವಲ್ಪ ಹೆಚ್ಚಿನ ಉತ್ಪ್ರೇಕ್ಷೆ ಆಗಬಹುದು ಅಷ್ಟೆ. ಕೆಲಸ ಮಾಡಲು ಶಕ್ತರಾಗಿರುವ ಮತ್ತು ಕೆಲಸ ಮಾಡಲು ಇಚ್ಛೆಯುಳ್ಳ ಎಲ್ಲರು ಉದ್ಯೋಗವನ್ನು ಪಡೆಯುವ ಸ್ಥಿತಿಯಲ್ಲಿ ಇರುತ್ತಾರೆಂಬ ಕಟ್ಟುಪಾಡೇನೂ ಇಲ್ಲ; ನಿರುದ್ಯೋಗಿಗಳ ಒಂದು ಸೈನ್ಯ ಯಾವಾಗಲೂ ಇರುತ್ತದೆ. ಕೆಲಸಗಾರನಿಗೆ ತನ್ನ ಉದ್ಯೋಗವನ್ನು ಕಳೆದುಕೊಳ್ಳುವ ಭಯ ಯಾವಾಗಲೂ ಇರುತ್ತದೆ. ನಿರುದ್ಯೋಗಿಗಳು ಮತ್ತು ಅಲ್ಪ ಸಂಡಿಮೆಯುಳ್ಳ ಕೆಲಸಗಾರರು ಲಾಭದಾಯಕ ಮಾರುಕಟ್ಟೆಯನ್ನು ಒದಗಿಸುವುದಿಲ್ಲ; ಆದುದರಿಂದ ಬಂಡವಾಳಗಾರರು ಬಳಕೆ ವಸ್ತುಗಳ ಉತ್ಪಾದನೆಯನ್ನು ಮಿತಿಗೊಳಿಸುತ್ತಾರೆ. ಇದರ ಪರಿಣಾಮ ಕಷ್ಟಕರವಾದ ಜೀವನ. ತಾಂತ್ರಿಕ ಬೆಳವಣಿಗೆಗೆ ಕೆಲಸದ ಹೊರೆಯನ್ನು ತಗ್ಗಿಸುವುದಕ್ಕೆ ಬದಲಾಗಿ ಅನೇಕ ಸಾರಿ ನಿರುದ್ಯೋಗವನ್ನು ಹೆಚ್ಚಿಸುತ್ತದೆ. ಬಂಡವಾಳಗಾರರ ನಡುವಿನ ಪೈಪೋಟಿಯೊಂದಿಗೆ ಲಾಭದ ಪ್ರೇರಣೆ, ಬಂಡವಾಳದ ಸಂಗ್ರಹಣೆ ಮತ್ತು ಉಪಯುಕ್ತತೆಯಲ್ಲಿ ಅಭದ್ರತೆಯುಂಟಾಗಲು ಕಾರಣವಾಗುತ್ತದೆ. ಇದರಿಂದ ಕಟುತರವಾದ ಆರ್ಥಿಕ ಮುಗ್ಗಟ್ಟು ಸಂಭವಿಸುತ್ತದೆ. ಅನಿರ್ಬಂಧಿತ ಪೈಪೋಟಿ ಭಾರಿ ಪ್ರಮಾಣದ ದುಡಿತದ (labour) ಅಪವ್ಯಯಕ್ಕೆ ಕಾರಣವಾಗುತ್ತದೆ ಮತ್ತು ನಾನು ಹಿಂದೆ ಪ್ರಸ್ತಾಪಿಸಿದ ಸಾಮಾಜಿಕ ಪ್ರಜ್ಞೆಯ ಕ್ಷಯಕ್ಕೂ ಕಾರಣವಾಗುತ್ತದೆ.

ಬಂಡವಾಳ ಪದ್ಧತಿಯ ಅತಿ ಕೆಟ್ಟ ಪರಿಣಾಮವೆಂದರೆ ವ್ಯಕ್ತಿಯ ಕ್ಷೀಣತೆಯೆ. ನಮ್ಮ ವಿದ್ಯಾಭ್ಯಾಸದ ಒಟ್ಟು ವ್ಯವಸ್ಥೆಯೆ ಈ ಕೆಡುಕಿನಿಂದ ಬಾಧಿತವಾಗಿದೆ. ಅತಿ ದೊಡ್ಡದು ಮಾಡಿದ ಸ್ಪರ್ಧಾಮನೋಭಾವವನ್ನು ವಿದ್ಯಾರ್ಥಿಯಲ್ಲಿ ಬೆಳೆಸಲಾಗುತ್ತಿದೆ;

ಅವನು ಅರ್ಜನೆಗೆಲಸವನ್ನು ಮುಂದಿನ ಜೀವನೋಪಾಯ
ತರಬೇತಿಯೆಂದು ಪೂಜಿಸುತ್ತಾನೆ.

ಈ ಕೆಡಕುಗಳನ್ನು ನಿವಾರಿಸಲು ಒಂದೆ ಒಂದು ದಾರಿ
ಎಂದು ನನಗೆ ಮನವರಿಕೆಯಾಗಿದೆ. ಇದು ಸಮಾಜ ಅರ್ಥವ್ಯವಸ್ಥೆ
ಸ್ಥಾಪನೆ ಮತ್ತು ಅದರೊಂದಿಗೆ ಸಾಮಾಜಿಕ ಗುರಿಗಳತ್ತ ತಿರುಗಿ
ವಿದ್ಯಾಭ್ಯಾಸ ಕ್ರಮ. ಇಂಥ ಅರ್ಥವ್ಯವಸ್ಥೆಯಲ್ಲಿ ಉತ್ಪಾದ
ಸಾಧನೆಗಳೆಲ್ಲ ಸಮಾಜದ ಒಡೆತನದಲ್ಲಿರುತ್ತವೆ. ಮತ್ತು ಅವು
ಉಪಯೋಗಬಂದು ಯೋಜನೆಗೆಬದ್ಧವಾಗಿರುತ್ತದೆ. ಯೋಜನಬ
ಅರ್ಥವ್ಯವಸ್ಥೆಯಲ್ಲಿ ಸಮುದಾಯದ ಬಳಕೆಗೆ ಉತ್ಪಾ
ಹೊಂದಿಕೊಳ್ಳುತ್ತದೆ. ದುಡಿಯಲು ಶಕ್ತರಾದ ಎಲ್ಲರಿಗೂ ಕೆಲ
ಹಂಚಿಕೆಯಾಗುತ್ತದೆ ಮತ್ತು ಪ್ರತಿಯೊಬ್ಬ ಗಂಡು, ಹೆಣ್ಣು ಮ
ಮಗುವಿಗೆ ಜೀವನೋಪಾಯದ ಮಾರ್ಗ ಖಾತರಿಗೊಂಡಿರುತ್ತ
ವ್ಯಕ್ತಿಯ ವಿದ್ಯಾಭ್ಯಾಸ ಇಂದಿನ ಸಮಾಜದಲ್ಲಿ ಶಕ್ತಿ ಮತ್ತು ಗೆಲು
ವೈಭವತೆ ಇರುವಲ್ಲಿ, ಅವನ ಸಹಚರರ ಬಗ್ಗೆ ಹೊಣೆಗಾರಿಕೆ
ಪ್ರಜ್ಞೆಯನ್ನು ಬೆಳೆಸುತ್ತದೆ.

ಇಷ್ಟಾದರೂ ಯೋಜನಬದ್ಧ ಅರ್ಥವ್ಯವಸ್ಥೆಯೆ ಸಮಾಜವಾ
ಅಲ್ಲ ಎಂಬುದನ್ನು ನೆನಪಿಡಬೇಕು. ಬರಿ ಯೋಜನಬದ್ಧ ಅರ್ಥವ್ಯ
ಆದರೆ ಅದು ವ್ಯಕ್ತಿಯ ಸಂಪೂರ್ಣ ಗುಲಾಮಗಿರಿಗೆ ದಾರಿ ಮ
ಕೊಡಬಹುದು. ಸಮಾಜವಾದದ ಸಾಧನೆ ಕೆಲವು ಅತಿ ಕ್ಲಿ
ಸಾಮಾಜಿಕ-ಆರ್ಥಿಕ ಸಮಸ್ಯೆಗಳ ನಿವಾರಣೆಯನ್ನು ಬಯಸುತ್ತ
ಅತಿಯಾದ ರಾಜಕೀಯ ಮತ್ತು ಆರ್ಥಿಕ ಶಕ್ತಿ ಕೇಂದ್ರೀಕ
ಆಗುವುದರಿಂದ ಅಧಿಕಾರಶಾಹಿ ಅಮಿತ ಬಲವನ್ನೂ ದರ್ಪವ
ಪಡೆಯುವುದನ್ನು ತಪ್ಪಿಸುವುದು ಹೇಗೆ? ಅಧಿಕಾರಶಾ
ಪ್ರಜಾಪ್ರಭುತ್ವದ ಎದುರು ತೂಕವನ್ನು ಕಟ್ಟಿ ವ್ಯಕ್ತಿಯ ಹ

ಣೆಯನ್ನು ಸ್ಥಿರಪಡಿಸುವುದು ಹೇಗೆ? ಎಂದು ಮುಂತಾಗಿ ತಿಳಿಸಿ ಮಾಜವಾದದ ಬಗ್ಗೆ ಇರುವ ತಮ್ಮ ಅನುಮಾನಗಳನ್ನು ಐನ್‌ಸ್ಟೈನ್‌ರು ಶ್ನೆಗಳ ರೂಪದಲ್ಲಿ ಎತ್ತುತ್ತಾರೆ.

ಆಲ್ಬರ್ಟ್ ಐನ್‌ಸ್ಟೈನ್‌ರ ಮಾನವಪ್ರೇಮ ಎಷ್ಟು ತಃಕರಣದಿಂದ ಕೂಡಿತ್ತೆಂದರೆ ಪರಮಾಣು ಬಾಂಬು ಯಾರಿಸಿದ್ದರ ಬಗ್ಗೆ ಅವರು ಎರಡನೆಯ ಮಹಾಯುದ್ಧದ ನಂತರ ಕ್ತಪಡಿಸಿದ ಅಭಿಪ್ರಾಯದಂತೆ "ನಿಜಕ್ಕೂ ನಾನು ಟಪ್ಪಾಲು ಟ್ಟಿಗೆಯಂತೆ ವರ್ತಿಸಿದ್ದೆ. ಪೂರ್ತಿಗೊಳಿಸಲಾಗಿದ್ದ ಪತ್ರವನ್ನು ಅವರು ದರು. ನಾಸದಕ್ಕೆ ಸುಮ್ಮನೆ ಸಹಿಮಾಡಿದೆ." ಎಂದಿದ್ದರು. ಾರನೋಟಕ್ಕೆ ಇವರ ಹೇಳಿಕೆ ಬೇಜವಾಬ್ದಾರಿತನದಿಂದ ಕೂಡಿದ್ದು ಸಿದರು ಅದರ ಅನಿವಾರ್ಯತೆಯ ಕಲ್ಪನೆಯಲ್ಲಾದ ತಪ್ಪು ಚಾರದಿಂದ ಇಷ್ಟೆಲ್ಲಾ ಅನಾಹುತಕ್ಕೆ ಕಾರಣವಾಯಿತು ನ್ನುವುದನ್ನು ಮನಗಂಡವರಲ್ಲಿ ಐನ್‌ಸ್ಟೈನ್‌ರ ಬಗ್ಗೆ ಗೌರವ ಟ್ಟಲೇಬೇಕು.

"ಜರ್ಮನರು ಪರಮಾಣುಬಾಂಬ್ ತಯಾರಿಸುವುದರಲ್ಲಿ ಶಸ್ವಿಯಾಗುವುದಿಲ್ಲವೆಂದು ಗೊತ್ತಿದ್ದಿದ್ದರೆ ನಾನು ಆ ಬಾಂಬಿನ ೋಜಿಗೇ ಹೋಗುತ್ತಿರಲಿಲ್ಲ ಎಂದು ಪಶ್ಚಾತ್ತಾಪಟ್ಟ ಐನ್‌ಸ್ಟೈನ್‌ರು ಪಾನ್ ದೇಶದ ಜೀವಕುಲಕ್ಕೆ ಆ ಮೂಲಕ ಇಡೀ ಪ್ರಪಂಚದ ಜೀವ ಲಕ್ಕೆ ಎಸಗಿದ ಘೋರ ಅಪರಾಧಕ್ಕೆ ತಾವೇ ಹೊಣೆಗಾರರು ಎನ್ನುವ ವನೆಯಿಂದ ಜಪಾನಿ ಭೌತವಿಜ್ಞಾನಿ ಹಿಡೇಕಿ ಯುಕಾವ ಅವರನ್ನು ೇಟಿಮಾಡಿದಾಗ ಹನಿತುಂಬಿದ ಕಣ್ಣುಗಳಿಂದ, ಮಾತು ಬಿದ್ದ ಲಗೆಯಿಂದ ಕ್ಷಮಾಪಣೆ ಕೇಳಿದರು.

ನಾಲ್ಕು ಗೋಡೆಗಳ ಮಧ್ಯೆ ವಿಜ್ಞಾನದ ಅವಿಷ್ಕಾರಗಳನ್ನು ಾಡಿದರೆ ತಮ್ಮ ಜವಾಬ್ದಾರಿ ತೀರಿತೆನ್ನುವ ವಿಜ್ಞಾನಿಗಳೇ

ತುಂಬಿರುವವರ ಮಧ್ಯೆ ವಿಜ್ಞಾನಿಗೂ ಕೆಲವು ಬದ್ಧತೆಗಳಿರುತ್ತವೆ. ಅ
ಎಲ್ಲ ಆವಿಷ್ಕಾರಗಳೂ ತನ್ನ ಸುತ್ತಲಿನ ಸಮಾಜದಿಂದ, ವಿಶ್ವದಿ
ರೂಪುಗೊಂಡು ಬಂದಂತಾದವುಗಳಾದ್ದರಿಂದ; ಅಂತಹ ಪರಿ
ಸಮಾಜದ ಒಳಿತಿಗಾಗಿ ಆ ಆವಿಷ್ಕಾರಗಳನ್ನು ಬಳಸು
ನೋಡಿಕೊಳ್ಳುವುದೂ ವಿಜ್ಞಾನಿಯ ನೈತಿಕ ಹೊಣೆಯಾಗಿರುತ್ತದೆ.

ಆಲ್ಬರ್ಟ್ ಐನ್‌ಸ್ಟೈನ್‌ರಿಗೆ ಇಂತಹ ಹೊಣೆಗ
ಇದ್ದದ್ದರಿಂದ ಎರಡನೇ ಮಹಾಯುದ್ಧದ ನಂತರ ವಿಶ್ವಶಾಂತಿ
ಲೇಖನಗಳನ್ನು ಬರೆದರು. ಸಂಘಟನೆಗಳನ್ನು ಮಾಡಿ ಓಡಾಡಿದ
ಅವರು ೧೯೪೫ ಹಾಗೂ ೧೯೪೭ ರಲ್ಲಿ 'ಪರಮಾಣು ಯುದ್ಧ ಅ
ಶಾಂತಿ' ಎನ್ನುವ ವಿಷಯದ ಬಗ್ಗೆ ಬರೆದು ಪ್ರಕಟಿಸಿದ ಲೇಖನಗ
ಮೂರನೇ ಮಹಾಯುದ್ಧವೇನಾದರೂ ನಡೆದರೆ ಆದರ ಪರಿಣಾ
ಬಗ್ಗೆ ಬರೆಯುತ್ತಾ "ಪರಮಾಣುಬಾಂಬಿನ ಚಂಡಾಟದಿಂದ ನಡೆ
ಕದನದಲ್ಲಿ ಮಾನವಕುಲ ನಿರ್ನಾಮವಾಗಿ ಹೋದೀತೆಂದೇನೂ ನ
ಭಾವಿಸಿಲ್ಲ. ಪ್ರಾಯಶಃ ಪ್ರಪಂಚದ ಜನಸಂಖ್ಯೆಯ ಮೂರ
ಎರಡು ಭಾಗ ಅಳಿದು ಹೋಗಬಹುದು. ಆದರೆ ಬದುಕು ವ
ಚಿಗುರಲು ಅನುವಾಗುವ ಸಾಕಷ್ಟು ಮಂದಿ ಚಿಂತನಶೀಲರು ವ
ಸಾಕಷ್ಟು ಸಂಖ್ಯೆಯ ಪುಸ್ತಕಗಳು ಉಳಿದಿದ್ದು ನಾಗರೀಕತೆಯ
ಪುನರ್‌ಸ್ಥಾಪಿಸಬಹುದು" ಎಂದು ಅಭಿಪ್ರಾಯಪಡುತ್ತಾರೆ.

ಇಂತಹ ಭೀಕರ ಅನಾಹುತವನ್ನು ತಪ್ಪಿಸಬೇಕಾದರೆ "ಬಾ
ರಹಸ್ಯವನ್ನು ಪ್ರಪಂಚ ಸರ್ಕಾರವೊಂದಕ್ಕೆ ಬದ್ಧಗೊಳಿಸಬೇಕು ; ವ
ಹಾಗೆ ಮಾಡಲು ತಾನು ಸಿದ್ಧವಿರುವುದನ್ನು ಸಂಯುಕ್ತ ಸಂಸ್ಥಾನ
ಒಡನೇ ಸಾರಬೇಕು. ಅತ್ಯಧಿಕ ಸೇನಾಶಕ್ತಿಯಿರುವ ಮ
ರಾಷ್ಟ್ರಗಳಾದ ಅಮೆರಿಕ ಸಂಯುಕ್ತ ಸಂಸ್ಥಾನಗಳು, ಸೋವಿ
ಒಕ್ಕೂಟ ಮತ್ತು ಗ್ರೇಟ್ ಬ್ರಿಟನ್ ಒಂದುಗೂಡಿ ಪ್ರ
ಸರ್ಕಾರವನ್ನು ಸ್ಥಾಪಿಸಬೇಕು. ಈ ಮೂರೂ ಸರ್ಕಾರಗಳೂ ಪ್ರ

ಸರ್ಕಾರಕ್ಕೆ ತಮ್ಮ ಸಕಲ ಶಕ್ತಿಯನ್ನೂ ಬದ್ಧಗೊಳಿಸಬೇಕು. ಬಲಿಷ್ಠ ಸೇನೆಗಳಿರುವ ಜನಾಂಗಗಳು ಕೇವಲ ಮೂರು ಮಾತ್ರ ಇರುವುದರಿಂದ ಇಂಥ ಒಂದು ಸರ್ಕಾರದ ಸ್ಥಾಪನೆ ಸುಲಭವಾಗುತ್ತದೆ; ಕಷ್ಟವಾಗದು.

ಸುದೀರ್ಘಕಾಲದತನಕ ಪರಮಾಣುಶಕ್ತಿ ಮಹಾ ವರವಾದೀತೆಂದೇನೂ ಮುಂಗಾಣಲಾರೆ. ಅದಕ್ಕಾಗಿಯೇ ಸಧ್ಯಕ್ಕೆ ಇದೊಂದು ಘೋರ ಆಪತ್ತೆಂದು ಭಾವಿಸಿದ್ದೇನೆ. ಬಹುಶಃ ಹೀಗಿರುವುದು ಒಳ್ಳೆಯದಕ್ಕೇ. ಏಕೆಂದರೆ ಮನುಕುಲ ತನ್ನ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಕ್ರಮ ಕೈಗೊಳ್ಳಬೇಕೆಂಬ ಭಯಮೂಲ ಒತ್ತಡವನ್ನು ಅದರ ಮೇಲೆ ಹೇರುತ್ತದೆ; ಇಂಥ ಒತ್ತಡವಿಲ್ಲದಿದ್ದರೆ ಈ ಕ್ರಮ ಎಂದೂ ಬರದಿರುವುದು ನಿಸ್ಸಂಶಯ'' ಎಂದು ಬರೆಯುತ್ತಾರೆ.

ಪೋಣೆ ಹೊರಲಿ ಶಿಕ್ಷಣ

ಆಲ್ಬರ್ಟ್ ಐನ್‌ಸ್ಟೈನ್‌ರು ಒಬ್ಬ ಶಿಕ್ಷಣ ತಜ್ಞರಾಗಿ ಇಲ್ಲದಿದ್ದರೂ, ಒಬ್ಬ ವಿದ್ಯಾರ್ಥಿಯಾಗಿ, ಒಬ್ಬ ಆಧ್ಯಾಪಕರಾಗಿ ಪಡೆದ ಅನುಭವ ಅಪಾರ. ಅವರು ತಮ್ಮ ಅಪಾರವಾದ ಬೋಧನಾನುಭವದ ಆಧಾರದಮೇಲೆ ಶಿಕ್ಷಣವನ್ನು ಕುರಿತು ಅನೇಕ ಲೇಖನಗಳನ್ನು ಬರೆದರು.

ಶಿಕ್ಷಣದಲ್ಲಿ ಒಲವುಮತ್ತು ಪ್ರೇರಣೆಗಳಮಹತ್ವವನ್ನು ಅವರು ಮನಗಂಡಿದ್ದರು. ಅವರು ಪಿಟೀಲು ನುಡಿಸುವುದನ್ನು ಕಲಿತಿದ್ದರ ಬಗ್ಗೆ ಬರೆಯುತ್ತ 'ಆರನೆಯ ವಯಸ್ಸಿನಿಂದ ಹದಿನಾಲ್ಕರ ತನಕ ನಾನು ಪಿಟೀಲು ಪಾಠ ಹೇಳಿಸಿಕೊಂಡೆ. ಆದರೆ ಯಾಂತ್ರಿಕ ವರಸೆಗಳನ್ನು ಮೀರಿ ನಿಂತಿರುವ ಸಂಗೀತ ತಿಳಿದಿರದಿದ್ದ ಶಿಕ್ಷಕರ ಜೊತೆ ನನ್ನ ಅದೃಷ್ಟ ಕುದುರಲಿಲ್ಲ. ನಾನು ಕಲಿಯಲು ನಿಜವಾಗಿ ತೊಡಗಿದ್ದು ಸುಮಾರು ಹದಿಮೂರು ವರ್ಷ ವಯಸ್ಸಿನವನಾದಾಗ ಮಾತ್ರ. ಅದೂ

ಮೊಝಾರ್ಟನ ಸೊನಾಟಗಳ (ಮೂರು ಅಥವ ನಾಲ್ಕುಗತಿಗ
ಮುಖ್ಯವಾಗಿ ಪಿಯಾನೋ ವಾದ್ಯಕ್ಕಾಗಿ ರಚಿಸಿದ ಪಾಶ್ಚಾತ್ಯ ಸಂ
ಕೃತಿಗಳು) ಬಗ್ಗೆ ಪ್ರೇಮಾದರ ತಳೆದ ಮೇಲೆಯೇ. ಅವು
ಕಲಾತ್ಮಕತೆಯನ್ನು ವಿಶಿಷ್ಟ ನಯವನ್ನೂ ಪುನರುತ್ಪಾದಿಸಲು ಮಾ
ಪ್ರಯತ್ನ ನನ್ನ ತಂತ್ರವನ್ನು ಸುಧಾರಿಸಿಕೊಳ್ಳಲು ನನ್ನ
ಒತ್ತಾಯಿಸಿತು. ವ್ಯವಸ್ಥಿತವಾಗಿ ಅಭ್ಯಾಸ ಮಾಡದೆಯೂ ನಾನು
ಸುಧಾರಣೆಯನ್ನು ಸೊನಾಟಗಳಿಂದ ಪಡೆದುಕೊಂಡೆ. ಒಟ್ಟ
ಹೇಳುವುದಾದರೆ ಕರ್ತವ್ಯ ಪ್ರಜ್ಞೆಗಿಂತ ಒಲವೇ ಹೆಚ್ಚು ಲೇಸ
ಗುರುವೆಂದು ನಂಬಿದ್ದೇನೆ. ಕನಿಷ್ಠ ಪಕ್ಷ ನನ್ನ ಮಟ್ಟಿಗಂತೂ
ಪೂರ್ತಿ ನಿಜವಾಗಿತ್ತು' ಎಂದು ಅಭಿಪ್ರಾಯಪಡುತ್ತಾರೆ.

ಐನ್‌ಸ್ಟೈನ್‌ರು ಶಿಕ್ಷಣದ ಬಗ್ಗೆ ಬರೆಯುತ್ತ 'ಸಂಸ್ಕೃ
ಸಂಪತ್ತನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯ
ವಿಚಾರಶೀಲ ಹಾಗೂ ಸತ್ಯಾನ್ವೇಷಿಯಾದ ಮಾನವನ
ರೂಪಿಸುವುದೇ ಗುರಿಯಾಗಿ ಉಳ್ಳ ಹಾಗೂ ಅವನ ಸರ್ವಾಂಗೀ
ವಿಕಾಸಕ್ಕೆ ಕಾರಣವಾಗಬಹುದಾದ ಜ್ಞಾನ ಮತ್ತು ಮಾ
ಪ್ರೇಮಗಳನ್ನು ಬೆಳೆಸುವುದೇ ಶಿಕ್ಷಣ. ಶಾಲೆಯಲ್ಲಿ ಕಲಿತದ್ದೆಲ್ಲ
ಮರೆತುಹೋದಮೇಲೆ ಯಾವುದು ಮನಸ್ಸಿನಲ್ಲಿ ಉಳಿಯುತ್ತದೆ
ಅದೇ ಶಿಕ್ಷಣ' ಎಂದು ಅಭಿಪ್ರಾಯಪಡುತ್ತಾರೆ.

"ಬೆಳೆಯುತ್ತಿರುವ ಜನಾಂಗಕ್ಕೆ ಆದಷ್ಟು ಹೆ
ವಿಷಯಗಳನ್ನು ತುರುಕಲು ಸಹಾಯವಾಗಬಲ್ಲ ಒ
ಉಪಕರಣವೇ ಶಿಕ್ಷಣ ಎಂದು ಕೆಲವರು ಭಾವಿಸುತ್ತಾರೆ.
ಸರಿಯಲ್ಲ, ಪಠ್ಯವಸ್ತು ನಿರ್ಜೀವವಾದದ್ದು. ಶಾಲೆಯಾದ
ಜೀವಂತ ವ್ಯಕ್ತಿಗಳ ಸೇವೆಗಾಗಿ ಇರುವ ಸಂಸ್ಥೆ ಅಲ್ಲಿ ಜನರ ಹಿತ
ಕಾಯುವಂಥಾ ಗುಣ ಸಾಮರ್ಥ್ಯಗಳನ್ನು ಕಿರಿಯರಲ್ಲಿ ಬೆಳೆಸಬೇ
ಹೇಗೆಂದರೆ ಅದು ವ್ಯಕ್ತಿಯಲ್ಲಿರುವ ವೈಶಿಷ್ಟ್ಯತೆಯ

ಶಮಾಡಬೇಕೆಂದು ಅರ್ಥವಲ್ಲ. ಸ್ವತಂತ್ರವಾಗಿ ಚಾರಮಾಡಬಲ್ಲ ಕ್ರಿಯಾಶೀಲ ವ್ಯಕ್ತಿಗಳನ್ನು ತಯಾರು ಾಡುವುದೇ ಶಿಕ್ಷಣದ ಗುರಿಯಾಗಬೇಕು'' ಎನ್ನುತ್ತಾರೆ.

ಸಾಧನೆಯಿಂದ ಮಾತ್ರ ಆದರ್ಶಗಳನ್ನು ತಲುಪಲು ಸಾಧ್ಯವೇ ೂರತು ನೀತಿಭೋಧನೆಯಿಂದಂತೂ ಅಲ್ಲ. ಬರೀ ಬೋಧನೆಯಿಂದ ಾರವ್ಯಕ್ತಿತ್ವವೂ ರೂಪುಗೊಳ್ಳುವುದಿಲ್ಲ. ಅದಕ್ಕೆ ಬೇಕಾದ್ದು ದುಡಿಮೆ ತ್ತು ನಿರಂತರ ಪ್ರಯತ್ನ.

ಬೋಧನಾ ಕ್ರಮಗಳಲ್ಲೆಲ್ಲಾ 'ಮಾಡಿಕಲಿ' ಕ್ರಮವೇ ುತ್ತಮವಾದುದು. ವಿದ್ಯಾರ್ಥಿಯು ತಾನು ರಿಯಬೇಕಾದುದ್ದೆಲ್ಲವನ್ನೂ ಈ ಕ್ರಮದಿಂದಲೇ ಕಲಿಯುತ್ತಾನೆ. ೂದಲ ತರಗತಿಯ ಮಗು ಅಕ್ಷರಾಭ್ಯಾಸ ಮಾಡುವುದೂ ಈ ಮದಿಂದಲೇ. ಗಣಿತದ ಒಂದು ಸಮಸ್ಯೆಯನ್ನು ಬಿಡಿಸುವಾಗ, ವಾಕ್ಯ ಚನೆಯನ್ನು ಬರೆಯುವಾಗ, ವ್ಯಾಯಾಮ ಅಥವ ಕ್ರೀಡೆಗಳನ್ನು ಭ್ಯಾಸ ಮಾಡುವಾಗ ಇದೇ ಕ್ರಮವನ್ನೇ ಅನಸರಿಸಲಾಗುತ್ತದೆ.

ಕಲಿಕೆಗೆ ಮುಖ್ಯವಾದುದು ಪ್ರೇರಣೆ. ಪ್ರತಿಯೊಂದು ಧನೆಯ ಹಿಂದೆ ಒಂದು ಪ್ರೇರಣೆ ಇರುತ್ತದೆ. ಇಂಥ ಪ್ರೇರಣೆಯಿಂದ ಲಸವನ್ನು ಸಾಧಿಸಿದಾಗ ಆ ಪ್ರೇರಣೆಗೆ ಮತ್ತಷ್ಟು ಪುಷ್ಟಿ ದೊರೆತು ಚ್ಚು ಶಕ್ತಿಯುತವಾಗುತ್ತದೆ. ಒಂದು ಕೆಲಸಕ್ಕೆ ಕಾರಣ ಲಾತ್ಕಾರವಾಗಿರಬಹುದು, ಕೀರ್ತಿ ಪ್ರತಿಷ್ಠೆಗಳ ಮಿಷವಿರಬಹುದು, ಕುತೂಹಲವಿರಬಹುಧು ಅಥವಾ ಇನ್ನೇನೋ ರಬಹುದು. ಇವೆಲ್ಲವೂ ಪ್ರೇರಣೆಗಳೇ. ಸತ್ಯವನ್ನು ಅರಿಯುವ ತೂಹಲದ ಪ್ರೇರಣೆ ಪ್ರತಿ ಮಗುವಿಗೂ ಪ್ರಕೃತಿದತ್ತವಾಗಿ ರುತ್ತದೆ. ಮಗುವು ಇನ್ನೂ ಚಿಕ್ಕದಾಗಿರುವಾಗಲೇ ಈ ಗುಣವು ರ್ಬಲವಾಗಲು ಅವಕಾಶವಿದೆ. ಪ್ರೇರಣೆಯ ಸ್ವಭಾವಕ್ಕೆ ನುಗುಣವಾಗಿ ಶೈಕ್ಷಣಿಕ ಪರಿಣಾಮಮವು ಬರುತ್ತದೆ. ಆದುದರಿಂದ

ಮಕ್ಕಳ ಮನಸ್ಸನ್ನು ರೂಪಿಸುವುದರಲ್ಲಿ ಶಿಕ್ಷಕನ ಮನೋಧ ಹಾಗೂ ಶಾಲೆಯ ವಾತಾವರಣ ಪ್ರಭಾವ ಬೀ ಪ್ರೇರಣೆಗಳಾಗಿರುತ್ತವೆ ಎಂದು ಭಾವಿಸಿದ್ದ ಐನ್‌ಸ್ಟೈನ್‌ರು; ಭ ಒತ್ತಡ ಹಾಗೂ ಅಧಿಕಾರ ಪ್ರಯೋಗದಿಂದ ನಡೆಯುವ ಶ ಕೆಲಸಗಳು ಮಕ್ಕಳಲ್ಲಿರಬಹುದಾದ ಸದ್ಭಾವನೆ, ಪ್ರಾಮಾ ಹಾಗೂ ಆತ್ಮ ವಿಶ್ವಾಸಗಳನ್ನು ಹಾಳು ಮಾಡುತ್ತವೆ. ಹೇಡಿಗ ಮಾತ್ರ ತಯಾರುಮಾಡಬಲ್ಲ ಇಂಥ ಶಾಲೆಗಳು ಸರ್ವಾಧಿಕಾರಿಗಳ ರಾಷ್ಟ್ರಗಳಲ್ಲಿ ಮಾತ್ರ ಇರಲು ಸಾಧ್ಯ. ಪ್ರಜಾ ಪ್ರಭುತ್ವವಿ ರಾಷ್ಟ್ರಗಳಲ್ಲಿ ಶಿಕ್ಷಕ ತನ್ನ ಮಾನವೀಯ ಗುಣಗಳಿಂದ ಹ ಬುದ್ಧಿಸಾಮರ್ಥ್ಯದಿಂದ ವಿದ್ಯಾರ್ಥಿಗಳ ಗೌರವ ಸಂಪಾದಿಸುತ ಈ ಗೌರವದ ಹಂಬಲವೂ ಒಂದು ಪ್ರೇರಣೆಯೇ ಆಗಿರುತ್ತದೆ.

ಮನುಷ್ಯನ ಒಂದು ಹಂಬಲವೆಂದರೆ ಸಮಾಜದ ಗೌರವ ಸಂಪಾದಿಸಬೇಕೆನ್ನುವುದು, ಇದು ಅವನಲ್ಲಿರುವ ಸ್ವಾಭಾವಿಕ ಗ ಇದೂ ಒಂದು ಪ್ರೇರಣೆಯೇ. ಈ ಪ್ರೇರಣೆ ಇಲ್ಲದೆ ಹೋ ಮನುಷ್ಯನಲ್ಲಿ ಸಹಕಾರ ಬುದ್ಧಿಯೇ ಇರುವುದಿಲ್ಲ. ತನಗೆ ಇತರ ಮನ್ನಣೆ ಸಿಗಬೇಕೆಂಬ ಮನುಷ್ಯನ ಆಸೆಯು ಸಮಾಜವನ್ನು ಒಗ್ಗ ಇಡುವ ಒಂದು ಬಲವೂ ಆಗಿದೆ. ಈ ಬಲವು ಸಮಾಜದ ಹಿತ ಕಾಪಾಡುವಂಥಾದ್ದೂ ಆಗಿರಬಹುದು ಅಥವ ಅದನ್ನು ವಿನ ನೂಕುವಂಥಾದ್ದಾದರೂ ಆಗಿರಬಹುದು. ಇತರರ ಮೆ ಗಳಿಸಬೇಕು ಅಥವ ತಾನು ಮಾಡಿದ್ದು, ಹೇಳಿದ್ದು ಬೇರೆಯ ಒಪ್ಪಿಗೆ ಆಗಬೇಕು ಎನ್ನುವ ಆಸೆ ಉತ್ತಮವಾದದ್ದೇ ಆದರೂ ಇತರರಿಗಿಂತ ಬುದ್ಧಿವಂತ, ಶಕ್ತಿವಂತ ಎನ್ನುವ ಆಸೆ ಬೆಳೆದರೆ ಸಮಾಜಕ್ಕೆ ಕಂಠಕವಾದರೂ ಆಗಬಹುದು. ಆದುದರಿಂದ ವಿದ ಚೆನ್ನಾಗಿ ಕಲಿಯುವಂತೆ ಮಾಡಲು ಇಂಥಾ ಆಸೆಗ ಬೆಳೆಸುವುದಾಗಲಿ, ಇಂಥಾ ಪ್ರೇರಣೆಯನ್ನೊದಗಿಸುವು

ಒಳ್ಳೆಯದಲ್ಲ. ಇಂತಹ ಸುಲಭ ಮಾರ್ಗವನ್ನು ಶಿಕ್ಷಣ ತ್ಯಜಿಸಬೇಕು.

ಬದುಕಿಗಾಗಿ ನಡೆಸಿದ ಹೋರಾಟದಲ್ಲಿ ಮಾನವನು ಜಯಗಳಿಸಿದುದು ತನ್ನ ಸಾಮೂಹಿಕ ಶಕ್ತಿಯಿಂದ. ಆದುದರಿಂದ ಸಮಾಜದಲ್ಲಿ ಮಾನವ ಒಂದು ಅಂಶ ಮಾತ್ರ. ಹೀಗಿರುವಾಗ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವವನ್ನು ಪ್ರೋತ್ಸಾಹಿಸಬಾರದು. ಹೀಗೆ ಪ್ರೋತ್ಸಾಹಿಸುವವರು ಡಾರ್ವಿನ್ನನ 'ಬದುಕಿಗಾಗಿ ನಡೆಸುವ ಹೋರಾಟದ' ಸಿದ್ಧಾಂತವನ್ನು ಉಲ್ಲೇಖಿಸಿ ತಮ್ಮ ಕಾರ್ಯವನ್ನು ಸಮರ್ಥಿಸಿಕೊಳ್ಳಬಹುದು. ವ್ಯಕ್ತಿ - ವ್ಯಕ್ತಿಗಳ ಮಧ್ಯ ಸ್ಪರ್ಧೆ ಏರ್ಪಟ್ಟರೆ ಆರ್ಥಿಕಾಭಿವೃದ್ಧಿಯ ದೃಷ್ಟಿಯಿಂದ ಅಂಥವರ ಯೋಚನೆ ಸರಿ ಎನ್ನುವ ಭ್ರಮೆಯನ್ನು ಉಂಟುಮಾಡುತ್ತದೆ. ಆದರೆ ವಾಸ್ತವವಾಗಿ ಏರ್ಪಡುವ ಸ್ಪರ್ಧೆಯಿಂದ ಸಮಾಜದ ವಿನಾಶಕ್ಕೆ ಕಾರಣವಾಗಬಹುದು. ಆದುದರಿಂದ ಯಾವುದೇ ಕಾರಣದಿಂದ ಶಿಕ್ಷಣ ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವವನ್ನು ಪ್ರೋತ್ಸಾಹಿಸಬಾರದು ಎಂದು ಐನ್‌ಸ್ಟೈನ್ ಅಭಿಪ್ರಾಯಪಡುತ್ತಾರೆ.

"ಬಾಳಿನಲ್ಲಿ ಜಯ ಪಡೆಯಬೇಕು ಎಂಬುದನ್ನು ಹೇಳುವಾಗ ಶಿಕ್ಷಕನು ಎಚ್ಚರಿಕೆಯಿಂದಿರಬೇಕಾಗುತ್ತದೆ. ಅದು ಅಪಾರ್ಥವಾಗದಂತೆ ಅವನು ನೋಡಿಕೊಳ್ಳಬೇಕಾಗುತ್ತದೆ. ಸಮಾಜಕ್ಕೆ ತಾನು ಕೊಡುವುದಕ್ಕಿಂತ ಅತಿ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಫಲವನ್ನು ಪಡೆಯುವವನು ಜೀವನದಲ್ಲಿ ಜಯಗಳಿಸಿದ್ದಾನೆ ಎಂಬ ಭಾವನೆ ಇದೆ. ಆದರೆ ಒಬ್ಬ ಮನುಷ್ಯನ ಯೋಗ್ಯತೆಯನ್ನು ನಿಷ್ಕರ್ಷಿಸಬೇಕಾದುದು ಅವನು ಪಡೆಯುತ್ತಿರುವ ಪ್ರತಿಫಲದ ಪ್ರಮಾಣವಲ್ಲ; ಅವನಿಂದ ಸಮಾಜಕ್ಕೆ ಏನು ದೊರೆತಿದೆ ಎನ್ನುವುದರಿಂದ.

ತಾನು ಮಾಡುವ ಕಾರ್ಯದಲ್ಲಿ ದೊರೆಯುವ ತೃಪ್ತಿ ಮತ್ತು ಆನಂದ ಹಾಗೂ ಅಂಥ ಕಾರ್ಯದಿಂದ ಸಮಾಜಕ್ಕೆ

ಪ್ರಯೋಜನವಾಗುತ್ತದೆ ಎಂಬ ವಿಶ್ವಾಸಗಳೇ ಮನುಷ್ಯ
ಚಟುವಟಿಕೆಗಳಿಗೆ ಪ್ರೇರಣೆ ಯಾಗಬೇಕು. . . . ಈ ಬಗೆಯ ಶ್ರೇ
ಭಾವನೆಯನ್ನು ಪ್ರಚೋದಿಸುವುದು ವ್ಯಕ್ತಿಯ ಸ್ವಾರ್ಥಪರತೆಯನ
ಪ್ರಚೋದಿಸುವುದಕ್ಕಿಂತ ಸುಲಭ. ಭಯ ಹುಟ್ಟಿಸಿ ಕೆಲ
ಮಾಡಿಸುವುದಕ್ಕಿಂತಲೂ ಸುಲಭ. ಮಗುವಿಗೆ ಆಟದಲ್ಲಿರು
ಸ್ವಾಭಾವಿಕ ಒಲವನ್ನೂ, ಹಿರಿಯರಿಂದ ಮೆಚ್ಚಿಕೆ ಪಡೆಯಬೇಕೆಂ
ಅದರ ಸ್ವಾಭಾವಿಕ ಆಸೆಯನ್ನೂ ಉಪಯೋಗಿಸಿಕೊಂಡು ಉದಾ
ಭಾವನೆಗಳನ್ನು ಬೆಳೆಸಬೇಕೆಂಬುದು ನನ್ನ ಆಶಯ. ಮಗುವಿ
ಸ್ವಾಭಾವಿಕವಾಗಿರುವ ಈ ಆಸೆಗಳನ್ನು ಪೋಷಿಸಿ ಅದರ ಮನಸ್ಸನ
ಸಮಾಜಕ್ಕೆ ಹಿತವನ್ನುಂಟುಮಾಡುವ ಚಟುವಟಿಕೆಗಳ ಕಡೆ
ಹರಿಸಬೇಕು. ಇಂಥ ಚಟುವಟಿಕೆಗಳಲ್ಲಿ ಮಗು ಪಡೆಯುವ ಜಂ
ಮತ್ತು ಆಗ ಅದಕ್ಕೆ ಸಿಕ್ಕುವ ಮೆಚ್ಚುಗೆ ಒಳ್ಳೆಯ ಶಿಕ್ಷಣ
ತಳಹದಿಯಾಗುತ್ತದೆ. ಈ ಬಗೆಯ ಶಿಕ್ಷಣವನ್ನು ಶಾಲೆಯು ಕೊಟ್ಟ
ಅದು ಮುಂದಿನ ಜನಾಂಗದಿಂದ ಗೌರವ ಮನ್ನಣೆಗಳನ
ಪಡೆಯುತ್ತದೆ. ಅಂಥ ಶಾಲೆಯು ಮಕ್ಕಳಿಂದ ಮಾಡಿಸು
ಪ್ರತಿಯೊಂದು ಕೆಲಸವೂ ಅವರಿಗೆ ಸಂತೋಷವನ್ನುಂಟುಮಾಡುತ್ತ
ರಜೆಗಿಂತ ಶಾಲೆಯನ್ನು ಹೆಚ್ಚಾಗಿ ಪ್ರೀತಿಸಿದ ಮಕ್ಕಳನ್ನು ನಾ
ನೋಡಿದ್ದೇನೆ'' ಎಂದು ಬರೆಯುತ್ತಾರೆ ಐನ್‌ಸ್ಟೈನ್‌ರು.

ಶಿಕ್ಷಕ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ತಾ
ಬೋಧಿಸಬೇಕಾದ ವಿಷಯವನ್ನು ಆರಿಸಿಕೊಳ್ಳುವುದರ
ಬೋಧಿಸಲು ಅನುಸರಿಸಬೇಕಾದ ವಿಧಾನದಲ್ಲಿ ಶಿಕ್ಷಕನಿ
ಸ್ವಾತಂತ್ರ್ಯವಿರಬೇಕು. ತನ್ನದೇ ಆದ ಸಾಮ್ರಾಜ್ಯದಲ್ಲಿ ಶಿಕ್ಷಕ
ಗೌರವಾನ್ವಿತನಾದ ಕಲೆಗಾರನಂತಾದರೆ ಉತ್ಕೃಷ್ಟ ಶಿಕ್ಷಣ ಕೊಡ
ಸಾಧ್ಯ. ಪ್ರತಿಯೊಂದು ಸಮಾಜವೂ ಅದರ ಯೋಗಕ್ಷೇಮದ
ನಿರತನಾದ ಪ್ರತಿಯೊಬ್ಬನು ಚೆನ್ನಾಗಿ ಜೀವಿಸಲು ಅಗತ್ಯವಾದ

ಪ್ರತಿಫಲವನ್ನು ಕೊಡಲೇಬೇಕು. ಸಮಾಜಕ್ಕೆ ಸಲ್ಲಿಸುವ ಸೇವೆಯಿಂದ, ಂಥ ಸೇವೆಯನ್ನು ಸಲಿಸುವವರಿಗೆ ಆತ್ಮತೃಪ್ತಿ ದೊರಕುತ್ತದೆ. ಆದರೆ ತ್ಮತೃಪ್ತಿಯಷ್ಟೇ ಅವನ ಮಕ್ಕಳ ಹೊಟ್ಟೆ ತುಂಬುವುದಿಲ್ಲ ಎಂದು ಳಿಸಿ; ಶಿಕ್ಷಕರಿಗೆ ಉತ್ತಮವಾದ ಪ್ರತಿಫಲ ನೀಡಬೇಕೆಂಬ ಅಭಿಪ್ರಾಯ ಕ್ತಪಡಿಸುತ್ತಾರೆ.

ಶಾಲೆಗಳಲ್ಲಿ ಬೋಧಿಸಬೇಕಾದ ವಿಷಯ ಮತ್ತು ೋಧನಾಕ್ರಮ ಶಿಕ್ಷಣದ ಪ್ರಧಾನವಾದ ಅಂಶಗಳಲ್ಲ. ಮಗುವಿನ ುಂದಿನ ಜೀವನಕ್ಕೆ ಪ್ರಯೋಜನವಾಗುವಂಥ ವಿಶೇಷ ಜ್ಞಾನವನ್ನು; ುಂದೆ ಉಪಯೋಗಕ್ಕೆ ಬರುವಂಥ ಕುಶಲತೆಗಳನ್ನು ಶಾಲೆಯಲ್ಲಿ ೋಧಿಸಬೇಕೆಂಬ ಅಭಿಪ್ರಾಯವನ್ನು ಐನ್‌ಸ್ಟೈನ್‌ರು ರೋಧಿಸುತ್ತಾರೆ. ಜೀವನದಲ್ಲಿ ಎದುರಿಸಬೇಕಾಗಿರುವ ಸಮಸ್ಯೆಗಳು ಹುವಿಧವಾಗಿರುವುದರಿಂದ; ನಿರ್ದಿಷ್ಟವಾದ ಒಂದು ಕ್ಷೇತ್ರದಲ್ಲಿ ಾತ್ರ ಕೊಡುವ ಶಿಕ್ಷಣವು ಆ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಹಾಯಕವಾಗುವುದಿಲ್ಲ. ಇದರ ಜೊತೆಗೆ ತನ್ನದೇ ಆದ ್ಯಕ್ತಿತ್ವವಿರುವ ಮಗುವನ್ನು ಒಂದು ನಿರ್ಜೀವ ಉಪಕರಣದಂತೆ ಗೆಯುವುದನ್ನು ಅವರು ಆಕ್ಷೇಪಿಸುತ್ತಾರೆ. ಶಾಲೆಯನ್ನು ಬಿಡುವ ೊತ್ತಿಗೆ ವಿದ್ಯಾರ್ಥಿಯ ಎಲ್ಲ ಸುಪ್ತ ಗುಣಗಳೂ ವಿಕಾಸಗೊಂಡು ವನ ವ್ಯಕ್ತಿತ್ವ ಪೂರ್ಣವಾಗಿರಬೇಕು. ಒಂದು ನಿರ್ದಿಷ್ಟ ಕಸುಬನ್ನೇ ಲಿಸುವ ತಾಂತ್ರಿಕ ಶಿಕ್ಷಣ ಶಾಲೆಗಳೂ ಈ ಸತ್ಯವನ್ನು ರಿತುಕೊಳ್ಳಬೇಕು. ಸ್ವತಂತ್ರವಾಗಿ ವಿಚಾರಮಾಡಬಲ್ಲ ಾಮರ್ಥ್ಯವನ್ನು ಮಗುವಿನಲ್ಲಿ ಬೆಳೆಸುವುದೇ ಶಿಕ್ಷಣದ ಬಹು ುಖ್ಯವಾದ ಗುರಿಯಾಗಿರಬೇಕೇ ಹೊರತು ಒಂದು ವಿಶಿಷ್ಟವಾದ ುಶಲತೆಯಲ್ಲಿ ಅವನನ್ನು ಪ್ರವೀಣನನ್ನಾಗಿ ಮಾಡುವುದಲ್ಲ. ಂಡವಾಳ ಪದ್ಧತಿಯ ಪರಿಣಾಮದಿಂದ ವಿದ್ಯಾರ್ಥಿಗಳ ಮಧ್ಯೆ ಅತಿ ಟ್ಟ ಸ್ಪರ್ಧಾ ಮನೋಭಾವವನ್ನು ಉಂಟುಮಾಡಿರುವ ಶಿಕ್ಷಣ ತನ್ನ

ಗುರಿಯನ್ನು ಬದಲಾಯಿಸಿಕೊಂಡು 'ಶಕ್ತಿ ಮತ್ತು ಗೆಲುವಿನ ವೈಭವವನ್ನು ತೊಡೆದು ಹಾಕಿ 'ಟೊಣೆಗಾರಿಕೆ'ಯ ಪ್ರಜ್ಞೆಯನ್ನು ಮಕ್ಕಳಲ್ಲಿ ಬೆಳೆಸಬೇಕೆಂದು ಐನ್‌ಸ್ಟೈನ್‌ರು ಬಯಸುತ್ತಾರೆ.

ದೈವಾಂಶ ತಿರಸ್ಕರಿಸಿದ್ದು ಧರ್ಮ

ವಿಜ್ಞಾನಿಗಳೆಂದರೆ ಸಾಮಾನ್ಯವಾಗಿ ನಾಲ್ಕು ಗೋಡೆಗಳ ಮ ಸೇರಿಕೊಂಡು ಭೌತವಸ್ತುಗಳೊಂದಿಗೆ ಪ್ರಯೋಗಗಳಲ್ಲಿ ತಲ್ಲೀನರಾ ಕಾರ್ಯಾಕಾರಣ ಸಂಬಂಧಗಳನ್ನು ಬಸಿಯುತ್ತ; ಉಳಿದೆಲ್ಲ ಜ್ಞಾ ಕ್ಷೇತ್ರಗಳ ಸಂಪರ್ಕದಿಂದ ದೂರವಿದ್ದು ಕೊನೆಗೆ ತಮ್ಮ ಐಹಿಕ ಸುಖ ಸಂತೋಷಗಳಿಂದಲೂ ವಂಚಿತರಾಗುವುದು ಸ್ವಾಭಾವಿಕ. ಆದ ಆಲ್ಬರ್ಟ್ ಐನ್‌ಸ್ಟೈನ್‌ರ ಬದುಕು ಹಾಗಲ್ಲ. 'ಆಡು ಮುಟ್ಟ ಸೊಪ್ಪಿಲ್ಲ' ಎನ್ನುವಂತೆ ಅವರು ಕೈಯ್ಯಾಡಿಸದ ಕ್ಷೇತ್ರಗಳಿಲ್ಲ. ವಿಜ್ಞಾ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳಂತೆ ಧರ್ಮ ದೇವರು, ಆಧ್ಯಾತ್ಮ'ಮುಂತಾದ ಪಾರಮಾರ್ಥಿಕ ಕ್ಷೇತ್ರಗಳಿಗೂ ತವ ಬರವಣಿಗೆಗಳ ಮೂಲಕ ಕೊಡುಗೆ ನೀಡಿದ್ದಾರೆ.

ಆಧ್ಯಾತ್ಮ ಬೆಳವಣಿಗೆ ಮತ್ತು ಅದರ ಕ್ರಿಯಾಶೀಲತೆಯನ ಅರ್ಥಮಾಡಿಕೊಳ್ಳಬೇಕಾದರೆ, ಮಾನವ ಪೀಳಿಗೆ ನಡೆಸಿ ಪ್ರತಿಯೊಂದು ಚಿಂತನೆಯ ಬಗ್ಗೆ ಹಾಗೂ ಅದರಿಂದ ಪಡೆದ ಅನುಭವ ಬಗ್ಗೆ ಮತ್ತು ನೋವಿನ ನಿವಾರಣೆಯ ಬಗ್ಗೆ ಅರ್ಥಮಾಡಿಕೊಳ್ಳ ಬೇಕು. ಮಾನವ ಪ್ರಯತ್ನ ಮತ್ತು ಸೃಜನಶೀಲತೆಗಳ ಹಿಂದೆ ಇರು ಪ್ರೇರಕ ಶಕ್ತಿ ಎಂದರೆ ''ಅನುಭವ ಮತ್ತು ಆಸೆ''.

ಆಲ್ಬರ್ಟ್ ಐನ್‌ಸ್ಟೈನ್‌ರು ಧರ್ಮ ಹಾಗೂ ಧಾರ್ಮಿ ಭಾವನೆಗಳ ಹುಟ್ಟಿನ ಬಗ್ಗೆ ತಿಳಿಸುತ್ತಾ, '' ಮಾನವನಿಗೆ ಹಸಿವಿನ ಬ ಕಾಡು ಪ್ರಾಣಿಗಳ ಬಗ್ಗೆ, ರೋಗಗಳ ಬಗ್ಗೆ, ಸಾವಿನ ಬಗ್ಗೆ ಹಿ ಎಲ್ಲವುಗಳ ಬಗ್ಗೆ ಇರುವ ಭಯದಿಂದ ಅವನಲ್ಲಿ ಧಾರ್ಮಿ

ವನೆಗಳು ಉಂಟಾಗಲು ಕಾರಣವಾಯಿತು. ಇದಕ್ಕಾಗಿ ಪ್ರಾಕೃತಿಕ ಬಂಧಗಳನ್ನು ಅರ್ಥಮಾಡಿಕೊಳ್ಳುವ ಕ್ರಿಯೆ ಅವನಲ್ಲಿ ಬಹಳ ಮೆಯಾಯಿತು. ಆದುದರಿಂದ ಮಾನವಬುದ್ಧಿ ಭ್ರಮಾತ್ಮಕ ತಿಯನ್ನು ಸೃಷ್ಟಿ ಮಾಡಿಕೊಂಡು ಭಯದಿಂದ ಕೂಡಿದ ಸಂಕಲ್ಪಗಳು ತ್ತು ಕ್ರಿಯೆಗಳನ್ನು ಅವಲಂಬಿಸಲು ಅನುವಾಯಿತು. ಹಾಗೆಯೇ ದೆಲ್ಲವುಗಳ ಒಲವು ಗಳಿಸವುದಕ್ಕಾಗಿ ದೇವರಿಗೆ ಬಲಿ ಕೊಡುವುದು ಇಂತಾದ ಕ್ರಿಯೆಗಳನ್ನು ಪ್ರಾರಂಭಿಸಿದನಂತರ; ಪೀಳಿಗೆಯಿಂದ ಳಿಗೆಗೆ ಈ ಸಂಪ್ರದಾಯವನ್ನು ಮುಂದುವರಿಸಿದ ಹಾಗೂ ಸಾವಿಗೆ ರಣವಾದ ಈ ಎಲ್ಲ ಶಕ್ತಿಗಳನ್ನೂ ಒಲಿಸಿಕೊಳ್ಳಲು ಪ್ರಾರಂಭಿಸಿದ. ಈ ಷ್ಟಿಯಲ್ಲಿ ನಾನು ಹೇಳುವುದೇನೆಂದರೆ; ಧರ್ಮ ಭಯದಿಂದ ಂಟಾದದ್ದು'' ಎಂದು ಅಭಿಪ್ರಾಯಪಡುತ್ತಾರೆ.

ಭಯದಿಂದ ರೂಪುಗೊಂಡ ಧರ್ಮದಲ್ಲಿ ಪುರೋಹಿತ ವರ್ಗ ಟ್ಟಲು ಕಾರಣವಾಗಿ; ಪ್ರಾಕೃತಿಕ ಶಕ್ತಿಗಳು ಹಾಗೂ ಮಾನವನ ಮಧ್ಯೆ ಪುರೋಹಿತ ವರ್ಗ ಮಧ್ಯವರ್ತಿಯಾಗಿ ನಿಂತು ನಾಯಕತ್ವ ಹಿಸಿತ್ತು. ಅನೇಕ ಸಂದರ್ಭಗಳಲ್ಲಿ ಈ ಜನ ತಮ್ಮ ಸ್ವಾರ್ಥಕ್ಕಾಗಿ ಧಿಕಾರಶಾಹಿಯೊಂದಿಗೆ ಶಾಮೀಲಾಗಿ ಧರ್ಮವಲ್ಲದ ರ್ಯಗಳನ್ನು ಮಾಡಿರುವುದು ಕಂಡುಬಂದಿದೆ.

ಇಂತಹ ಧರ್ಮ ಗಟ್ಟಿಯಾಗಿ ಉಳಿದು ಮುಂದುವರಿಯಲು ನೇಕ ಸಾಮಾಜಿಕ ಪ್ರೇರಣೆಗಳೂ ಕಾರಣ. ಮಾನವನ ಸುತ್ತೂ ಒಂದು ರಿಮಿತ ವ್ಯಾಪ್ತಿಯಲ್ಲಿ ಜೀವಿಸಿದ್ದ ಅವನ ತಂದೆ, ತಾಯಿ, ಮಕ್ಕಳ ಜೊತೆಗೆ ಆ ಗುಂಪಿನ ನಾಯಕನೆನಿಸಿಕೊಂಡ ಎಲ್ಲರೂ ತಪ್ಪು ಮಾಡುತ್ತಿದ್ದದ್ದು ಹಾಗೂ ಸಾವನ್ನಪ್ಪುತ್ತಿದ್ದದ್ದು ಮುಖ್ಯ ಕಾರಣ. ಎಲ್ಲ ಸಂದರ್ಭಗಳಲ್ಲಿ ಪ್ರೀತಿಯಿಂದ ಕೂಡಿದ ಮಾರ್ಗದರ್ಶನ ಇರಬೇಕಾದ ಸಮಾಜದಲ್ಲಿ ವಿಧಿಯ ಕಲ್ಪನೆ ಉಂಟಾಯಿತು. ಆದುದರಿಂದ ದುಃಖ

ಹಾಗೂ ಅತೃಪ್ತಿಗಳಲ್ಲಿ ನೆಮ್ಮದಿ ಕೊಡುವವನು ಹಾಗೂ ಮರ ಹೊಂದಿದವರ ಆತ್ಮಗಳನ್ನು ನಿಯಂತ್ರಿಸುವವನು ದೇವರು ಎನ್ನು ಕಲ್ಪನೆ ಸಮಾಜದಲ್ಲಿ ಉಂಟಾಗಲು ಕಾರಣವಾಯಿತು ಎಂ ಐನ್‌ಸ್ಟೈನ್‌ರು ಅಭಿಪ್ರಾಯಪಡುತ್ತಾರೆ.

ಆಲ್ಬರ್ಟ್ ಐನ್‌ಸ್ಟೈನ್‌ರು ಇನ್ನೊಂದು ರೀತಿಯ ಧರ್ಮವ ಗುರುತುಮಾಡುತ್ತಾರೆ. ಅದೆಂದರೆ 'ನೀತಿಯುಕ್ತ ಧರ್ಮ'. ಅವ ಇದನ್ನು ಗುರ್ತಿಸಲು ಮುಖ್ಯ ಆಧಾರವೆಂದರೆ ಯಹೂದಿ ಧರ ಗ್ರಂಥಗಳು. ಈ ಗ್ರಂಥಗಳಲ್ಲಿ ಭಯಯುಕ್ತ ಧರ್ಮದಿಂದ ಹಿಡಿ ನೀತಿಯುಕ್ತ ಧರ್ಮದವರೆಗಿನ ಧರ್ಮದ ಬೆಳವಣಿಗೆಯ ವಿವರಿಸಲಾಗಿದೆ.

ಎಲ್ಲ ನಾಗರೀಕ ಜನಾಂಗದ ಧರ್ಮ ಭಯಕ್ಕೆ ಬದಲಾಗಿ ನಿ ಆಧಾರದ ಮೇಲೆ ನಿಂತಿರುತ್ತದೆ. ಇಂತಹ ನೀತಿಯುಕ್ತ ಧರ ಏಷಿಯಾ ಮುಂತಾದ ಪೂರ್ವ ದೇಶಗಳ ಜನತೆಯಲ್ಲಿ ಆಗ ರೂಪುಗೊಂಡು ಉಳಿದುಬಂದಿದೆ. ಈ ಧರ್ಮವನ್ನು ಮನುಷ್ಯ ತ ರಕ್ಷಣೆಗಾಗಿ ಮಾಡಿಕೊಂಡ ಪಕ್ಷಪಾತವೆನಿಸುತ್ತದೆ. ಆದರೆ ವಾಸ್ತ ಸಂಗತಿಯೆಂದರೆ; ಎಲ್ಲ ಧರ್ಮಗಳೂ ಸ್ವಲ್ಪ ಹೆಚ್ಚು ಕಡಿಮೆ ಈ ಎರಡ ರೀತಿಯ ಧರ್ಮಗಳ ಮಿಶ್ರಣ ಎನ್ನುವುದು. ಈ ಎಲ್ಲ ವಿಧ ಸಾಮಾನ್ಯ ರೂಪವಾಗಿ ಭಗವಂತನನ್ನು ಮಾನವ ರೂಪ ಮ ಮಾನವ ಗುಣಗಳುಳ್ಳವನಂತೆ ಕಲ್ಪಿಸಿಕೊಳ್ಳಲು ಕಾರಣವಾಗಿ ಎಲ್ಲೋ ಕೆಲವರು ಮಾತ್ರ ಈ ಹಂತವನ್ನು ದಾಟಿ ತಮ್ಮ ಬೌ ಪ್ರಬುದ್ಧತೆಯನ್ನು ಪ್ರದರ್ಶಿಸಿರುವುದು ಅಷ್ಟೇ ಸತ್ಯಸಂಗತಿಯಾಗಿ

ಆಲ್ಬರ್ಟ್ ಐನ್‌ಸ್ಟೈನ್‌ರು ಈ ಎರಡೂ ಹಂತಗಳನ್ನು ದಾಟ ಎಲ್ಲರಿಗೂ ಸಂಬಂಧಿಸಿದ ಹಾಗೂ ವಿರಳವಾಗಿ ಶುದ್ಧ ರೂಪದ ಕಾಣುವ ಮತ್ತೊಂದು ಮೂರನೇ ಹಂತದ ಧರ್ಮದ ಅನುಭವವ

ರ್ತಿಸಿ ಅದನ್ನು "ವಿಶ್ವಧರ್ಮದ ಅನುಭವ" ಎಂದು ಕರೆಯುತ್ತಾರೆ.

ಮಾನವ ತನ್ನ ಘನತೆಗಾಗಿ, ಪ್ರಾಪಂಚಿಕ ಆಸೆ ಮತ್ತು ರಿಗಳಿಗಾಗಿ ನಿರರ್ಥಕ ಬದುಕು ನಡೆಸುತ್ತಾನೆ. ಭಗವಂತನ ಕಲ್ಪನೆಯೇ ಲ್ಲದ ಜನಕ್ಕೆ ವಿಶ್ವಧರ್ಮ ಅನುಭವವನ್ನು ಅರ್ಥೈಸುವುದು ಬಹಳ ಪ್ರಸದಾಯಕ ಕೆಲಸ. ವಿಶ್ವಧರ್ಮದ ಅನುಭವ ಎನ್ನುವುದು ವಿಕಾಸದ ಪ್ರಾರಂಭಿಕ ಹಂತದಲ್ಲಿ ಆಗಲೇ ಕಂಡುಬಂದಿರುವುದನ್ನು ಗುರ್ತಿಸಿದ ನ್‌ಸ್ಟೈನ್‌ರು ಡೇವಿಡ್ಡನ ಪ್ರಾರ್ಥನಾ ಗೀತೆಗಳನ್ನು, ಬೌದ್ಧಧರ್ಮವನ್ನು, ಸ್ಕೋಪೆನಾರ್‌ನ ಬರವಣಿಗೆಗಳನ್ನು ಉದಾಹರಿಸುತ್ತಾರೆ.

ಧಾರ್ಮಿಕ ಉನ್ನತಿಯ ಎಲ್ಲ ಕಾಲಗಳಲ್ಲಿ ತತ್ವಸೂತ್ರಗಳಾಗಲೀ ಥವ ದೇವರ ಕಲ್ಪನೆಯಾಗಲೀ ಮನುಷ್ಯನಲ್ಲಿ ಇರಲಿಲ್ಲ ಹಾಗೂ ಈ ಲ್ಲ ಸೂತ್ರಗಳ ಕೇಂದ್ರಗಳಾಗಿ ಚರ್ಚ್‌ಗಳಾಗಲೀ, ಡಿ-ಗೋಪುರಗಲಾಗಲೀ ಇರಲಿಲ್ಲ. ಸಂಪ್ರದಾಯರಹಿತವಾದ ಪ್ರತಿ ಲದಲ್ಲಿ ಇಂತಹ ಉನ್ನತ ಧಾರ್ಮಿಕ ಅನುಭವಗಳನ್ನು ಹೊಂದಿದ ನರಿಂದ ಸಮಾಜ ತುಂಬಿತ್ತು. ಅನೇಕ ವಿದ್ಯಮಾನಗಳಲ್ಲಿ ಮಕಾಲೀನ ಜನರು ಇವರನ್ನು 'ನಿರೀಶ್ವರವಾದಿಗಳು' ಎಂದು; ಕೆಲವು ಳೆ 'ಸಂತರು' ಎಂಬುದಾಗಿ ಕರೆಯುತ್ತಿದ್ದರೆಂದು ಐನ್‌ಸ್ಟೈನ್‌ರು ಿಸಿ; ಡೆಮಾಕ್ರಿಟಸ್, ಅಸಿಸಿಯ ಪ್ರಾನ್ಸಿಸ್ ಹಾಗೂ ಸ್ಪಿನೋಜ ಬಂತಾದ ಸಮಾನ ಮನಸ್ಕ ವ್ಯಕ್ತಿಗಳ ಹೆಸರುಗಳನ್ನು ಲ್ಲೇಖಿಸುತ್ತಾರೆ. ವಿಶ್ವಧರ್ಮವನ್ನು ಪಡೆಯಲಿಚ್ಛಿಸುವ ಜನ ಕಲೆ ುತ್ತು ವಿಜ್ಞಾನಗಳ ಬಗ್ಗೆ ಸ್ಪಷ್ಟವಾದ ಜಾಗೃತಿಯನ್ನು ಹೊಂದಿರಬೇಕು. ಆಗ ಅಂತಹ ಧರ್ಮ ಮೂಢನಂಬಿಕೆಗಳಿಂದ ದೂರವಿರುತ್ತದೆ ಎನ್ನುವುದು ಐನ್‌ಸ್ಟೈನ್‌ರ ಸ್ಪಷ್ಟ ಅಭಿಪ್ರಾಯ.

ವಿಜ್ಞಾನ ಹಾಗೂ ಧರ್ಮಗಳ ಸಂಬಂಧವನ್ನು ಒಬ್ಬ ಸಾಮಾನ್ಯ ಮನುಷ್ಯ ಅವುಗಳ ರೂಢಿ ಅರ್ಥದ ಮೇಲೆ ಹಾಗೂ ಚಾರಿತ್ರಿಕ ಅಂಶಗಳ

ಆಧಾರದ ಮೇಲೆ ಅವಲೋಕಿಸಿದರೆ; ಇವೆರಡೂ ವಿರೋಧಿ ಎನ್ನುವ ತೀರ್ಮಾನಕ್ಕೆ ಬರುತ್ತಾನೆ. ಆದರೆ ವಿಶ್ವದಲ್ಲಿ ನಡೆಯ ಕ್ರಿಯೆಗಳನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯಕಾ ಸಂಬಂಧಗಳನ್ನು ಅರಿತಿರುವ ವ್ಯಕ್ತಿಗೆ ಈ ವೈರುಧ್ಯ ಸುಖ ಮತ್ತು ದು ಕೊಡುವ ಅತೀಂದ್ರಿಯ ಶಕ್ತಿಯಾಗಿ ಕಂಡುಬರುವುದಿಲ್ಲ. ಮಾನ ಸುಖ ಹಾಗೂ ದುಃಖಕ್ಕೆ ಅವನ ಕ್ರಿಯೆಗಳು ಕಾರಣ. ಈ ಕ್ರಿಯೆಗಳ ಅವನ ಬಾಹ್ಯ ಹಾಗೂ ಆಂತರಿಕ ಅವಶ್ಯಕತೆಗಳು ನಿರ್ಧರಿಸುತ್ತವೆ. ಮನುಷ್ಯನ ನೀತಿಯುಕ್ತ ನಡವಳಿಕೆ ಯಾವುದೇ ಧಾರ್ಮಿಕ ಆಧಾರಕ್ಕೆ ಅದು ಕರುಣೆ, ಶಿಕ್ಷಣ ಹಾಗೂ ಸಾಮಾಜಿಕ ಸಂಬಂಧಗಳು ಮ ಅವಶ್ಯಕತೆಗಳನ್ನು ಆಧಾರವಾಗಿಟ್ಟುಕೊಂಡಿರಬೇ ಮರಣಾನಂತರದ ಸ್ವರ್ಗ ಮತ್ತು ನರಕದ ಕಲ್ಪನೆಯ ಭ ಮನುಷ್ಯನನ್ನು ದುರ್ಬಲಗೊಳಿಸುತ್ತದೆ. ಈ ದುರ್ಬಲಗೊಳಿಸ ಕ್ರಿಯೆಯನ್ನು ಚರ್ಚ್ ಮುಂತಾದ ಮತ-ಮಾನ್ಯಗಳು ವ್ಯವಸ್ಥಿತವ ಬಹಳ ಹಿಂದಿನಿಂದಲೂ ವಿಜ್ಞಾನದ ವಿರುದ್ಧ ಹೋರಾಡುವು ಮೂಲಕ; ವಿಜ್ಞಾನದಲ್ಲಿ ನಂಬಿಕೆ ಇಟ್ಟವರನ್ನು ಪೀಡಿಸಿ ಕಿರುಕ ಕೊಡುವುದರ ಮೂಲಕ ಸಾಗಿ ಬಂದಿರುವುದನ್ನು ಮನಗಾಣಬಹು ವೈಜ್ಞಾನಿಕ ಸಂಶೋಧನೆಗೆ ಬಹಳ ಶಕ್ತಿಯುತ ಹಾಗೂ ಶ್ರೇಷ್ಠ ಪ್ರೇ ಎಂದರೆ ವಿಶ್ವಧರ್ಮದ ಅನುಭವ, ಧರ್ಮ ಅಥವ ನಿ ಎನ್ನುವುದರಲ್ಲಿ ದೈವಾಂಶವೆನ್ನುವುದು ಯಾವುದೂ ಇಲ್ಲ. ಅ ಪೂರ್ಣವಾಗಿ ಮನುಷ್ಯತ್ವಕ್ಕೆ ಸಂಬಂಧಿಸಿದ್ದು ಎನ್ನುವುದು ಐನ್‌ಸ್ಟೈನ ಸ್ಪಷ್ಟ ಅಭಿಪ್ರಾಯ

ಇನ್ನಷ್ಟು ಕಿರಣಗಳು

ಅಮೆರಿಕಾದ ನ್ಯೂಯಾರ್ಕ್ ನಗರದ 'ನೀತಿ ಸಂಸ್ಕೃತಿ ಸಂಘ ಎಪ್ಪತ್ತೈದನೇ ವಾರ್ಷಿಕ ಅಧಿವೇಶನ ನಡೆದ ಸಂದರ್ಭಕ್ಕಾಗಿ ಆಲ್ಬ ಐನ್‌ಸ್ಟೈನ್‌ರು ೧೯೫೧ರಲ್ಲಿ ಬರೆದ ಲೇಖನದಲ್ಲಿ ನೀತಿ ಸಂಸ ಕುರಿತು ಬರೆಯುತ್ತ; ಇಂದಿನ ಮಾನವ ಬದುಕಿನ ನೈತಿಕತೆ ಎಪ್ಪತ್ತೈ

ವರ್ಷಗಳ ಹಿಂದೆ ಇದ್ದದ್ದಕ್ಕಿಂತ ತೃಪ್ತಿಕರವಾಗಿದೆ. ಪಕ್ಷಪಾತತನ ಹಾಗೂ ಮೂಢನಂಬಿಕೆಗಳನ್ನು ಗೆದ್ದ ವೈಜ್ಞಾನಿಕ ಸತ್ಯ ಈ ಕಾಲದ ದೃಷ್ಟಿಯಾಗಿದೆ. ಇದೆಲ್ಲ ಉತ್ತಮ ಸಮಾಜದ ಪ್ರಮುಖ ಹಾಗೂ ಯೋಗ್ಯ ಪ್ರಯತ್ನದಿಂದ ಉಂಟಾದದ್ದು. ಅಲ್ಲಿಂದ ಇಲ್ಲಿಯವರೆಗೆ ಸಾಹಿತ್ಯ ಹಾಗೂ ನಾಟಕ ಕಲೆಯ ಮೂಲಕ ಈ ದೃಷ್ಟಿ ಪ್ರಸಾರಗೊಳ್ಳುತ್ತಲೇ ಬಂದಿದೆ. ಅಡೆ - ತಡೆಗಳನ್ನು ನಿವಾರಿಸಿ ವೈಯಕ್ತಿಕ ಹಾಗೂ ಸಾಮಾಜಿಕ ಬದುಕನ್ನು ಶ್ರೇಷ್ಠಗೊಳಿಸಿದ್ದು ಇದೇ ದೃಷ್ಟಿಯೇ.

ಹೆಚ್ಚು ಕ್ರಿಯಾಶೀಲವಾಗಿರುವ ಇಂದಿನ ಮನುಷ್ಯನ ಸಾಮಾನ್ಯ ಬದುಕಿನ ಪ್ರಾಮುಖ್ಯತೆ ನೈತಿಕ ಸ್ವರೂಪ ಪಡೆದಿರುತ್ತದೆ. ಇಲ್ಲಿ ಯಾವ ವಿಜ್ಞಾನವೂ ಕೆಲಸಮಾಡುವುದಿಲ್ಲ. ಶುದ್ಧವಾದ ಬುದ್ಧಿವಂತ ನಡವಳಿಕೆಯ ಮೇಲಿನ, ಕೆಲವುವೇಳೆ ಹೆಚ್ಚು ಕ್ರಿಯಾತ್ಮಕವಾಗಿರುವ ಘಟನೆಗಳಮೇಲಿನ ಅಥವಾ ಶಿಕ್ಷಣದ ಮೇಲಿನ ಒತ್ತಡ ನೈತಿಕ ಮೌಲ್ಯಗಳು ಹಾಳಾಗಲು ಕಾರಣವಾಗಿದೆ. ಸತ್ಯನಿಷ್ಠ ವಿಷಯ ಯಾವಾಗಲೂ ಮಾನವಸಂಬಂಧಗಳನ್ನು ಕಡಿಯುತ್ತದೆ. ಆದುದರಿಂದ ಸಹಜೀವಿಗಳ ಬಗ್ಗೆ ಅರ್ಥಮಾಡಿಕೊಳ್ಳುವುದು ಅವಶ್ಯಕ. ಸುಖ ಮತ್ತು ದುಃಖ ಎರಡರಲ್ಲೂ ದಯಾಪರ ಅನುಭವ ಇದ್ದರೆ ಆಗ ಸಹಜೀವಿಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಮೂಢನಂಬಿಕೆ ಹಾಗೂ ಧಾರ್ಮಿಕತೆಯಿಂದ ಹೊರತಾದ ನೈತಿಕತೆಯನ್ನು ರೂಢಿಸಿಕೊಳ್ಳಬಹುದು. ನೀತಿಸಂಸ್ಕೃತಿ ಇಲ್ಲದೆ ಮಾನವೀಯತೆಗೆ ಮುಕ್ತಿ ಇಲ್ಲ ಎಂದು ಅವರು ಅಭಿಪ್ರಾಯಪಡುತ್ತಾರೆ.

* * *

ಐನ್‌ಸ್ಟೈನ್‌ರು ವಿಜ್ಞಾನದ ಬಗ್ಗೆ ಬರೆಯುತ್ತ ಕಾಲ ಮತ್ತು ಅವಕಾಶದಲ್ಲಿ ವಸ್ತುಗಳ ಮತ್ತು ಘಟನೆಗಳ ಪರಸ್ಪರ ಸಂಬಂಧಗಳಿ ಸಂಬಂಧಿಸಿದ ನಿಯಮಗಳನ್ನು ಕಂಡುಹಿಡಿಯುವುದೇ ವಿಜ್ಞಾನದ ಗುರಿ. ವ್ಯವಸ್ಥಿತವಾದ ಯೋಚನಾಕ್ರಮದಿಂದ ಈ ವಿಶ್ವದಲ್ಲಿ ಗೋಚರವಾಗುವ ಅದ್ಭುತಗಳನ್ನು ಶತಮಾನಗಳಷ್ಟು ಹಳೆಯದಾ ವಿಜ್ಞಾನವು ಪ್ರಯತ್ನಪೂರಕವಾಗಿ ಒಂದು ಗೂಡಿಸುತ್ತದೆ. ಅಂದ ಅಸ್ತಿತ್ವದಲ್ಲಿರುವುದನ್ನು ಪುನರ್ ನಿರ್ಮಾಣಮಾಡುವ ಕಲ್ಪನಾ ವಿಧಾನ, 'ಏನಿದೆ' ಎನುವುದನ್ನು ಮಾತ್ರ ವಿಜ್ಞಾ ಕಂಡುಹಿಡಿಯುತ್ತದೆ; ಆದರೆ 'ಏನಿರಬೇಕಿತ್ತು' ಎನ್ನುವುದನ್ನು ಮಾತ್ರ ಅಲ್ಲ. ವಿಜ್ಞಾನ ಕ್ಷೇತ್ರದಿಂದ ಹೊರಗುಳಿದ ಮೌಲ್ಯಗಳ ಬಗೆಗಿ ತೀರ್ಮಾನಗಳು ಹಾಗೇ ಉಳಿಯುತ್ತವೆ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಉತ್ಪಾದನೆ ಹಾಗೂ ಕೆಲಸದ ಬಗ್ಗೆ ಬರೆಯುತ್ತ; ಪ್ರಪಂಚ ಇಂದಿನ ಎಲ್ಲ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ; ದೊರೆಯು ಎಲ್ಲ ಶ್ರಮವನ್ನೂ ಒದಗಿಸಬೇಕಿದೆ. ಕಾರ್ಮಿಕ ಮಾರುಕಟ್ಟೆ ಅನಿಯಂತ್ರಿತ ಸ್ವಾತಂತ್ರ್ಯ ಹಾಗೂ ಉತ್ಪಾದನಾ ವಿಧಾನಗಳಲ್ಲಿ ಅಸಮಾನ್ಯ ಬೆಳವಣಿಗೆ ಒಂದು ಪ್ರಧಾನವಾದ ತೊಂದರೆಯಾ ಪರಿಣಮಿಸಿದೆ. ಅದರ ಫಲವಾಗಿ ಕಾರ್ಮಿಕರಲ್ಲಿ ನಿರುದ್ಯೋಗ ಮತ ಅನಾರೋಗ್ಯ ಸ್ಪರ್ಧೆ ಏರ್ಪಡಲು ಕಾರಣವಾಗಿವೆ. ಆರ್ಥಿಕ ವ್ಯವ ಹಾಗೂ ಗ್ರಾಹಕ ಶಕ್ತಿ, ಈ ಎರಡೂ ತಡೆದುಕೊಳ್ಳಲಾರದ ಪೂರ್ಣವಾಗಿ ನಿರುಪಯುಕ್ತವಾಗಿವೆ. ಬೇಡಿಕೆಯನ್ನು ಹೆಚ್ಚಿಸುವುದ ಮೂಲಕ ಕೆಲಸದ ಆರ್ಥಿಕ ಸ್ಥಿತಿಯನ್ನು ಸರಿದೂಗಿಸಲಾಗಿದೆ. ಆದ ಇದು ಬಹು ಜನರ ಬದುಕಿನ ಮಟ್ಟವನ್ನು ಅಸ್ವಾಭಾವಿಕವಾ ಕೆಳಗಿಳಿಸುತ್ತದೆ. ಯುವ ಜನಾಂಗವನ್ನು ಉತ್ಪಾದನಾ ವಿಧಾನದ

...ಪಾಲುಗೊಳ್ಳುವಂತೆ ಮಾಡುವುದರ ಬಗ್ಗೆ; ಕೆಲವು ರೀತಿಯ ಕಷ್ಟ ...ಲಸಗಳಿಂದವೃದ್ಧರಿಗೆವಿನಾಯಿತಿಕೊಡುವುದರಬಗ್ಗೆ ಹಾಗೂ ದೊಡ್ಡ ...ನಗರಗಳ ನಿರ್ಮಾಣವನ್ನು ವಿರೋಧಿಸುವುದರ ಬಗ್ಗೆ ಐನ್‌ಸ್ಟೈನ್‌ರಿಗೆ ...ಸಹಮತವಿತ್ತು.

ಉತ್ಪಾದನೆ ಹಾಗೂ ಗ್ರಾಹಕ ಶಕ್ತಿಯನ್ನು ಕುರಿತು ಬರೆಯುತ್ತ; ...ಪ್ರಸ್ತುತ ಎಲ್ಲ ಕಷ್ಟಗಳಿಗೆ ಪರಿಹಾರ ಉತ್ಪಾದನಾ ಸಾಮರ್ಥ್ಯ ಹಾಗೂ ...ಳಕೆಯ ಜ್ಞಾನದಲ್ಲಿದೆಯೆಂದು ಅವರು ಭಾವಿಸುವುದಿಲ್ಲ. ಈ ಅರಿವು ...ಧಾನವಾಗಿ ಬಂದದ್ದರಿಂದ ಅವರ ಯೋಚನೆಗೆ ಇದು ...ಪೂರಕವಾಗುವುದಿಲ್ಲ. ಐನ್‌ಸ್ಟೈನ್‌ರು ಜರ್ಮನಿಯನ್ನೇ ಕುರಿತು ...ಯೋಚಿಸುವಂತೆ; ಎಲ್ಲ ತೊಡಕುಗಳಿಗೆ ಬಹು ಜನರಲ್ಲಿರುವ ಕುಂದಿದ ...ಗ್ರಾಹಕ ಶಕ್ತಿ ಕಾರಣವೇ ಹೊರತು ಯಂತ್ರಗಳ ಅಧಿಕ ...ಉತ್ಪಾದನೆಯಿಂದಲ್ಲ ಎನ್ನುವ ತೀರ್ಮಾನಕ್ಕೆ ಬರುತ್ತಾರೆ.

ವ್ಯವಹಾರದ ಮಾನವಾಗಿ ಬಂಗಾರ ಅನೇಕ ಗಂಭೀರವಾದ ...ಅನಾನುಕೂಲತೆಗಳನ್ನು ಹೊಂದಿದೆ. ಬಂಗಾರದ ಪೂರೈಕೆಯಲ್ಲಿನ ...ಕೊರತೆ ಅದರಲ್ಲಿನ ವಿಶ್ವಾಸವನ್ನು ಹಾಗೂ ಪ್ರಸಾರದಲ್ಲಿರುವ ಹಣದ ...ಪ್ರಮಾಣವನ್ನು ಕಡಿಮೆಗೊಳಿಸುತ್ತದೆ. ಅದುದರಿಂದ ಬೆಲೆಗಳ ಹಾಗೂ ...ಕೂಲಿಯ ಇಳಿತ ತುರ್ತಾಗಿ ಹಾಗೂ ತೃಪ್ತಿಕರವಾಗಿ ಹೊಂದಾಣಿಕೆ ...ಮಾಡಿಕೊಳ್ಳುವುದಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸುವ ...ಐನ್‌ಸ್ಟೈನ್‌ರು ನಿರುದ್ಯೋಗವನ್ನು ತೊಲಗಿಸಲು ಪ್ರತಿ ಕೈಗಾರಿಕೆಗೆ ...ನಿಂಗಡಿಸಿದ ಕೆಲಸದ ಗಂಟೆಗಳನ್ನು ಕಾಯಿದೆಯ ಮೂಲಕ ...ಕಡಿಮೆಗೊಳಿಸಬೇಕು ಹಾಗೂ ದೊರಕಬಹುದಾದ ವಸ್ತುಗಳನ್ನು ...ಕೊಂಡುಕೊಳ್ಳುವ ಸಮುದಾಯ ಶಕ್ತಿಯ ಹೊಂದಾಣಿಕೆಗಾಗಿ ಕನಿಷ್ಠ ...ಕೂಲಿಯನ್ನು ನಿಗಧಿಗೊಳಿಸಬೇಕು. ಬೆಲೆಯ ಮಟ್ಟವನ್ನು ...ಸ್ಥಿರವಾಗಿಡಲು ಸಂಪತ್ತಿನ ಆದರ್ಶವನ್ನು ತೊಡೆದುಹಾಕಿ ಹಣದ

ಪ್ರಸಾರ ಹಾಗೂ ಸಾಲದ ಪ್ರಮಾಣವನ್ನು ನಿಯಂತ್ರಿಸಬೇಕೆಂದು ತಿಳಿಸುತ್ತಾರೆ.

* * *

ಚರಿತ್ರೆಯ ಬಹುಪಾಲು; ಮಾನವ ತನ್ನ ಹಕ್ಕುಗಳಿಗಾಗಿ ನಡೆಸಿದ ಹೋರಾಟವೇ ಆಗಿದೆ. ಆದರೆ ಈ ನಿರಂತರ ಹೋರಾಟದಲ್ಲಿ ಕೊನೆಯ ಗೆಲುವನ್ನು ಅವನಿನ್ನೂ ಪಡೆಯಲು ಸಾಧ್ಯವಾಗಿಲ್ಲ.

ಮಾನವ ಹಕ್ಕುಗಳ ಅಸ್ತಿತ್ವ ಹಾಗೂ ಚಲಾವಣೆಯನ್ನು ನಕ್ಷತ್ರಗಳಲ್ಲೇನೂ ಬರೆದು ನಿಯಂತ್ರಿಸುತ್ತಿಲ್ಲ. ಪ್ರತಿಯೊಬ್ಬರಿಗೂ ಸಂಬಂಧಿಸಿದಂತೆ ಜನರ ನಡವಳಿಕೆಯ ಬಗ್ಗೆ, ಅದರ್ಶಗಳು ಹಾಗೂ ಉದ್ದೇಶಿತ ಸಮಾಜ ರಚನೆಯ ಬಗ್ಗೆ ಬುದ್ಧಿಜೀವಿಗಳು ಬೋಧಿಸಿರುವುದನ್ನು ಇತಿಹಾಸದಿಂದ ಅರಿತುಕೊಳ್ಳಬಹುದು, ಐತಿಹಾಸಿಕ ಅನುಭವಗಳಿಂದ ಆ ಆದರ್ಶಗಳು ಹಾಗೂ ಅಪವಾದಗಳು, ಸೌಂದರ್ಯ ಮತ್ತು ಸಾಮರಸ್ಯದ ಬಗೆಗಿನ ಅತಿಯಾದ ಆಕಾಂಕ್ಷೆಯನ್ನು ಮಾನವ ತನ್ನ ಕಲ್ಪನೆಯ ಮೂಲಕ ಆಗಲೇ ಒಪ್ಪಿಕೊಂಡಿದ್ದಾನೆ ಹಾಗೂ ಎಲ್ಲ ಕಾಲಗಳಲ್ಲೂ ಅವನ ಜನರೇ ಅವರ ಮೃಗೀಯ ಅಂಶಗಳ ಒತ್ತಡದಿಂದ ಅವನ್ನು ತಿರಸ್ಕರಿಸಿರುವುದೂ ಕಂಡುಬಂದಿದೆ.

ಮಾನವ ತನ್ನ ಹಕ್ಕುಗಳಿಗಾಗಿ ಅನೇಕ ಬೇಡಿಕೆಗಳನ್ನು ಮುಂದಿಡುತ್ತಾ ಬಂದಿದ್ದಾನೆ. ಒಬ್ಬ ವ್ಯಕ್ತಿಗೆ ತನ್ನಂಥ ಮತ್ತೊಬ್ಬ ವ್ಯಕ್ತಿಯಿಂದ ಅಥವ ಸರ್ಕಾರದಿಂದ ರಕ್ಷಣೆ ಇರಬೇಕು, ಕೆಲಸದ ಹಾಗೂ ಕೆಲಸದಿಂದ ಆದಾಯ ಪಡೆಯುವುದು, ಚರ್ಚಿಸುವ ಹಾಗೂ ಬೋಧಿಸುವ ಸ್ವಾತಂತ್ರ್ಯ, ಸರ್ಕಾರ ರಚನೆಯಲ್ಲಿ ವ್ಯಕ್ತಿ ಭಾಗವಹಿಸುವುದು ಮುಂತಾದವುಗಳ ಜೊತೆಗೆ ಇನ್ನೊಂದು ಹಕ್ಕಿದೆ.

ಅದೆಂದರೆ ವ್ಯಕ್ತಿ ತನಗೆ ಸರಿಯಲ್ಲವೆಂದು ಕಂಡುಬಂದ ಚಟುವಟಿಕೆಗಳಿಗೆ ಸಹಾಯ ಸಹಕಾರ ನೀಡದಿರುವುದು. ಇದರಲ್ಲಿ ಪ್ರಥಮ ಆದ್ಯತೆ ಕೊಡಬೇಕೆಂದರೆ ಮಿಲಿಟರಿ ಸೇವೆಯನ್ನು ತಿರಸ್ಕರಿಸುವುದು ಎಂದು ಹೇಳಿ; ರಾಜಕಾರಣಿಗಳ ಅಧಿಕಾರದ ಹಾಗೂ ರಾಜಕೀಯ ಲಾಭದ ದಾಹವನ್ನು ನಾವೆಷ್ಟು ಕಾಲ ತಡೆದುಕೊಳ್ಳಬೇಕಿದೆ? ಎಂದು ಐನ್‌ಸ್ಟೈನ್‌ರು ಪ್ರಶ್ನಿಸುತ್ತಾರೆ. ಇದು ಎಷ್ಟರಮಟ್ಟಿಗೆ ಪರಿಣಾಮ ಬೀರಿದೆ ಎಂದರೆ ಮನುಷ್ಯರು ತಮ್ಮಲ್ಲಿನ ನಗುವಿನ ಪ್ರಜ್ಞೆಯನ್ನೇ ಕಳೆದುಕೊಳ್ಳುವಂತೆ ಮಾಡಿದೆ ಎಂದು ಅಭಿಪ್ರಾಯಪಡುತ್ತಾರೆ.

* * *

ಅಮೆರಿಕಾದಲ್ಲಿ ಅಲ್ಪಸಂಖ್ಯಾತರಾದ ನೀಗ್ರೋಗಳು ತಮ್ಮ ಸಾಮಾಜಿಕ ಹಕ್ಕುಗಳಿಗಾಗಿ ನಡೆಸುತ್ತಿದ್ದ ಚಳುವಳಿಗಳನ್ನು ಮನಗಂಡ ಆಲ್ಬರ್ಟ್ ಐನ್‌ಸ್ಟೈನ್‌ರು ಅಲ್ಪಸಂಖ್ಯಾತರನ್ನು ಕುರಿತು ಬರೆಯುತ್ತ "ತಮ್ಮ ಭೌತಿಕನಡವಳಿಕೆಗಳಿಂದ ಗುರುತುಮಾಡಬಹುದಾದ ಹಾಗೂ ಬಹು ಸಂಖ್ಯಾತರ ಮಧ್ಯದಲ್ಲಿ ಅವರಿಗಿಂತ ಕಡಿಮೆ ದರ್ಜೆಯ ಬದುಕು ನಡೆಸುವವರನ್ನು ಅಲ್ಪಸಂಖ್ಯಾತರೆಂದು ಕರೆಯುತ್ತಿರುವುದು ಪ್ರಪಂಚಕ್ಕೇ ಗೊತ್ತಿರುವ ವಿಷಯ. ಈ ದುರಂತಕ್ಕೆ ಮುಖ್ಯ ಕಾರಣವೆಂದರೆ ಬಹುಸಂಖ್ಯಾತರು ಅಲ್ಪಸಂಖ್ಯಾತರನ್ನು ಸಾಮಾಜಿಕ ಹಾಗೂ ಆರ್ಥಿಕ ವಿಷಯಗಳಲ್ಲಿ ಅಪ್ರಾಮಾಣಿಕವಾಗಿ ನಡೆಸಿಕೊಳ್ಳುವುದರಿಂದ ಅವರು ಅದಕ್ಕೆ ಬಲಿಯಾಗಿ ಕೀಳರಿಮೆಗೆ ಒಳಗಾಗಿದ್ದಾರೆ" ಎಂದು ತಿಳಿಸಿದ ಐನ್‌ಸ್ಟೈನ್‌ರು ಬಹುಸಂಖ್ಯಾತರೊಂದಿಗಿನ ನಿಕಟ ಸಹವಾಸದಿಂದ ಹಾಗೂ ಅವರ ಉನ್ನತಿಯನ್ನು ಬೆಳೆಸುವ ಉದ್ದೇಶದಿಂದ ನೀಡುವ ಶಿಕ್ಷಣದಿಂದ ಅಲ್ಪಸಂಖ್ಯಾತರನ್ನು ಬೌದ್ಧಿಕವಾಗಿ ವಿಮೋಚನೆಗೊಳಿಸಿ

ಸುಶಿಕ್ಷಿತರನ್ನಾಗಿ ಮಾಡಬಹುದು. ನೀಗ್ರೋಗಳು ಈ ನಿಟ್ಟಿನಲ್ಲಿ ನಡೆಸಿದ ಪ್ರಯತ್ನಕ್ಕೆ ಮಾನ್ಯತೆ ಹಾಗೂ ಸಹಾಯ ಅವಶ್ಯಕ ಎಂದು ಐನ್‌ಸ್ಟೈನ್‌ರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು ಅವರ ಮಾನವ ಪ್ರೇಮಕ್ಕೆ ಮತ್ತೊಂದು ಸಾಕ್ಷಿ.

ಹೀಗೆ ಸೂರ್ಯನಿಂದ ಹೊರಟ ಕಿರಣಗಳು ಒಂದಲ್ಲ ಎರಡಲ್ಲ. ಬದುಕಿನ ಎಲ್ಲ ವಿಚಾರಗಳ ಮೇಲೂ ಬೆಳಕು ಚೆಲ್ಲುತ್ತವೆ ಐನ್‌ಸ್ಟೈನ್ ಕಿರಣಗಳು.

➢

ಅಧ್ಯಾಯ -೪

ಬಣ್ಣ ಬಣ್ಣದ ಹೂವುಗಳ ತೋಟ

ಅದೊಂದು ದಿನ ಮಧ್ಯಾಹ್ನ. ಆಕಾಶದಲ್ಲಿನ ಸೂರ್ಯ ತನ್ನ ಬೆಳ್ಳಿ ಕಿರಣಗಳಿಂದ ವಾತಾವರಣವನ್ನು ಬಿಸಿ ಮಾಡಿದ್ದ. ಆಲ್ಬರ್ಟ್ ಐನ್‌ಸ್ಟೈನ್‌ರ ನಿಕಟವರ್ತಿಯಾಗಿದ್ದ ಲಿಯೋಪಾಲ್ಡ್ ಇನ್‌ಫೆಲ್ಡ್ ತಮ್ಮ ಗೆಳೆಯನನ್ನು ಕಾಣಲು ಐನ್‌ಸ್ಟೈನ್‌ರ ಮನೆಗೆ ಬಂದರು. ಐನ್‌ಸ್ಟೈನ್‌ರೇ ಬಾಗಿಲ ಬಳಿ ಬಂದು ಇನ್‌ಫೆಲ್ಡ್‌ರನ್ನು ಮನೆ ಒಳಕ್ಕೆ ಸ್ವಾಗತಿಸಿ ಹಾಲ್‌ನಲ್ಲಿದ್ದ ಒಂದು ಹಳೇ ಕುರ್ಚಿಯನ್ನು ತೋರಿಸಿ ಅದರ ಮೇಲೆ ಕುಳಿತುಕೊಳ್ಳುವಂತೆ ಹೇಳಿ; ಮೂಲೆಯಲ್ಲಿದ್ದ ಹಳೇ ಸ್ಟೂಲನ್ನು ಎತ್ತಿತಂದು ಹಾಕಿಕೊಂಡು ಇನ್‌ಫೆಲ್ಡ್‌ರಿಗೆ ಎದುರಾಗಿ ಕುಳಿತರು. ಬಿಸಿಲಿನಲ್ಲಿ ಬಂದಿದ್ದರಿಂದ ಇನ್‌ಫೆಲ್ಡ್‌ರ ಹಣೆಯ ಮೇಲೆ ಬೆವರು ನೀರಿನ ಹನಿಗಳು ಮೂಡಿದ್ದವು. ಇನ್‌ಫೆಲ್ಡ್ ಫ್ಯಾನ್‌ಗಾಗಿ ಮೇಲೆ ನೋಡಿ ಅದು ಇಲ್ಲದ್ದು ಕಂಡು ನಂತರ ಸ್ನೇಹಿತನ ಮುಖ ನೋಡಿದರು. ಐನ್‌ಸ್ಟನ್‌ರು ಬಿಟ್ಟಿದ್ದ ಉದ್ದದ ತಲೆಗೂದಲು. ತೊಟ್ಟಿದ್ದ ಕಾಲರ್ ಇಲ್ಲದ ಚರ್ಮದ ಅಂಗಿ; ಕುತ್ತಿಗೆಯಲ್ಲಿ ಟೈ ಇಲ್ಲ.

ಪಾದಗಳಿಗೆ ಕಾಲುಚೀಲಗಳು ಸಹಾ ಇಲ್ಲ. ಇತ್ತೀಚಿನ ದಿನಗಳಲ್ಲಿ ಈ ದೃಶ್ಯ ಸಾಮಾನ್ಯವಾಗಿತ್ತು. ಏನೋ ತುರ್ತು ಕೆಲಸದಿಂದ ಹೀಗೆ ಓಡಾಡುತ್ತಿರಬಹುದು ಎಂದುಕೊಂಡು ಸುಮ್ಮನಾಗಿದ್ದ ಇನ್‌ಫೆಲ್ಡ್‌ರಿಗೆ ಇಂದು ಮತ್ತೂ ಆಶ್ಚರ್ಯಕಾದಿತ್ತು. ಐನ್‌ಸ್ಟೈನರ ಮನೆಯಲ್ಲಿ ಟಿ.ವಿ. ಇಲ್ಲ! ಒಂದು ರೆಫ್ರಿಜರೇಟರ್ ಇಲ್ಲ!! ಕೊನೆಗೆ, ಇದ್ದ ಫ್ಯಾನೂ ಈಗಿಲ್ಲ!!! ಮುಖದ ಮೇಲಿನ ಗಡ್ಡ-ಮೀಸೆ ಬೋಳಿಸಿಕೊಳ್ಳಲು ಒಂದು ರೇಜರ್ ಆದರೂ ಇದೆಯೋ ಇಲ್ಲವೊ? ಎಂದು ಮನಸ್ಸಿನಲ್ಲೇ ಪ್ರಶ್ನಿಸಿಕೊಂಡ ಇನ್‌ಫೆಲ್ಡ್‌ರಿಗೆ ಆಶ್ಚಯವಾಗಿತ್ತು. ಅವರು ತಮ್ಮ ಗೆಳೆಯನ ಕಡೆ ತಿರುಗಿ ವಿಜ್ಞಾನಕ್ಕೆ ಮಹತ್ತರವಾದ ಕೊಡುಗೆಗಳನ್ನು ಕೊಟ್ಟು ವಿಶ್ವಖ್ಯಾತಿ ಪಡೆದಂತವರ ಮನೆಯಲ್ಲಿ ಒಂದು ಫ್ಯಾನ್ ಇಲ್ಲ, ಒಂದು ಟಿ.ವಿ. ಇಲ್ಲ ಅಂದ್ರೆ ಹೇಗೆ? ಎಂದು ಪ್ರಶ್ನಿಸಿ ಸ್ವಲ್ಪ ಹೊತ್ತು ತಮ್ಮ ಗೆಳೆಯನ ಮುಖ ನೋಡಿದರು.

ಇನ್‌ಫೆಲ್ಡ್ ಅವರ ಮಾತುಗಳು ಐನ್‌ಸ್ಟೈನ್‌ರ ಮನಸ್ಸಿನ ಮೇಲೆ ಯಾವ ಪರಿಣಾಮವನ್ನು ಬೀರಿದಂತೆ ಕಾಣಲಿಲ್ಲ. ಆದರೆ, ಬದಲಾಗಿ ಹುಸಿನಗೆಯನ್ನು ತಮ್ಮ ಮುಖದಮೇಲೆ ತಂದುಕೊಂಡು, 'ಅಲ್ಪ ತೃಪ್ತಿ ನೀಡುವ ವಸ್ತುಗಳನ್ನು ಕೂಡಿಡುವುದಕ್ಕಾಗಿ ಅಮೂಲ್ಯವಾದ ನನ್ನ ಜೀವಿತಕಾಲವನ್ನು ವ್ಯಯಿಸಲಾರೆ' ಎಂದರು ಕಡ್ಡಿ ತುಂಡು ಮಾಡಿದಂತೆ.

ಆಲ್ಬರ್ಟ್ ಐನ್‌ಸ್ಟೈನ್‌ರು ಒಳ್ಳೆ ತತ್ವಜ್ಞಾನಿಯಂತೆ ಮಾತಾಡಿದ್ದು; ಮಾತಿನಂತೆ ತಮ್ಮ ಜೀವನದಲ್ಲಿ ನಡೆದುಕೊಂಡದ್ದು ಸೂರ್ಯನಷ್ಟೇ ಸತ್ಯ. ಅವಶ್ಯಕತೆಗಳು ಹೆಚ್ಚಿದಂತೆಲ್ಲ ಬದುಕು ಅವುಗಳಿಗೆ ಹೊಂದಿಕೊಂಡು ಸಂಕೀರ್ಣವಾಗುವುದರ ಜೊತೆಗೆ ವ್ಯಕ್ತಿಯಲ್ಲಿ ಗುಲಾಮಗಿರಿಯನ್ನೂ ಬೆಳೆಸುತ್ತದೆ. ಜೀವನವೆಂದರೆ ಬರಿ ವಸ್ತುಗಳನ್ನು ಕೂಡಿಹಾಕಿಕೊಳ್ಳುವುದಷ್ಟೆ ಅಲ್ಲ. ಅದನ್ನೂ ದಾಟಿದ ತೃಪ್ತಿಯೊಂದಿದೆ ಎನ್ನುವ ಮನೋಧೋರಣೆಯನ್ನು ಹೊಂದಿದ್ದರಿಂದ ಐನ್‌ಸ್ಟೈನ್‌ರು ಸರಳ ಬದುಕಿನ ಕಡೆ ವಾಲಿದ್ದರು. ಹಣದ ಅವಶ್ಯಕತೆಯ

ಹೊರೆ ಇಳಿಸಲು ತಲೆಯ ಕೂದಲನ್ನು ಉದ್ದಕ್ಕೆ ಬಿಡುತ್ತಿದ್ದರು. ಗಡ್ಡ ಮೀಸೆಗಳನ್ನು ಬೋಳಿಸುತ್ತಿರಲಿಲ್ಲ, ಹತ್ತಿ ಅಥವಾ ಉಣ್ಣೆ ಬಟ್ಟೆಗಳಾದರೆ ಜಾಗ್ರತೆ ಹರಿದು ಹೋಗುತ್ತವೆ ಎನ್ನುವ ಕಾರಣಕ್ಕಾಗಿ ಚರ್ಮದ ಅಂಗಿ ಹೊಲಿಸಿದ್ದರು.

ಇವರಿಗೆ ೧೯೨೧ರಲ್ಲಿ ನೋಬೆಲ್ ಬಹುಮಾನ ಬಂದಾಗ ಕೊಟ್ಟ ಲಕ್ಷಗಟ್ಟಲೆ ಡಾಲರ್ ಹಣದ ಚೆಕ್ ಹಾಳೆಯನ್ನು ಪುಸ್ತಕದ ಪುಟದ ಗುರುತಾಗಿ ಬಳಸುತ್ತಿದ್ದರೆಂದು, ಕೆಲ ದಿನಗಳ ನಂತರ ಆ ಹಣವನ್ನು ಮೊದಲ ಹೆಂಡತಿಗೆ ಕೊಟ್ಟರೆಂದು ತಿಳಿದು ಬರುತ್ತದೆ. ಹೀಗೆ ಜೀವನದ ಅವಶ್ಯಕತೆಗಳನ್ನು ಆದಷ್ಟೂ ಕಡಿಮೆ ಮಾಡಿಕೊಂಡು ಸ್ವಾತಂತ್ರ್ಯವನ್ನು ಹೆಚ್ಚಿಸಿಕೊಂಡಿದ್ದರು.

ಐನ್‌ಸ್ಟೈನರ ವೇಷಭೂಷಣಗಳ ವಿಲಕ್ಷಣ ಇತರರಿಗೆ ವಿನೋದ ಉಂಟುಮಾಡುವುದು ಅವರಿಗೆ ತಿಳಿದಿತ್ತು. ಆದುದರಿಂದ, ಆ ವಿನೋದದಲ್ಲಿ ಅವರೂ ಪಾಲ್ಗೊಳ್ಳುತ್ತಿದ್ದರು. ಒಮ್ಮೆ ಇವರ ಆಪ್ತನಾಗಿದ್ದ ಒಬ್ಬ ಯುವಕ ತನ್ನ ಹೆಂಡತಿ ಹಾಗೂ ಐದಾರು ತಿಂಗಳು ವಯಸ್ಸಿನ ಮಗುವಿನೊಂದಿಗೆ ಐನ್‌ಸ್ಟೈನ್‌ರ ಮನೆಗೆ ಬಂದ. ಐನ್‌ಸ್ಟೇನ್‌ರ ಮುಖ ನೋಡಿದ ತಕ್ಷಣ ಮಗು ಕಿಟಾರನೆ ಕಿರುಚಿ ಅಳಲು ಪ್ರಾರಂಭಿಸಿತು. ಅದಕ್ಕೆ ಐನ್‌ಸ್ಟೆನ್‌ರು ನಗುತ್ತ 'ಇದುವರೆಗೆ ನೋಡಿದ್ದರಲ್ಲಿ ನೀನೊಬ್ಬನೆ ಕಣೋ; ನನ್ನನ್ನು ನೋಡಿದಾಗ ಏನನ್ನಿಸುತ್ತೆ ಅನ್ನೋದನ್ನು ಪ್ರಾಮಾಣಿಕವಾಗಿ ವ್ಯಕ್ತಪಡಿಸಿದವನು' ಎಂದರಂತೆ.

ಆಲ್ಬರ್ಟ್ ಐನ್‌ಸ್ಟೈನ್‌ರು ವಿಜ್ಞಾನ ಅದರಲ್ಲೂ ಭೌತವಿಜ್ಞಾನ ಹಾಗೂ ಮಾನವೀಯತೆಯನ್ನು ಜೀವನದ ಸತ್ವವನ್ನಾಗಿ ಪರಿಗಣಿಸಿದ್ದರು ಎನ್ನುವುದು ಉತ್ಪ್ರೇಕ್ಷೆಯ ಮಾತಂತೂ ಆಗಲಾರದು. ಅವರು ವಿಜ್ಞಾನ ಕಲಿಕೆ ಕುರಿತು ಒಂದುಕಡೆ ಬರೆಯುತ್ತಾ "ಹೊಟ್ಟೆಪಾಡಿಗಾಗಿ ವಿಜ್ಞಾನವನ್ನು ಅವಲಂಬಿಸಬೇಕಾಗದಿದ್ದ

ಪಕ್ಷದಲ್ಲಿ ವಿಜ್ಞಾನವೊಂದು ಅಧ್ಭುತ ವಿಷಯವೇ ಸರಿ. ವ್ಯಕ್ತಿ ತಾನು ಸಮರ್ಥವಾಗಿ ದುಡಿಯಬಲ್ಲೆನೆಂದು ಭಾವಿಸುವ ಕಾರ್ಯದ ಮೂಲಕ ಅನ್ನಗಳಿಸಬೇಕು ಎಂದು ನಾವು ಯಾರಿಗೇ ಆಗಲಿ ಲೆಕ್ಕ ಒಪ್ಪಿಸಬೇಕಾಗುವುದಿಲ್ಲವೊ ಅಂದು ಮಾತ್ರ ವೈಜ್ಞಾನಿಕ ಸಾಹಸೋದ್ಯಮದಲ್ಲಿ ಸಂತೋಷ ಕಾಣುತ್ತೇವೆ'' ಎಂದು ಅಭಿಪ್ರಾಯಪಡುತ್ತಾರೆ. ಅವರಲ್ಲಿನ ವಿಜ್ಞಾನದ ಒಲವು ಮಹತ್ತರವಾದ ಸಾಧನೆಗೆ ದಾರಿಮಾಡಿಕೊಟ್ಟಿತ್ತು. ಅವರ ಒಲವಿನ ಬಗ್ಗೆ ಇನ್‌ಫೆಲ್ಡ್ ಒಂದು ಕಡೆ ಬರೆಯುತ್ತ ''ಐನ್‌ಸ್ಟೈನ್ ಅವರ ಮಟ್ಟಿಗೆ ಹೇಳುವುದಾದರೆ, ಜೀವಿಸಿರುವುದಕ್ಕೂ ಸತ್ತು ಹೋಗುವುದಕ್ಕೂ ಇರುವ ವ್ಯತ್ಯಾಸವೆಂದರೆ, ಭೌತ ವಿಜ್ಞಾನದ ಸಮಸ್ಯೆಗಳನ್ನು ಕುರಿತು ಚಿಂತನೆ ಮಾಡಲು ಸಾಧ್ಯವಿರುವುದು ಮತ್ತು ಸಾಧ್ಯವಿಲ್ಲದಿರುವುದು'' ಎಂದು ಅಭಿಪ್ರಾಯ ಪಡುತ್ತಾರೆ. ವಿಜ್ಞಾನದ ಆವಿಷ್ಕಾರಗಳಂತಹ ಮಹತ್ಸಾಧನೆಗೆ ಬೇಕಾದ ಯಾವ ವಾತಾವರಣವೂ ಇಲ್ಲದ ಜೀವನಕ್ಕಾಗಿ ಪೇಟೆಂಟ್ ಕಛೇರಿಯಲ್ಲಿ ಗುಮಾಸ್ತಿಕೆ ಮಾಡುತ್ತ ಪ್ರಪಂಚವನ್ನೇ ತಲ್ಲಣಗೊಳಿಸಿ ನಿಬ್ಬೆರಗಾಗುವಂತೆ ಮಾಡಿದ ಸಾಪೇಕ್ಷತಾ ಸಿದ್ಧಾಂತ, ಕ್ವಾಂಟಂ ಕಲ್ಪನೆಗೆ ಆಧಾರವಾಗುವ ದ್ಯುತಿ ವಿದ್ಯುತ್ ಪರಿಣಾಮ ಮುಂತಾದವುಗಳನ್ನು ಕಂಡುಹಿಡಿದು ಕೀರ್ತಿ ಗಳಿಸುವಂತೆ ಮಾಡಿದ್ದು ಯಾವುದೆಂದರೆ, ಐನ್‌ಸ್ಟೈನ್‌ರಿಗೆ ವಿಜ್ಞಾನದ ಬಗ್ಗೆ ಇದ್ದ ಒಲವು ಮತ್ತು ಆನಂದ.

ವ್ಯಕ್ತಿಯೊಬ್ಬನ ಒಲವೆಲ್ಲ ಒಂದು ವಿಷಯದಲ್ಲಿ ಕೇಂದ್ರೀಕರಿಸಲ್ಪಟ್ಟಾಗ ಉಳಿದೆಲ್ಲ ವಿಷಯಗಳಲ್ಲಿ ನಿರಾಸಕ್ತಿ ಆವರಿಸುತ್ತದೆ ಎನ್ನುವುದು ಸ್ವಾಭಾವಿಕ ಅನಿಸಿಕೆಯಾದರೂ ಐನ್‌ಸ್ಟೈನ್‌ರ ವಿಷಯದಲ್ಲಿ ಹಾಗಲ್ಲ. ಅವರು ಭೌತಶಾಸ್ತ್ರದ ಜೊತೆಗೆ ಗಣಿತ ಹಾಗೂ ಬದುಕಿಗೆ ಪೂರಕವಾಗುವ ಸಂಗೀತ, ತತ್ವಮೀಮಾಂಸೆ, ಧರ್ಮ, ರಾಜಕೀಯ ಹೀಗೆ ಎಲ್ಲದರ ಬಗೆಗೂ ಆಸಕ್ತಿ

ಮೂಢಿಸಿಕೊಂಡಿದ್ದರು. ಆದರೂ ಗಣಿತ ಕಲಿಕೆ ಕುಂಠಿತವಾದದ್ದರ ಬಗ್ಗೆ ಐನ್‌ಸ್ಟೈನ್‌ರು ಬರೆಯುತ್ತ 'ಅಲ್ಲಿ (ಜೂರಿಕ್‌ನ ಪಾಲಿಟೆಕ್ನಿಕ್‌ನಲ್ಲಿ) ಬಲು ಸಮರ್ಥ ಗಣಿತ ಪ್ರಾಧ್ಯಾಪಕರಿದ್ದರು (ಉದಾಹರಣೆಗೆ: ಹರ್ಮಿಟ್ಜ್, ಮಿಂಕೊವ್ಸ್ಕೀ ಮೊದಲಾದವರು). ಹೀಗಾಗಿ ನಿಜಕ್ಕೂ ನಾನು ಪರಿಪುಷ್ಟ ಗಣಿತ ಶಿಕ್ಷಣ ಪಡೆಯಬಹುದಾಗಿತ್ತು. ಆದರೂ ಹೆಚ್ಚಿನ ವೇಳೆಯನ್ನು ಭೌತವಿಜ್ಞಾನದ ಪ್ರಯೋಗಮಂದಿರದಲ್ಲಿ ಕೆಲಸ ಮಾಡುತ್ತ ವಿನಿಯೋಗಿಸುತ್ತಿದ್ದೆ. ಅಲ್ಲಿ ಅನುಭವದೊಡನೆ ಒದಗುತ್ತಿದ್ದ ನೇರ ಸಂಸ್ಪರ್ಶ ನನ್ನನ್ನು ಸಂಮೋಹನಗೊಳಿಸಿತ್ತು. ಉಳಿದ ಕಾಲ ಹೆಚ್ಚಾಗಿ ಮನೆಯಲ್ಲಿ ಕಿರ್ಖಫ್, ಹೆಲ್ಮ್‌ಹಾಲ್ಜ್, ಹರ್ಟ್ಸ್ ಮೊದಲಾದವರ ಕೃತಿಗಳ ಅಧ್ಯಯನದಲ್ಲಿ ನಿರತನಾಗಿರುತ್ತಿದ್ದೆ. ಗಣಿತವನ್ನು ನಾನು ಸ್ವಲ್ಪಮಟ್ಟಿಗೆ ಕಡೆಗಣಿಸಿದ್ದು ಪ್ರಾಕೃತಿಕ ವಿಜ್ಞಾನಗಳಲ್ಲಿ ನನಗೆ ಗಣಿತಕ್ಕಿಂತ ಪ್ರಬಲತರ ಆಸಕ್ತಿ ಇತ್ತೆಂಬ ಒಂದೇ ಕಾರಣಕ್ಕಾಗಿ ಅಲ್ಲ. ಈ ಮುಂದಿನ ವಿಚಿತ್ರಾನುಭವವೂ ಅದಕ್ಕೆ ಕಾರಣವಾಗಿತ್ತು: ಗಣಿತ ಹಲವಾರು ವಿಶೇಷ ವಿಭಾಗಗಳಾಗಿ ಒಡೆದು ಹೋಗಿದ್ದುದನ್ನು ಕಂಡೆ; ಪ್ರತಿಯೊಂದು ವಿಭಾಗವೂ ನಮಗೆ ದತ್ತವಾಗಿರುವ ಅಲ್ಪಾಯಷ್ಯವನ್ನು ಸುಲಭವಾಗಿ ಕುಡಿದರೆ ಆಶ್ಚರ್ಯಪಡಬೇಕಾಗಿಲ್ಲ. ಹೀಗಾಗಿ (ಸರ್ವ ಸಮಾನವಾದ ಎರಡು ಹುಲ್ಲುಕಂತೆಗಳನ್ನು ಎದುರು ಹಿಡಿದಾಗ) ಯಾವ ನಿರ್ದಿಷ್ಟ ಹುಲ್ಲುಕಂತೆಯನ್ನು ಆಯಬೇಕು ಎಂಬುದನ್ನು ನಿರ್ಧರಿಸಲಾಗದ ಬ್ಯೂರಿಡನ್ನನ ಕತ್ತೆಯಂತಾಯಿತು ನನ್ನ ಸ್ಥಿತಿ. ಗಣಿತ ಕ್ಷೇತ್ರದಲ್ಲಿ ಮೂಲಭೂತವಾಗಿ ಪ್ರಮುಖವಾದದ್ದು ಯಾವುದು, ನಿಜಕ್ಕೂ ಆಧಾರರೂಪದ್ದು ಯಾವುದು ಎಂಬುದನ್ನು ಉಳಿದ ಹೆಚ್ಚು ಕಡಿಮೆ ಅನಿವಾರ್ಯ ಪ್ರೌಢಪಾಂಡಿತ್ಯದಿಂದ ಸ್ಪಷ್ಟವಾಗಿ ಬೇಧೀಕರಿಸುವಷ್ಟರ ಮಟ್ಟಿಗೆ ನನ್ನ ಅಂತರ್ಬೋಧೆ ಬಲಶಾಲಿ ಯಾಗಿಲ್ಲದಿದ್ದುದೇ ಇದರ ಕಾರಣವೆಂಬುದರಲ್ಲಿ ಸಂದೇಹವಿಲ್ಲ. ಇಷ್ಟೂ

ಅಲ್ಲದೆ ನಿಸರ್ಗಜ್ಞಾನದ ಬಗ್ಗೆ ನನಗಿದ್ದ ಕುತೂಹ
ನಿಸ್ಸಂದಿಗ್ಧವಾಗಿಯೂ ಪ್ರಬಲತರವಾಗಿತ್ತು; ಆದರೆ ಭೌತವಿಜ್ಞಾನ
ಆಧಾರ ತತ್ವಗಳನ್ನು ಕುರಿತ ಹೆಚ್ಚು ಆಳವಾದ ತಿಳುವಳಿಕೆಯನ್
ಗಳಿಸುವುದರತ್ತ ಸಾಗುವ ಹಾದಿ ಅತ್ಯಂತ ಜಟಿಲ ಹಾಗೂ ಸೂಕ್ಷ್ಮ ಗಣ
ವಿಧಾನಗಳಿಂದ ಬಂಧಿತವಾಗಿದೆ ಎಂಬ ಸಂಗತಿ ವಿದ್ಯಾರ್ಥಿ ಆಗಿದ್
ನನಗೆ ಸ್ಪಷ್ಟವಾಗಿರಲಿಲ್ಲ. ಮುಂದೆ ಸ್ವತಂತ್ರವಾ
ವೈಜ್ಞಾನಿಕಾನ್ವೇಷಣೆಯನ್ನು ಮಾಡುತ್ತ ಸಾಗಿದಂತೆ ಕ್ರಮೇಣ ಈ
ಜ್ಞಾನೋದಯವಾಯಿತು. ನಿಜ ಸಂಗತಿಯೆಂದರೆ ಭೌತವಿಜ್ಞಾನವ
ಪ್ರತ್ಯೇಕ ವಲಯಗಳಾಗಿ ಒಡೆದುಹೋಗಿತ್ತು. ಇಂಥ ಒಂದೊಂದ
ವಲಯವೂ, ಆಳವಾದ ತಿಳುವಳಿಕೆಯನ್ನು ಗಳಿಸಬೇಕೆಂಬ ಹಸಿವನ
ಎಂದೂ ಹಿಂಗಿಸದೆ, ಇಡೀ ಆಯುರ್ಮಾನದ ಕಾರ್ಯವನ್ನ
ಕಬಳಿಸಬಲ್ಲದಾಗಿತ್ತು. ಇಲ್ಲಿಯೂ ಅರ್ಥಂಬರ್ಥವಾ
ಸಂಬಂಧಿತವಾಗಿದ್ದ ದತ್ತಾಂಶಗಳ ರಾಶಿ ಅಗಾಧವಾಗಿತ್ತು. ಆದರೆ ಈ
ರಂಗದಲ್ಲಿ ನಾನು ಬೇಗನೆ ಯಾವುದು ಮೂಲಭೂತಾಂಶಗಳ
ಒಯ್ಯಬಲ್ಲುದು ಎಂಬುದನ್ನು ವಾಸನೆಯಿಂದಲೇ ಗ್ರಹಿಸಲು ಕಲಿ
ಮತ್ತು ಮನಸ್ಸಿನ ಮೇಲೆ ಹೇರಿಕೊಂಡು ಬಂದು ಅದನ್ನು ಸಾರಭೂ
ವಿಷಯದಿಂದ ಕದಲಿಸುವ ಉಳಿದೆಲ್ಲವುಗಳಿಂದ ವಿಮುಖನಾಗ
ಕಲಿತೆ. ಇಲ್ಲೊಂದು ಸಿಕ್ಕು ಇತ್ತು : ತನಗೆ ಒಲವು ಇರಲಿ, ಇಲ್ಲದಿರಲಿ
ವಿದ್ಯಾರ್ಥಿ, ಪರೀಕ್ಷೆಗೋಸ್ಕರವಾಗಿ ಈ ಎಲ್ಲ ಕೆಲಸಕ್ಕೆ ಬಾರದವನ
ತನ್ನ ಮನದಾಳಕ್ಕೆ ಇಳಿಸಲೇ ಬೇಕಾಗಿತ್ತು. ಈ ಬಲವಂತದ ಬಂಧ
ನನ್ನನ್ನು ಎಷ್ಟು ಧೃತಿಗೆಡಿಸಿಬಿಟ್ಟಿತೆಂದರೆ ಅಂತಿಮ ಪರೀಕ್ಷೆಯ
ಉತ್ತೀರ್ಣನಾದ ತರುವಾಯ ಮುಂದಿನ ಪೂರ್ತಿ ಒಂದು ವರ್ಷಕಾ
ನನಗೆ ಯಾವುದೇ ವೈಜ್ಞಾನಿಕ ಸಮಸ್ಯೆಯ ಪರಿಶೀಲನೆಯ
ಅರುಚಿಕರವಾಗಿತ್ತು' ಎಂದು ಅಭಿಪ್ರಾಯಪಡುತ್ತಾರೆ.

ಯಾವನೇ ಒಬ್ಬ ಕ್ರಿಯಾಶೀಲ ವ್ಯಕ್ತಿಗೆ ತನ್ನ ಕರ್ತೃತ್ವಕ್ರಿಯೆಗೆ ಇಂಥದೇ ನಿರ್ದಿಷ್ಟ ವಾತಾವರಣ ಇರಬೇಕೆಂದೇನೂ ಇಲ್ಲ ಎನ್ನುವುದು ಐನ್‌ಸ್ಟೈನ್‌ರ ಸ್ಪಷ್ಟ ತಿಳುವಳಿಕೆ. ವಿಜ್ಞಾನ ಸಂಶೋಧನೆಗೆ ವಾತಾವರಣ ಎಂಥದ್ದಿರಬೇಕು? ಎನ್ನುವ ಪ್ರಶ್ನೆ ಮುಂದಾದಾಗ "ಸಂಶೋಧನೆಗೆ ಅಗತ್ಯವಾದ ವಾತಾವರಣ ದೊರೆಯುವುದು ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರ ಎನ್ನುವುದಕ್ಕಾಗುವುದಿಲ್ಲ; ಇನ್ನೂ ಉತ್ತಮವಾದ ಬೇರೆ ಸ್ಥಳಗಳಿವೆ; ಉದಾಹರಣೆಗೆ ಒಂದು ಲೈಟ್‌ಹೌಸ್" ಎಂದರು. ಈ ಮಾತು ಮೇಲುನೋಟಕ್ಕೆ ಲಘುವಾದದು. ಪೂರ್ವಾಪರ ಯೋಚಿಸಿ ವ್ಯಕ್ತಪಡಿಸಿದ ಅಭಿಪ್ರಾಯವಲ್ಲ ಎನಿಸಿ ಎಂಥವರಿಗಾದರೂ, ಐನ್‌ಸ್ಟೈನ್‌ರ ಬಗ್ಗೆ ಹಗುರವಾದ ಅಭಿಪ್ರಾಯ ಮೂಡುವ ಸಂಭವವೇ ಹೆಚ್ಚು. ಆದರೆ ವಾಸ್ತವವಾಗಿ ಒಲವಿನ ಬಗ್ಗೆ ಸ್ಪಷ್ಟವಾದ ಕಲ್ಪನೆ ಅವರಿಗೆ ಇದ್ದದ್ದರಿಂದ; ಇಂಥಾ ಮಾತಿಗೆ ಅವಕಾಶವಾಗಿರಬಹುದು.

* * *

ಒಂದು ದಿನ ಅಂದು ೧೪ನೇ ಮಾರ್ಚ್ ೧೯೨೦ರ ಬೆಳಗ್ಗೆ. ಇಡೀ ಬರ್ಲಿನ್ ನಗರವೆಲ್ಲ ಸುಣ್ಣ ಬಣ್ಣಗಳನ್ನು ಬಳಿದುಕೊಂಡು ಬಣ್ಣ ಬಣ್ಣದ ವಿದ್ಯುದ್ದೀಪಗಳಿಂದ, ರಂಗುರಂಗಿನ ತೋರಣಗಳಿಂದ ಸಿಂಗರಿಸಿಕೊಂಡು ಆಲ್ಬರ್ಟ್ ಐನ್‌ಸ್ಟೈನ್‌ರ ಐವತ್ತನೇ ಹುಟ್ಟುಹಬ್ಬದ ಸಂದರ್ಭಕ್ಕಾಗಿ ಕಾದುನಿಂತಿದೆ. ಜನರಲ್ಲಿನ ಸಂಭ್ರಮ ಬುಗ್ಗೆಯಂತೆ ಚಿಮ್ಮುತ್ತಿದೆ. ವಿಜ್ಞಾನಕ್ಕೆ, ಮಾನವ ಕಲ್ಯಾಣಕ್ಕೆ ಹಾಗೂ ವಿಶ್ವಶಾಂತಿಗಾಗಿ ದುಡಿಯುತ್ತಿರುವ ಐನ್‌ಸ್ಟೈನ್‌ರನ್ನು ತಮ್ಮಲ್ಲೇ ಕಂಡುಕೊಂಡ ಜನತೆ ಐನ್‌ಸ್ಟೈನ್‌ರ ಮನೆಕಡೆ ಬೆಳಗಿನಿಂದಲೇ ಇರುವೆಗಳಂತೆ ಸಾಲುಗಟ್ಟಿತ್ತು. ಅವರ ಹುಟ್ಟುದಿನಕ್ಕೆ ತಮ್ಮ ಶುಭಾಶಯ ಸೂಚಿಸಲು ತುದಿಗಾಲಮೇಲೆ ನಿಂತಿತ್ತು. ಆದರೆ ಅಂದು ಐನ್‌ಸ್ಟೈನ್‌ರೇ ಮನೆಯಲ್ಲಿಲ್ಲ! ಯಾರ ಬಾಯಲ್ಲಿ ಕೇಳಿದರೂ ಐನ್‌ಸ್ಟೈನ್ ಮನೆಯಲ್ಲಿಲ್ಲ! ಐನ್‌ಸ್ಟೈನ್ ಮನೆಯಲಿಲ್ಲ!! ಜನಕ್ಕೆಲ್ಲ

ಆಶ್ಚರ್ಯ. ಸಂತೋಷ ತರುವ ಸಂದರ್ಭ ಹಾಳುಮಾಡಿಕೊಂಡರಲ್ಲ
ಎನ್ನುವ ವ್ಯಾಕುಲ.

ಜನಪ್ರವಾಹವನ್ನು ಮುಂಚೆಯೇ ಊಹಿಸಿದ್ದ ಐನ್‌ಸ್ಟೈನ್
ತಮ್ಮ ಅಭಿಮಾನಿಗಳಿಂದ ತಪ್ಪಿಸಿಕೊಳ್ಳಲು ಹಿಂದಿನ ದಿನ ಸಂಜೆಯೆ
ದೂರದ ಹಳ್ಳಿಗೆ ಹೋಗಿ ತಲೆಮರಿಸಿಕೊಂಡಿದ್ದರು. ಪ್ರಚಾರವನ್ನು
ಇವರಷ್ಟು ದೂರವಿಟ್ಟ ವಿಜ್ಞಾನಿ ಮತ್ತೊಬ್ಬರಿರಲಾರರು. ಆದ
ಪ್ರಚಾರವೆನ್ನುವುದು ಇವರಿಗೆ ಬೆನ್ನಿಗಂಟಿದ ಬೇತಾಳನಂ
ಕಾಡುತ್ತಿತ್ತು.

ಒಬ್ಬಂಟಿಗರಾಗಿ ತಮಗೆ ತಾವೇ ಇದ್ದುಬಿಡುವುದ
ಐನ್‌ಸ್ಟೈನ್‌ರಿಗೆ ಬಹು ಪ್ರಿಯವಾಗಿತ್ತು. "ಅತಿ ಸಾಮಾನ್ಯನಾದ ಒಬ್ಬ
ಕಾರ್ಮಿಕನನ್ನು ಕಂಡರೆ ನನಗೆ ಅಸೂಯೆ; ಯಾರೂ ಅವನ ತಂಟೆ
ಹೋಗುವುದಿಲ್ಲ" ಎನ್ನುತ್ತಿದ್ದರು. ತಮಗೆ ದೊರೆತ ಖ್ಯಾತಿಗೆ ಕಾರಣ
ಅವರಿಗೆ ಅರ್ಥವೇ ಆಗಿರಲಿಲ್ಲ. ಪರಿಣಾಮವಾಗಿ ಮುಜುಗರದಿಂ
"ನನ್ನ ಬಗ್ಗೆ ನಡೆದಿರುವ ಈ ಅನಾವಶ್ಯಕ ಪ್ರಚಾರವನ್ನು ನೋಡಿದಾ
ನಾನೊಬ್ಬ ಭಾರೀ ವಂಚಕ ಎನ್ನಿಸುತ್ತದೆ" ಎನ್ನುತ್ತಿದ್ದರು.

* * *

ಚಿಕ್ಕ ಮಕ್ಕಳೆಂದರೆ ಐನ್‌ಸ್ಟೈನ್‌ರಿಗೆ ಎಲ್ಲಿಲ್ಲದ ಹಿಗ್ಗು. ಮಕ್ಕ
ಒಡನಾಟ ಅವರಿಗೆ ಒಂದು ರೀತಿಯ ಸ್ಫೂರ್ತಿ ಹಾಗೂ ಶಾಲೆ ಇದ್ದಂತೆ
ಮಕ್ಕಳ ನಿರ್ಮಲ ಮನಸ್ಸಿನಿಂದ ಹೊರಹೊಮ್ಮುವ ಅಭಿಪ್ರಾಯಗ
ಬೆಳಕಿನಲ್ಲಿ ತಮ್ಮ ಬದುಕಿನ ಅನೇಕ ವಿಷಯಗಳಿಗೆ ಅರ್ಥ
ಕಂಡುಕೊಂಡಿದ್ದರು.

ಒಮ್ಮೆ ೧೯೪೩ ಜನವರಿ ೧೯ರಂದು ನ್ಯೂಯಾರ್ಕ್ ನಗರ
ಸಂಡೇಸ್ಕೂಲಿನ ಆರನೇ ತರಗತಿಯ ಒಬ್ಬ ವಿದ್ಯಾರ್ಥಿನಿ, ತನ್ನ ಶಿಕ್ಷಕಿಯ
ಪ್ರೋತ್ಸಾಹದ ಮೇರೆಗೆ ಪ್ರಿನ್ಸ್‌ಟನ್ನಿನಲ್ಲಿದ್ದ ಐನ್‌ಸ್ಟೈನ್‌ರಿಗೆ ಒಂದ

ತ್ರ ಬರೆದು, ವಿಜ್ಞಾನಿಗಳು ಪ್ರಾರ್ಥನೆ ಸಲ್ಲಿಸುವರೇ? ಮತ್ತು ಲ್ಲಿಸುವುದಾದಲ್ಲಿ ಯಾವುದನ್ನು ಕುರಿತು ಸಲ್ಲಿಸುವರು? ಎಂಬುದಾಗಿ ಪ್ರಶ್ನೆ ಕೇಳಿದ್ದಳು.

ಐನ್‌ಸ್ಟೈನ್‌ರು ೧೯೩೬ ಜನವರಿ ೨೪ರಂದು ಆ ವಿದ್ಯಾರ್ಥಿನಿಗೆ ಉತ್ತರುಪತ್ರ ಬರೆದು 'ಪ್ರತಿಯೊಂದು ಘಟನೆಯೂ ನಿಸರ್ಗ ನಿಯಮಗಳಿಂದ ನಿರ್ಧಾರಿತವಾಗಿರುವುದೆಂಬ ಭಾವನೆಯನ್ನು ಆಧರಿಸಿ ವೈಜ್ಞಾನಿಕ ಸಂಶೋಧನೆ ನಿಂತಿದೆ ಎಂದೇ ಇದು ಮನುಷ್ಯನ ನಡವಳಿಕೆಗಳನ್ನು ಕುರಿತು ಕೂಡ ಅಷ್ಟೇ ನಿಜವಾಗಿದೆ. ಪರಿಸ್ಥಿತಿ ಹೀಗಿರುವಾಗ, ಪ್ರಾರ್ಥನೆ ಸಲ್ಲಿಸಿ - ಪರಾತ್ಪರ ವಸ್ತುವೊಂದಕ್ಕೆ ನಮ್ಮ ಇಚ್ಛೆಯನ್ನು ನಿವೇದಿಸಿ - ಘಟನೆಗಳ ಮೇಲೆ ಪ್ರಭಾವ ಬೀರಬಹುದೆಂಬುದನ್ನು ಒಬ್ಬ ಸಂಶೋಧಕ ವಿಜ್ಞಾನಿ ಗಂಭೀರವಾಗಿ ಏನೂ ಪರಿಗಣಿಸಲಾರ.

ಆದರೆ ಈ ನಿಯಮಗಳನ್ನು ಕುರಿತ ನಮ್ಮ ವಾಸ್ತವ ಜ್ಞಾನ ಕೇವಲ ಅಪರಿಪೂರ್ಣ ಮತ್ತು ಆಂಶಿಕ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಹೀಗಾಗಿ, ವಸ್ತುತಃ ಮೂಲಾಧಾರವಾದ ಸರ್ವಪರಿಗ್ರಾಹಿ ನಿಸರ್ಗ ನಿಯಮಗಳ ಅಸ್ತಿತ್ವದ ಬಗೆಗಿನ ವಿಶ್ವಾಸವಾದರೂ ಒಂದು ತರಹದ ಭರವಸೆಯ ಮೇಲೆಯೇ ನೆಲೆಸಿರುವುದಾಗಿದೆ. ಇಂತಿದ್ದರೂ ವೈಜ್ಞಾನಿಕ ಸಂಶೋಧನೆಗೆ ಈತನಕ ಒದಗಿರುವ ಯಶಸ್ಸು ಈ ಭರವಸೆಯನ್ನು ಬಲುಮಟ್ಟಿಗೆ ಸಮರ್ಥಿಸಿದೆ.

ಇತ್ತ ವಿಜ್ಞಾನದ ಅನ್ವೇಷಣೆಯಲ್ಲಿ ಗಾಢವಾಗಿ ಮಗ್ನನಾಗಿರುವ ಪ್ರತಿಯೊಬ್ಬನಿಗೂ ವಿಶ್ವದ ನಿಯಮಗಳ ಹಿಂದೆ ಒಂದು ಚೇತನ ಸ್ಪಂದಿಸುತ್ತಿದೆಯೆಂಬ ಭಾವ ದೃಢಪಡುತ್ತದೆ. ಅದೆಂಥ ಚೇತನ? ಮಾನವನಿಗಿಂತಲೂ ಅಧಿಕ ಪಟ್ಟು ಹೆಚ್ಚಾದ್ದು! ತೀರಾ ಪರಿಮಿತ ಸಾಮರ್ಥ್ಯವಂತರಾದ ನಾವು ಮನುಷ್ಯರು ಅದರ

ಸಾನ್ನಿಧ್ಯದಲ್ಲಿ ಅತ್ಯಲ್ಪರು. ಹೀಗೆ ವಿಜ್ಞಾನದ ಅನ್ವೇಷಣೆ ಮುಗ್ಧ ವ್ಯಕ್ತಿಯೊಬ್ಬನ ಧಾರ್ಮಿಕ ಶ್ರದ್ಧೆಗಿಂತ ಪೂರ್ತಿ ಬೇರೆಯೇ ಆದದ್ದು ಎಂದು ತಿಳಿಸುತ್ತಾರೆ.

ಒಂದು ಸಲ; ಅಮೆರಿಕದಲ್ಲಿ ಪ್ರಾಥಮಿಕ ಐದನೆಯ ತರಗತಿಗೆ ಪಾಠ ಹೇಳುತ್ತಿದ್ದ ಉಪಾಧ್ಯಾಯರೊಬ್ಬರಿಗೆ ಒಂದು ಸಮಸ್ಯೆ ಇದಿರಾಯಿತು. ಮನುಷ್ಯರು ಪ್ರಾಣಿ ರಾಜ್ಯಕ್ಕೆ ಸೇರಿದ ಜೀವಿಗಳೆಂಬ ಮಾತಿನಿಂದ ಆತನ ವಿದ್ಯಾರ್ಥಿಗಳಲ್ಲಿ ಬಹುಪಾಲು ಮಂದಿ ದಿಗ್ಭ್ರಾಂತರಾಗಿ ಜಿಗುಪ್ಸೆಗೊಂಡರು. ಅದನ್ನು ಕಂಡ ಆ ಉಪಾಧ್ಯಾಯರು, ಜಗತ್ತಿನ ಮೇಧಾವಿಗಳು ಈ ವಿಷಯದಲ್ಲಿ ಏನು ಹೆಳುವರೋ ಕೇಳೋಣ ಎಂದು ಆ ಮಕ್ಕಳಿಗೆ ಹೇಳಿ ಪ್ರಖ್ಯಾತರಾಗಿದ್ದ ಅನೇಕರಿಗೆ ಪತ್ರಗಳನ್ನು ಬರೆಸಿದರು. ಅಂಥ ಒಂದು ಪತ್ರ ಐನ್‌ಸ್ಟೈನ್‌ರಿಗೂ ಹೋಯಿತು. ಅವರು ಕೂಡಲೇ ಪತ್ರ ಬರೆದು ''ಪ್ರಾಣಿ ಎಂದರೇನು''? ಎಂಬ ಪ್ರಶ್ನೆ ಸರಿಯಾದುದಲ್ಲ. ''ನಾವು ಪ್ರಾಣಿ ಎಂದು ಕರೆಯುವುದು ಎಂಥ ವಸ್ತುವನ್ನು''? ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ. ನಿರ್ದಿಷ್ಟವಾದ ಕೆಲವೊಂದು ಲಕ್ಷಣಗಳು ಒಂದು ವಸ್ತುವಿನಲ್ಲಿ ಕಂಡುಬಂದರೆ, ಅಂಥ ವಸ್ತುವನ್ನು ನಾವು ಪ್ರಾಣಿ ಎನ್ನುತ್ತೇವೆ. ಅದು ಆಹಾರವನ್ನು ಸೇವಿಸುತ್ತದೆ; ತನ್ನಂತೆಯೇ ಇರುವ ತಂದೆ - ತಾಯಿಗಳಿಂದ ಜನ್ಮ ಪಡೆದಿರುತ್ತದೆ; ತನಗೆ ತಾನೇ ಚಲಿಸುತ್ತದೆ; ತನ್ನ ಕಾಲ ಮುಗಿದನಂತರ ಸತ್ತುಹೋಗುತ್ತದೆ. ಆದ್ದರಿಂದಲೇ ತಾನೇ, ನಾವು ಹುಳು, ಕೋಳಿ, ನಾಯಿ, ಕೋತಿ - ಇವುಗಳನ್ನೆಲ್ಲ ಪ್ರಾಣಿಗಳೆಂದು ಕರೆಯುವುದು. ಮನುಷ್ಯರಾದ ನಮ್ಮ ವಿಷಯ? ಮೇಲೆ ಹೇಳಿದ ರೀತಿಯಲ್ಲಿ ಯೋಚಿಸಿ ನೋಡಿ ನೀವೇ ನಿರ್ಧರಿಸಿ ನಮ್ಮನ್ನು ಪ್ರಾಣಿಗಳೆಂದು ಕರೆಯುವುದು ಸರಿಯೇ ಎಂದು, ಎಂದು ಉತ್ತರಿಸಿದ್ದರು.

ಪ್ರಿನ್ಸ್‌ಟನ್‌ನಲ್ಲಿ ಐನ್‌ಸ್ಟೈನ್ ವಾಸಿಸುತ್ತಿದ್ದ ಮನೆಯಿಂದಸ್ವಲ್ಪ ದೂರದಲ್ಲಿದ್ದ ಒಂದು ಮನೆಯಲ್ಲಿ ಒಂದು ಪುಟ್ಟ ಹುಡುಗಿ ಇತ್ತು. ಆ ಹುಡುಗಿ ಆಗಾಗ ಐನ್‌ಸ್ಟೈನ್ ಅವರ ಮನೆಗೆ ಹೋಗಿಬರುತ್ತಿದ್ದ ವಿಷಯ ಹುಡುಗಿಯ ತಾಯಿಗೆ ಗೊತ್ತಾಯಿತು. ಅವಳೊಂದಿಗೆ ಆಡಬಹುದಾದ ಚಿಕ್ಕ ಮಕ್ಕಳು ಯಾರೂ ಐನ್‌ಸ್ಟೈನ್‌ರ ಮನೆಯಲ್ಲಿ ಇರಲಿಲ್ಲ. ಆದ್ದರಿಂದ ತಾಯಿಗೆ ಆಶ್ಚರ್ಯವಾಯಿತು. ಅದರ ಬಗ್ಗೆ ಆಕೆ ಮಗುವನ್ನು ಕೇಳಿದ್ದಕ್ಕೆ ಆ ಮಗು ''ಮನೆಯಲ್ಲಿ ಬಿಡಿಸಲು ಮಾಸ್ಟರು ಲೆಕ್ಕಗಳನ್ನು ಕೊಟ್ಟಿದ್ದರು. ಅವುಗಳ ಪೈಕಿ ಕೆಲವು ಲೆಕ್ಕಗಳು ನನಗೆ ಗೊತ್ತಾಗಲಿಲ್ಲ. ೧೧೨ನೇ ನಂಬರಿನ ಮನೆಯಲ್ಲಿ ಒಬ್ಬ ದೊಡ್ಡ ಗಣಿತ ವಿದ್ವಾಂಸರಿದ್ದಾರೆಂದೂ ಅವರು ತುಂಬಾ ಒಳ್ಳೆಯವರೆಂದು ಯಾರೋ ಹೇಳಿದ್ದರು. ನಾನು ಹೋಗಿ ಆ ಮನೆಯಲ್ಲಿರುವ ತಾತನನ್ನು ಕೇಳಿದೆ ನಿಜವಾಗಿಯೂ ಅವರು ತುಂಬಾ ಒಳ್ಳೆಯವರು. ಬಹಳ ಚೆನ್ನಾಗಿ ಅರ್ಥವಾಗುವಂತೆ ಹೇಳಿಕೊಟ್ಟರು. ಅಷ್ಟೇ ಅಲ್ಲ, ಕಷ್ಟವಾದ ಲೆಕ್ಕಗಳೇನಾದರೂ ಇದ್ದರೆ ಯಾವಾಗ ಬೇಕಾದರೂ ಬಾ ಅಂದರು. ಅದಕ್ಕೆ ನಾನು ಆಗಾಗ ಹೋಗಿ ಹೇಳಿಸಿಕೊಂಡು ಬರುತ್ತೇನೆ'' ಎಂದಿತು.

ತಾಯಿ ತನ್ನ ಮಗುವಿನ ದಿಟ್ಟತನವನ್ನು ಕಂಡು ಆಶ್ಚರ್ಯಪಟ್ಟಳು. ಐನ್‌ಸ್ಟೈನ್ ಏನೆಂದುಕೊಂಡರೋ ಎಂದು ಗಾಬರಿಗೊಂಡು ಅವರ ಕ್ಷಮೆಕೇಳಲು ಹೋದಳು. ಅದಕ್ಕೆ ಐನ್‌ಸ್ಟೈನ್, ''ಇದಕ್ಕಾಗಿ ನೀನು ಕ್ಷಮೆ ಕೇಳುವ ಅಗತ್ಯವಿಲ್ಲ. ನಿನ್ನ ಮಗಳು ನನ್ನಿಂದ ಕಲಿತುದಕ್ಕಿಂತ ಹೆಚ್ಚಾಗಿ ನಾನು ಆ ಮಗುವಿನಿಂದ ಕಲಿತಿದ್ದೇನೆ'' ಎಂದರು.

* * *

ಆಲ್ಬರ್ಟ್ ಐನ್‌ಸ್ಟೈನ್‌ರು ಸಾಪೇಕ್ಷತಾವಾದವನ್ನು ಮಂಡಿಸಿದನಂತರ ಪ್ರಪಂಚದ ತತ್ವಶಾಸ್ತ್ರ ಕ್ಷೇತ್ರದಲ್ಲಿ ಹೊಸ ಆಲೋಚನೆಗಳ ಮಹಾಪೂರವೇ ಹರಿಯಿತು. ಸಾಮಾನ್ಯ

ಅನುಭವಗಳಿಗೆ ಹಾಗೂ ಕಲ್ಪನೆಗಳಿಗೆ ಸುಲಭವಾಗಿ ಎಟುಕದ ಅನೇ ವಿಚಿತ್ರ ತೀರ್ಮಾನಗಳು ಸಾಪೇಕ್ಷತಾವಾದದಿ ಹೊರಬೀಳುವುದರಿಂದ ಕೆಲವರು ಈ ಜಗತ್ತು ಸತ್ಯವಲ್ಲ. ಅದು ಕೇ ಭ್ರಮೆ ಎಂದು ಸಾರಿದರು. ಮತ್ತೆ ಕೆಲವರು ನೇರ ಅನುಭವಕ್ಕೆ ಬರು ಜಗತ್ತಿನ ಚಿತ್ರವನ್ನು ಸಾಪೇಕ್ಷತಾವಾದ ಪರಿಷ್ಕರಿಸುತ್ತದೆಯೇ ವಿ ಜಗತ್ತಿನ ಯಥಾರ್ಥತೆಯನ್ನು ಅದು ಎಂದಿ ಅಲ್ಲಗಳೆಯುವುದಿಲ್ಲವೆಂದು ಸಮಾಧಾನಕಿದರು.

ಐನ್‌ಸ್ಟೈನ್‌ರು ಈ ವಿಷಯದ ಬಗ್ಗೆ ತಮ್ಮ ಅಭಿಪ್ರಾ ತಿಳಿಸುತ್ತ "ಅಗೋ ಅಲ್ಲಿ ಹೊರಗಡೆ ಇದೆ, ಆ ಅಗಾಧವಾದ ಜಗ ಮನುಷ್ಯ ಜೀವಿಗಳಾದ ನಮ್ಮನ್ನು ಲೆಕ್ಕಿಸದೆ ಸ್ವತಂತ್ರವಾಗಿರುವ ಅ ನಮ್ಮ ಮುಂದೆ ಒಂದು ಮಹಾ ಒಗಟಿನಂತೆ ನಿಂತಿ ಭಾಗಶಃವಾಗಿಯಾದರೂ ಅದು ನಮ್ಮ ಪರಿಶೀಲನೆಗೆ ಮತ್ತು ಚಿಂತ ಎಟಕುತ್ತದೆ. . . . ಆದರೆ ಈ ಸ್ವರ್ಗದ ಹಾದಿ ಧಾರ್ಮಿಕ ಸ್ವರ್ಗ ಹಾದಿಯಂತೆ ಹಿತಕರವಾಗಿಲ್ಲ, ನಿಜ. ಆದರೆ ಅದರ ವಿಶ್ವಾಸಾರ್ಹವಾಗಿ ಕಂಡುಬಂದಿದೆ. ಈ ಹಾದಿಯನ್ನು ಆಯ್ದುಕೊಂ ಬಗೆಗೆ ನಾನೆಂದೂ ವಿಷಾದಪಟ್ಟಿಲ್ಲ." ಎಂದರು. ಜಗತ್ತು ಸತ್ಯ ಮ ನಿಯಮಬದ್ಧ ಎನ್ನುವುದು ಇವರ ಬಲವಾದ ನಂಬಿಕೆಯಾಗಿತ್ತು.

"ದೇವರು ಸುಲಭವಾಗಿ ಸಿಕ್ಕದಿರಬಹುದು. ಆದರೆ ಅವ ಮತ್ಸರ ಉಳ್ಳವನಲ್ಲ". [God may be subtle, but n malicious] ಐನ್‌ಸ್ಟೈನ್‌ರ ದೃಷ್ಟಿಯಲ್ಲಿ ದೇವರೆಂದರೆ ನಿಸ ಮತ್ತು ಅದರಲ್ಲಿ ಕಂಡುಬರುವ ನಿಯಮಬದ್ಧತೆ.

ಐನ್‌ಸ್ಟೈನ್‌ರಿಗೆ ಮಾನವ ಪ್ರೇಮದಿಂದಾಗಿ ಅಂತರರಾಷ್ಟ್ರೀ ಶಾಂತಿ ಬಹಳ ಪ್ರಿಯವಾದ ಅವಶ್ಯಕತೆಯಾಗಿತ್ತು. ಇವರ ಶಾಂತಿವಾ ಆಳವಾದ ವಿಚಾರವಾದದಿಂದ ಹುಟ್ಟಿದ್ದಲ್ಲ ಎನ್ನುವ ಅಭಿಪ್ರಾಯವಿ

ಮೊದಲ ಪ್ರಪಂಚ ಯುದ್ಧವನ್ನು ವಿರೋಧಿಸಿ ಘೋಷಣೆ ಹೊರಡಿಸಿದವರು ಹಾಗೂ ಅಣುಬಾಂಬಿನ ಆವಿಷ್ಕಾರದನಂತರ ಶಾಂತಿಗಾಗಿ ಪ್ರಪಂಚ ಸರ್ಕಾರವನ್ನು ಪ್ರತಿಪಾದಿಸಿದ್ದು ಐನ್‌ಸ್ಟೈನ್‌ರು ಹೀಗಿರುವಾಗ ಅವರು ಶಾಂತಿ ಪ್ರಿಯರಲ್ಲ ಎಂದು ಪ್ರತಿಪಾದಿಸುವವರ ಅಭಿಪ್ರಾಯ ಎಷ್ಟು ಸರಿ ಎಂದು ಪ್ರಶ್ನಿಸಬೇಕಾಗುತ್ತದೆ.

ಆಲ್ಬರ್ಟ್ ಐನ್‌ಸ್ಟೈನ್‌ರ ಸಮೀಪವರ್ತಿಯಾಗಿದ್ದ ಇನ್‌ಫೆಲ್ಡ್ ಅವರು ತಮ್ಮ ಸ್ನೇಹಿತರ ಬಗ್ಗೆ ಬರೆಯುತ್ತ "ಐನ್‌ಸ್ಟೈನ್‌ರಷ್ಟು ಏಕಾಂಗಿಯಾಗಿದ್ದ ಮತ್ತು ನಿರ್ಲಿಪ್ತರಾಗಿದ್ದ ಬೇರೊಬ್ಬರನ್ನು ನಾನು ಕಂಡಿಲ್ಲ. ಅಸಮಾನ್ಯವಾದ ಅವರ ದಯಾಪರತೆ, ನಿಷ್ಕಲ್ಮಷವಾದ ಸಜ್ಜನಿಕೆ, ವ್ಯಕ್ತಿಗಳ ಬಗೆಗೂ ಸಾಮಾಜಿಕ ವಿಷಯಗಳ ಬಗೆಗೂ ಅವರ ನೇರವಾದ ನಡವಳಿಕೆ ಇವೆಲ್ಲವೂ ಮೇಲುನೋಟಕ್ಕೆ ಹಾಗೆ ಕಾಣುತ್ತಿರಲಿಲ್ಲವಾದರೂ ಸಂಪೂರ್ಣವಾಗಿ ನಿರ್ಲಿಪ್ತತೆಯಿಂದ ಕೂಡಿದ್ದವು. ಅವರ ಹೃದಯ ಬಿರಿಯುತ್ತಿರಲಿಲ್ಲ. ಅವರ ಕಣ್ಣು ನೀರು ಸುರಿಸುತ್ತಿರಲಿಲ್ಲ. ಆದರೆ ಅವರ ಕೃತಿಯಾದರೋ ಹೃದಯ ಬಿರಿಯುವವನ, ಕಣ್ಣಿನಲ್ಲಿ ನೀರು ಸುರಿಸುವವನ ಕೃತಿಯಾಗಿರುತ್ತಿತ್ತು." ಐನ್‌ಸ್ಟೈನ್‌ರು ಎಷ್ಟು ದೊಡ್ಡ ವಿಜ್ಞಾನಿಯಾಗಿದ್ದರೋ ಅಷ್ಟೇ ದೊಡ್ಡ ಮಾನವ ಪ್ರೇಮಿಯೂ ಆಗಿದ್ದರು. ಅವರ ಬದುಕಿನ ತೋಟದಲ್ಲಿ ಬಣ್ಣ ಬಣ್ಣದ ಹೂವುಗಳು ಎಷ್ಟೋ?

ಅಸ್ತಂಗತನಾದ ಸೂರ್ಯ

ಆಲ್ಬರ್ಟ್ ಐನ್‌ಸ್ಟೈನ್‌ರ ಮೊದಲ ಹೆಂಡತಿ ಮಿಲೇವ ಮಾರಿಕ್ ಸ್ವಿಟ್ಸರ್‌ಲೆಂಡನ್ನು ಬಿಟ್ಟು ಹೊರಗೆ ಬರಲೇ ಇಲ್ಲ. ಐನ್‌ಸ್ಟೈನ್‌ರಿಗೆ ಹುಟ್ಟಿದ ಈಕೆಯ ಮೊದಲ ಮಗ ಕ್ಯಾಲಿಫೋರ್ನಿಯಾ ತಾಂತ್ರಿಕ ಶಾಲೆಯಲ್ಲಿ ಪ್ರಾಧ್ಯಾಪಕನಾಗಿದ್ದ. ಎರಡನೆ ಮಗ ಹುಚ್ಚು ಹಿಡಿದು


ಸಾಮಾಜಿಕ ಚಿಂತನ ಮಾಲೆ